ಅಲ್ಲದೇ, ಇಂತಹ ಆಮಿಷಗಳಿಗೆ ಒಳಗಾಗದೇ, ಯಾವುದೇ ಆತಂಕವಿಲ್ಲದೇ ಪರೀಕ್ಷೆಗಳಲ್ಲಿ ಬರೆಯುವಂತೆ ವಿದ್ಯಾರ್ಥಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಈ ಪ್ರಶ್ನೆ ಪತ್ರಿಕೆಯ ಒರಿಜಿನಲ್ ಮತ್ತು ಪೊಲೀಸರು ಕಂಡುಹಿಡಿದಂಥ ಮ್ಯಾಟರ್ ಕೂಡಾ ನನ್ನಲ್ಲಿ ಇದೆ. ಫಾರ್ ಯುವರ್ ಇನ್‌ಫರ್ಮೇಷನ್ ಇದು ಒರಿಜಿನಲ್ ಇದು ನಕಲಿ (ಎರಡನ್ನೂ ತೋರಿಸಿದರು) ಪ್ರಶ್ನೆಗಳಲ್ಲಿ ಅದಕ್ಕೂ ಇದಕ್ಕೂ ಹೋಲಿಕೆ ಇಲ್ಲ. ಆದರೆ ಜನಗಳು ಏನು ಮಾಡುತ್ತಾರೆ ಎಂದರೆ ಬ್ಲಾಕ್ ಮೇಲ್ ಮಾಡುತ್ತಾರೆ. ಒಂದು ಗ್ಯಾಂಗ್ ಇದೆ. ಬೇರೆ ಬೇರೆ ಸುಳಿವೂ ಕೂಡಾ ಸಿಕ್ಕಿದೆ. ಕಾರನ್ನೂ ಕೂಡಾ ನಾವು ಅಂದಾಜು ಮಾಡಿ ಇಟ್ಟಿದ್ದೇವೆ. ಯಾವುದೇ ಜಾಲವನ್ನು ಉಪಯೋಗ ಮಾಡಿಕೊಂಡು ಮಕ್ಕಳನ್ನು ಹೇದರಿಸಿ ಲಾಭ ಮಾಡಬೇಕೆಂದಿರುವವರನ್ನು ನಾವು ಗಮನದಲ್ಲಿ ಇಟ್ಟಿದ್ದೇವೆ.

ಆ ಜಾಲ ಏನು ಇದೆ ಆ ಜಾಲವನ್ನು ಹೊಡೆಯತಕ್ಕಂಥ ಪ್ರಯತ್ನ ನಾವು ಈಗಾಗಲೇ ಮಾಡಿ ನಮ್ಮ ಬೆಂಗಳೂರು ಪೊಲೀಸ್ ಕಮೀಷನರ್‌ರವರ ಜೊತೆಯಲ್ಲಿ ನಾನು ಈಗಾಗಲೆ ಮಾತನಾಡಿದ್ದೇನೆ. ಮತ್ತು ಇದರ ಬಗ್ಗೆ ಕೆಲವು ವಿಚಾರಗಳು ತಿಳಿದಿದೆ. ಇನ್ನು ನಾವು ದಾಖಲೆಗಳನ್ನು ಅಥವಾ ಎವಿಡೆನ್ಸ್ ಹಿಡಿದು ಕ್ಲೂ ಹಿಡಿದು ಯಾರ್‍ಯಾರು ಇದರಲ್ಲಿ ಒಳಗಾಗಿದ್ದಾರೆ ಅಧ್ಯಾಪಕರು ಇರಲಿ ಯಾರೇ ಆಗಿರಲಿ ಯಾರೇ ಇದ್ದರೂ ಕೂಡ ನಿರ್ದಾಕ್ಷಿಣ್ಯವಾಗಿ ಹಿಡಿದು ಬಲಿ ಹಾಕತಕ್ಕಂಥ ಕೆಲಸ ಸರ್ಕಾರ ಮಾಡುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಈ ಜಾಲದ ಬಗ್ಗೆ ತಾವು ಜಾಗರೂಕತೆಯಿಂದ ಎಚ್ಚರಿಕೆ ವಹಿಸಬೇಕು. ಹತ್ತಾರು ವರ್ಷಗಳಿಂದ ಈ ರೀತಿಯಾದಂಥ ವರ್ತನೆ ನಡೆಯುತ್ತಿದೆ. ಇದೇನು ಹೊಸದಲ್ಲ. ತಾವು ತಕ್ಷಣ ಶೀಘ್ರವಾಗಿ ಎಚ್ಚರಿಕೆ ವಹಿಸಿ ಮಾಡಿರತಕ್ಕಂಥ ಕೆಲಸ ನಿಜವಾಗಿಯೂ ಸಂತೋಷಪಡತಕ್ಕಂಥಾ ವಿಷಯ. ಇದು ನಿಜವಾಗಿ ಕಣ್ಣು ತಪ್ಪಿಸಿ ನಡೆದಿರತಕ್ಕಂಥಾದ್ದು ಇದು ಬೆಂಗಳೂರಿನಲ್ಲಿ ಮಾತ್ರವಲ್ಲ ಇಡೀ ರಾಜ್ಯದಲ್ಲಿ ನಡೆಯುತ್ತಿದೆ. ರಾಜ್ಯದಲ್ಲಿ ಇದು ಒಂದು ವ್ಯಾಪಾರ ಆಗಿದೆ. ಒಂದು ಪೇಪರ್‌ಗೆ ಇಂತಿಷ್ಟು ಎಂದು ವ್ಯಾಪಾರ ನಡೆಯುತ್ತಿದೆ. ಲಕ್ಷಾಂತರ ರೂಪಾಯಿಗಳ ಸಂಪಾದನೆ ನಡೆಯುತ್ತಿದೆ. ಆದ್ದರಿಂದ ಇದು ಕೇವಲ ಬರೀ ಹೊರಗಿನ ಜನಗಳ ಅಲ್ಲ ಸರ್ಕಾರದ ಅಧಿಕಾರಿಗಳು ಒಳಗಡೆ ಕೆಲವರು ಇದ್ದಾರೆ ಎನ್ನುವ ಅನುಮಾನ ಜಾಸ್ತಿಯಾಗುತ್ತಿದೆ. ಈ ಬಗ್ಗೆ ಯಾವುದೇ ಉನ್ನತ ಮಟ್ಟದವರು ಇರಲಿ ಅವರ ಬಗ್ಗೆ ಸರ್ಕಾರ ತೀವ್ರ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ : ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಸಿಂಧ್ಯಾರವರು ಕೊಟ್ಟ ಸಲಹೆ ಪ್ರಕಾರ ಅತ್ಯಂತ ಹೆಚ್ಚಿನ ನಿಗಾ ಮತ್ತು ಜಾಗ್ರತೆ ವಹಿಸುತ್ತೇವೆ.

ಉಪಾಧ್ಯಕ್ಷರು : ಆಯವ್ಯಯದ ಮೇಲೆ ಅರ್ಧಗಂಟೆ ಚರ್ಚೆ ಮುಂದುವರಿಸಿ ಆಮೇಲೆ ಅರ್ಧಗಂಟೆ ಚರ್ಚೆ ತೆಗೆದುಕೊಳ್ಳೋಣ.

ವಿತ್ತೀಯ ಕಾರ್ಯಕಲಾಪಗಳು

1991-92ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು 1991-92 ಆಯವ್ಯಯದ 94 ಪುಟಗಳ ಭಾಷಣವನ್ನು ಸದನದಲ್ಲಿ ಮಂಡಿಸಿದ್ದಾರೆ. ಇದರಲ್ಲಿ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಇಬ್ಬರು ಹಣಕಾಸು ಸಚಿವರ ಭಾಷಣವನ್ನು ನಾವು ಇಲ್ಲಿಯವರೆಗೆ ಕೇಳಿದ್ದೇವೆ. ಅಂದರೆ

ಒಂದು ವರ್ಷ ಮೂರು ತಿಂಗಳಿನಿಂದೀಚೆಗೆ ಈ ಇಬ್ಬರು ಹಣಕಾಸು ಸಚಿವರು ಆಡಳಿತ ಪಕ್ಷವಾದ ಕಾಂಗ್ರೇಸ್ ಪಕ್ಷಕ್ಷೇ ಸೇರಿದಂಥವರು. ಈ ಇಬ್ಬರ ಭಾಷಣದಲ್ಲಿ ಅನೇಕ ವ್ಯತ್ಯಾಸಗಳಿವೆ. ಅನೇಕ ಏರುಪೇರುಗಳಿವೆ. ಇದು ಒಂದು ರೀತಿಯ ದ್ವಂದ್ವವನ್ನು ನಿರ್ಮಾಣ ಮಾಡಿದೆ. ಮಾನ್ಯ ಬಂಗಾರಪ್ಪನವರು ಮುಖ್ಯ ಮಂತ್ರಿಗಳಾದ ನಂತರ ಅವರೇ ಮಂಡಿಸಿದಂಥ ಆಯವ್ಯಯ ಇದು. ಇದರ ಜೊತೆಗೆ ಪೂರಕ ಅಂದಾಜುಗಳ ಬಗ್ಗೆಯೂ ಚರ್ಚೆ ಮಾಡುತ್ತಿದ್ದೇವೆ. ಇದರಲ್ಲಿ ನನಗನಿಸುತ್ತದೆ, ಒಂದು ಕಾಲದಲ್ಲಿ ಆಯವ್ಯಯದ ಮೇಲೆ ಭಾಷಣ ನಡೆಯುತ್ತದೆಂದರೆ ಇಡೀ ಗ್ಯಾಲರಿ ತುಂಬಿ ತುಳುಕುತ್ತಿದ್ದಂಥ ದಿನಗಳನ್ನು ನಾವು ನೋಡಿದ್ದೇವೆ. ಇಡೀ ಸದನದಲ್ಲಿ ಒಂದು ಖುರ್ಚಿಯೂ ಖಾಲಿ ಇಲ್ಲದೇ ಇರತಕ್ಕಂಥ ದಿನವನ್ನು ನೋಡಿದ್ದೇವೆ ಮತ್ತು ಈ ಅಧ್ಯಕ್ಷ ಪೀಠದಲ್ಲಿ ಮಹೋನ್ನತವಾದಂಥ ವ್ಯಕ್ತಿಗಳು ಕುಳಿತಿದ್ದಂಥಾ ದಿನಗಳನ್ನು ನೋಡಿದ್ದೇವೆ. ಅಧ್ಯಕ್ಷ ಪೀಠದಲ್ಲಿ ಮೇರು ಪರ್ವತದಂತೆ ಕುಳಿತುಕೊಳ್ಳುತ್ತಿದ್ದ ಮಾನ್ಯ ವೈಕುಂಠ ಬಾಲಿಗಾರವರನ್ನು ನೋಡಿದ್ದೇವೆ. ಆದರ್ಶ ಪುರುಷರಾದಂಥ ಶ್ರೀ ಕೃಷ್ಣಾರವರನ್ನು ನೋಡುತ್ತಿದ್ದೇವೆ. ತಮ್ಮಂಥಾ ಸಹೃದಯ ಮಾತೆಯರನ್ನು ನೋಡುತ್ತಿದ್ದೇವೆ.

ಉಪಾಧ್ಯಕ್ಷಣಿಯವರು : ಬಹಳ ಪೀಠಿಕೆ ಹಾಕುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಬೇಡ ಎಂದು ಹೇಳಿದರೆ ಕುಳಿತುಕೊಂಡುಬಿಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಪೀಠಿಕೆ ಹಾಕುವುದಕ್ಕೆ ನೀವು 10 ನಿಮಿಷ ತೆಗೆದುಕೊಂಡಿದ್ದೀರಿ. ನಿಮ್ಮ ಭಾಷಣ ಮುಂದುವರಿದರೆ ರಾತ್ರಿ ಹತ್ತು ಗಂಟೆಯಾದರೂ ಮುಗಿಯುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಣಿಯವರೆ, ಈ ಆಯವ್ಯಯವನ್ನು ನೋಡಿದಾಗ ನನಗನಿಸುತ್ತದೆ, ರಾತ್ರಿ ಕನಸಿನಲ್ಲಿ ಜೇನುತುಪ್ಪವನ್ನು ಸವಿದ ಹಾಗೆ ಇದೆ ಅಂದರೆ, ಯಾರು ಕನಸಿನಲ್ಲಿ ಜೇನು ತುಪ್ಪವನ್ನು ಸವಿದಿರುತ್ತಾರೋ, ಅದರ ರುಚಿಯನ್ನು ಅನುಭವಿಸಿರುತ್ತಾರೋ ಅವರು ಬೆಳಕು ಹರಿದ ಮೇಲೇ ರಸ್ತೆಗೆ ಬಂದ ಮೇಲೆ ಹಸಿಮೆಣಸಿನಕಾಯಿ ತಿನ್ನಿಸಿ ಹುಣಿಸಿ ಚಬ್ಬೆ ತೆಗೆದುಕೊಂಡು ಚಾವಡಿ ಮಾರಮ್ಮನ ಗುಡಿ ಮುಂದೆ ಹೊಡೆದರೆ ಎಷ್ಟು ಆನಂದವಾಗುತ್ತದೋ ಅಂಥಾ ಪರಿಸ್ಥಿತಿ ಇವತ್ತು ಇದೆ. 100 ಹಳ್ಳಿಗಳಲ್ಲಿ ಈ ಪರಿಸ್ಥಿತಿ ಉದ್ಭವ ಆಗಿದೆ. ಇದನ್ನು ವ್ಯವಸ್ಥೆ ಮಾಡುವುದಕ್ಕೆ ಒಂದು ಪರಿಣಾಮಕಾರಿಯಾದ ಕಾರ್ಯಕ್ರಮವನ್ನು ಇವತ್ತಿನವರೆಗೆ ಯಾರೂ ಹಾಕಿಕೊಂಡಿಲ್ಲ. ಹಿಂದಿನ ಸರ್ಕಾರದಲ್ಲಿ ಈ ಬಗ್ಗೆ ನಾನು ಕೇಳಿದಾಗ ಒಂದು ಮಂಡಲಕ್ಕೆ ಒಂದು ಶೌಚ ಸ್ಥಳಗಳನ್ನು ಅಂದರೆ ಶೌಚಾಲಯಗಳನ್ನು ಕೊಡುತ್ತೇವೆ ಎಂದು ಹೇಳಿದ್ದರು. ಒಂದು ಮಂಡಲಕ್ಕೆ ಎಷ್ಟು ಹಳ್ಳಿಗಳು ಬರುತ್ತವೆ? ಎಲ್ಲಾ ಹೆಣ್ಣುಮಕ್ಕಳು ಕನಿಷ್ಟ 30ರಿಂದ 40 ಕಿಲೋ ಮೀಟರ್ ಹಳ್ಳಿಗಳು ಸೇರತಕ್ಕಂಥ ಒಂದು ಪ್ರದೇಶಕ್ಕೆ ಹೋಗಬೇಕು. ಇದಕ್ಕೆ ಯಾರು ಕಾರಣ? ನಮ್ಮ ಆಯವ್ಯಯ. ಈ ರೀತಿ ನಾವು ಆಯವ್ಯಯವನ್ನು ನಿರ್ಮಾಣ ಮಾಡುತ್ತಿದ್ದೇವೆ. ಎಲ್ಲವೂ ಪಟ್ಟಣದ ಬಹುತೇಕ ಜನರಿಗೆ. ಪಟ್ಟಣದ ಜನತೆಯನ್ನು ವಿರೋಧ ಮಾಡುವುದಕ್ಕೆ ಹೋಗುತ್ತಿಲ್ಲ. ಅವರು ಅಭಿವೃದ್ಧಿಯಲ್ಲಿ ಬೆಳೆಯಲಿ, ಅಭಿವೃದ್ಧಿಯಲ್ಲಿ ಮುಂದೆ ಬರಲಿ.

ಆದರೆ ಅಭಿವೃದ್ಧಿ ಬುನಾದಿ ಯಾರು? ಈ ಹಳ್ಳಿ ಜನರು. ಗ್ರಾಮೀಣ ಮಹಿಳೆಯರ ಕಣ್ಣೀರಿನ ಕಥೆ ಪ್ರತಿನಿತ್ಯತ ಕಥೆ ಆಗಿದೆ. ಈ ಬಗ್ಗೆ ಸರ್ಕಾರ ಪರಿಣಾಮಕಾರಿಯಾದಂತಹ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇವತ್ತು ಶೌಚ ಸ್ಥಳಗಳನ್ನು ಕಟ್ಟಿಸಬೇಕಾದರೆ ಕೇವಲ ಒಂದು ಗೋಡೆ ಹಾಕಿ ಒಂದು ಬಾಗಿಲನ್ನು ನಿಲ್ಲಿಸಿದರೆ ಅದು ಸರಿಹೋಗುವುದಿಲ್ಲ. ತಾವು ಕೆಲವು ಕಂಟ್ರಾಕ್ಟರ್‌ಗಳು ಹಳ್ಳಿಗಳಲ್ಲಿ ಕಟ್ಟಿರತಕ್ಕಂಥ ಶೌಚಾಲಯವನ್ನು ನೋಡಿರಬಹುದು. ಅಲ್ಲಿ ನೀರಿನ ವ್ಯವಸ್ಥೆಯು ಇಲ್ಲ, ಒಳಚರಂಡಿ ವ್ಯವಸ್ಥೆ ಇಲ್ಲ, ಇಂಥ ಶೌಚಾ ಸ್ಥಳಗಳು ಯಾರಿಗೆ ಬೇಕಾಗಿದೆ?

ನೀರು ಮತ್ತು ಒಳಚರಂಡಿ ವ್ಯವಸ್ಥೆ ಇರಬೇಕು, ಯಾರೋ ಮಂಡಳ ಪಂಚಾಯತಿ ಪ್ರಧಾನರು, ಜಿಲ್ಲಾಪರಿಷತ್ತಿನ ಸದಸ್ಯರು, ತೀರಾ, ಮಂತ್ರಿಗಳು ಹೋಗಿ ಪ್ರಾರಂಭೋತ್ಸವ ಮಾಡಿ ಕಟ್ಟಡ ಕಟ್ಟಿದ್ದೇವೆ ಎಂದು ಬರುತ್ತೇವೆ. ಅದರ ಹಣೇಬರಹ ತಿಳಿಯಲು ಆದಾದ ಒಂದು ತಿಂಗಳಿನ ಮೇಲೆ ಹೋಗಿ ನೋಡಬೇಕು. ಬಾಗಿಲು ಇರುವುದಿಲ್ಲ, ಕಸಕಡ್ಡಿಗಳನ್ನು ಎಲ್ಲಿ ಹಾಕಬೇಕೆಂಬ ವ್ಯವಸ್ಥೆ ಇರುವುದಿಲ್ಲ, ಇದನ್ನೆಲ್ಲಾ ಸರಿಪಡಿಸುವುದಕ್ಕೆ ನಿಮ್ಮಲ್ಲಿ ಪರಿಣಾಮಕಾರಿಯಾದಂಥ ಯೋಜನೆಗಳು ಏನಿವೆ?.....

ಡಾ॥ ಎನ್.ಬಿ. ನಂಜಪ್ಪ : ಈ ಶೌಚಾಲಯಗಳ ಬಗ್ಗೆ ನೀವು ಹೇಳತಕ್ಕಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಈ ಶೌಚಾಲಯಗಳನ್ನು ಉಪಯೋಗಿಸತಕ್ಕಂಥಾದ್ದು ಮಂಚೆಯಿಂದ ನಮ್ಮ ದೇಶದಲ್ಲಿ ಬರಲಿಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ಬಂದಾಯಿತು. ಪಾಶ್ಚಿಮಾತ್ಯ ದೇಶಗಳಲ್ಲಿರುವುದು ಹಳ್ಳಿಗಾಡುಗಳಲ್ಲಿ ಬರುವುದಕ್ಕೆ ಹೇಗೆ ಪ್ರಾರಂಭವಾಯಿತು ಎಂಬ ಬಗ್ಗೆ ತಮ್ಮಲ್ಲಿ ಮಾಹಿತಿಗಳು ಇಲ್ಲದಿದ್ದರೆ ನಾನು ಅದನ್ನು ಹೇಳಬಯಸುತ್ತೇನೆ. ಪಾಶ್ಚಿಮಾತ್ಯ ದೇಶಗಳಲ್ಲಿ ಬಹಳ ಚಳಿಹವಾಮಾನ ಇದ್ದ ಕಾರಣ, ಆಗ ಅಲ್ಲಿ ಹೊರಗೆ ಬರಲು ಆಗದಿದ್ದ ಕಾರಣ ಮನೆಯ ಒಳಗಡೆ ಸಣ್ಣ ಗುಂಡಿಯನ್ನು ಮಾಡಿಕೊಂಡು ಮಣ್ಣನ್ನು ಮುಚ್ಚತಕ್ಕಂಥ ಒಂದು ವ್ಯವಸ್ಥೆ ಇತ್ತು. ಅನಂತರ ಮರದ ಗಡ್ಡೆಯನ್ನು ತಂದು ಅದಕ್ಕೆ ಒಂದು ತೂತನ್ನು ಮಾಡಿ ಒಂದು ಮುಚ್ಚಳವನ್ನು ಮಾಡಿ ಮನೆಯ ಒಳಗಡೆಯೇ ಅದರಲ್ಲಿ ಇಟ್ಟುಕೊಂಡು ಉಪಯೋಗಿಸತಕ್ಕಂಥ ಒಂದು ವ್ಯವಸ್ಥೆ ಆಯಿತು. ಆಮೇಲೆ ಅದಕ್ಕೆ ನಾಲ್ಕು ಗೋಡೆಗಳನ್ನು ಕಟ್ಟಿ ಅದಕ್ಕೆ ಮುಚ್ಚತಕ್ಕಂಥ ವ್ಯವಸ್ಥೆಯೂ ಆಯಿತು. ಹೀಗೆ ಕ್ರಮೇಣ ಸುಧಾರಣೆಯಾಗುತ್ತಾ ಬಂದು ಈಗಿನ ಲ್ಯಾವಟ್ರಿ ಇತ್ಯಾದಿ ಬಂದಿರುವುದು. ಈಗ ನೀವು ಶೌಚಾಲಯಗಳನ್ನು ಹಳ್ಳಿಗಾಡಿನಲ್ಲಿ ಮಾಡದೇ ಹೋದರೆ, ಅದನ್ನು ನಮ್ಮ ಮಕ್ಕಳಿಗೆ ಹೇಗೆ ಉಪಯೋಗಿಸಬೇಕೆಂಬುದನ್ನು ಕಲಿಸದೇ ಹೋದರೆ What is the use of introducing it in rural areas and when are you going to introduce? ನಂತರ ಅದರ ಬಗ್ಗೆ ಹಾಗಾಗುತ್ತದೆ, ಹೀಗಾಗುತ್ತದೆ, ಅದನ್ನು ಉಪಯೋಗಿಸುವುದಕ್ಕೆ ಬರುವುದಿಲ್ಲ, ಅದಕ್ಕೆ ಮಣ್ಣು ಮುಚ್ಚುತ್ತಾರೆ ಎನ್ನುವುದಕ್ಕಿಂತ We must go for that ಅದನ್ನು ಸರಿಯಾದ ರೀತಿಯಲ್ಲಿ ಮ್ಯಾನೇಜ್ ಮಾಡುವುದಕ್ಕೆ ನೋಡಿಕೊಳ್ಳತಕ್ಕಂಥದ್ದು ನಮ್ಮ ಕರ್ತವ್ಯವೆಂದು ಮಾಡಿ, ಅದನ್ನು ರೂರಲ್ ಏರಿಯಾಕ್ಕೆ ತೆಗೆದುಕೊಂಡು ಹೋಗಬೇಕೇ ವಿನಹ ಇದರ ಬಗ್ಗೆ ನಾವು ಏನೂ ಮಾಡದೇ, ಅದು ಬಿದ್ದುಹೋಗಿ ಬಿಟ್ಟರೆ ಏನು ಮಾಡುವುದು? ಎಂದು ವಿಚಾರ ಮಾಡುವುದಲ್ಲ. ಈಗ ಏನಾಗಿದೆ ಅಂದರೆ ಹಳ್ಳಿಗಾಡಿನಲ್ಲಿ ಮಿಡ್ಲ್ ಸ್ಕೂಲ್, ಹೈಸ್ಕೂಲ್‌ಗಳಲ್ಲಿ ಬಹಳ ತೊಂದರೆ ಇದೆ, ಅಂಥ ಕಡೆಗಳಲ್ಲಿ ಶೌಚಾಲಯಗಳನ್ನು ಮಾಡಲೇಬೇಕು. ಅದಕ್ಕೆ ಸರಿಯಾದ ವ್ಯವಸ್ಥೆಯಾಗಬೇಕು.

ಶ್ರೀ ವಾಟಾಳ್ ನಾಗರಾಜ್ : ಶೌಚಾಲಯಗಳ ಬಗ್ಗೆ ಸರಕಾರದವರು ಸರಿಯಾದ ಒಂದು ಚಿಂತನೆಯನ್ನು ಮಾಡಬೇಕು. ಇದು ಹಳ್ಳಿಗಾಡಿನಲ್ಲಿ, ಅದರಲ್ಲೂ ಸಹ ದುರ್ಬಲ ವರ್ಗದವರು ಎಂದು ತಾವುಗಳು ಏನು ಹೇಳುತ್ತೀರಿ, ಈ ಜನರಿಗೆ ತೊಂದರೆಯಾಗಿರತಕ್ಕಂಥ ವಿಚಾರವೂ ಇದೆ. ಬಹಳ ಶ್ರೀಮಂತರಾಗಿರುವವರು ಮನೆಕಟ್ಟಿಸಿಕೊಂಡು ಅಲ್ಲಿ ಹಿಂದುಗಡೆ ಒಂದು ಗುಂಡಿ ಹೊಡೆಸಿಕೊಂಡಿರುತ್ತಾನೆ, ಅಥವಾ ವ್ಯವಸ್ಥಿತವಾಗಿ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾನೆ, ಆದರೆ ಸಾಮಾನ್ಯ ಜನರ ಗತಿ ಏನು? ಗುಡಿಸಲುಗಳಲ್ಲಿ, ಕೇರಿಗಳಲ್ಲಿ, ಬೀದಿಗಳಲ್ಲಿ ವಾಸ ಮಾಡುತ್ತಿದ್ದಾರಲ್ಲ? ಅವರ ಗತಿ ಏನು? ಅವರ ಮನೆಗಳೇ ಶೌಚಾಲಯಗಳಿದ್ದ ಹಾಗೆ ದುರವಸ್ಥೆಯಲ್ಲಿರುವುದನ್ನು ನಾವು ನೋಡಿದ್ದೇವೆ. ನಾನು ಹಳ್ಳಿಗಾಡಿನಿಂದ ಬಂದಿರತಕ್ಕಂಥ ಮನುಷ್ಯ. ಅಲ್ಲಿನ ಪರಿಸ್ಥಿತಿಯು ದುರಂತಮಯವಾಗಿದೆ. ಅಲ್ಲಿ ನೋಡಿದರೆ ಅದು ತಿಳಿಯುತ್ತದೆ.. ಆದರೆ ಅದನ್ನು ಸರಿಪಡಿಸುವ ಬಗ್ಗೆ ಯಾವ

ಚಿಂತನೆಯೂ ಇಲ್ಲಿಯವರೆಗೆ ನಡೆದಿಲ್ಲ. ಇವೊತ್ತು ಹಣಕಾಸಿನ ಪರಿಸ್ಥಿತಿ ವಿಚಾರ ಹೇಗಿದೆ? ಸರಕಾರಕ್ಕೆ ಅನೇಕ ಸಾರಿ ನಾವೇ ಕೇಳುತ್ತಿದ್ದೇವೆ, ನಿಮಗೆ ಹಣಕಾಸಿನ ಅನುಕೂಲತೆಯನ್ನು ಯಾವುದೇ ರೀತಿಯಲ್ಲಿ ಮಾಡಿಕೊಡಬೇಕೆನ್ನುವಂಥಾದ್ದು ಕೂಡ ಇದೆ. ಅಬಕಾರಿ ಬಾಬಿನಲ್ಲಿ ಎಷ್ಟು ಹಣ ಸೋರಿ ಹೋಗುತ್ತಿದೆ ಮತ್ತು ಅದರ ಇತರ ವಿಚಾರಗಳೆಲ್ಲ ಸರಕಾರಕ್ಕೆ ಗೊತ್ತಿದೆ ಮತ್ತು ಅದರ ಬಗ್ಗೆ ಸುದೀರ್ಘವಾಗಿ ಚರ್ಚೆ ಕೂಡ ನಡೆದಿದೆ. ಇದನ್ನು ತಡೆಹಿಡಿಯಬೇಕೆಂಬ ಬಗ್ಗೆ ಹಿಂದಿನ ಸರಕಾರ ನಡೆದುಕೊಂಡಂಥ ನೀತಿ ಮತ್ತು ಈಗಿನ ಸರಕಾರ ಅನುಸರಿಸುತ್ತಿರುವಂಥ ನೀತಿಯನ್ನು ನೋಡಿದರೆ ಅದು ಸಂಪೂರ್ಣ ಬುಡಮೇಲಾದಂತೆ ಕಾಣುತ್ತದೆ. ಪರಿಸ್ಥಿತಿಯಲ್ಲಿ ಬದಲಾವಣೆಯಾಗಿದೆ. ಜೊತೆಗೆ ಸರಕಾರ ಉತ್ಪತ್ತಿಯನ್ನು ಪಡೆಯಬೇಕೆಂಬ ಒಂದು ಆಕರ್ಷಣೆ, ಆತ್ಮ ಸ್ಥೈರ್ಯ ಇವರಲ್ಲಿ ಹೊರಟುಹೋಗಿದೆ. ಅಷ್ಟೇ ಗುರುತರವಾಗಿ ಕೋಟಿ ಕೋಟಿ ರೂಪಾಯಿಗಳು ವ್ಯಯವಾಗುತ್ತಿರುವ ಮತ್ತೊಂದು ಉದ್ಯಮ ಅಂದರೆ, ಗ್ರಾನೈಟ್. ತಾವುಗಳು ಈ ಮಾತನ್ನು ಕೇಳಿ ನಾಗರಾಜ್‌ರವರು ಯಾವಾಗಲೂ ಗ್ರಾನೈಟ್ ವಿಚಾರದಲ್ಲಿ ಮಾತನಾಡುತ್ತಿರುತ್ತಾರೆ ಎಂದು ಹೇಳುತ್ತಿರಬಹುದು. ಈ ರಾಜ್ಯದಲ್ಲಿ ಎರಡು ವಿಧ. ಒಂದು ಸರಕಾರಕ್ಕೆ ಬರತಕ್ಕಂಥ ಆದಾಯದ ವಿಚಾರ ಮತ್ತೊಂದು ನಮ್ಮ ನಿಸರ್ಗ ಸಂಪತ್ತಿನ ಉಳಿವು. ಈ ಎರಡು ದೃಷ್ಟಿಯಲ್ಲಿ ನಾವು ಇದನ್ನು ವಿಚಾರ ಮಾಡಬೇಕು.

ಶ್ರೀ ಕೆ. ಶಿವಮೂರ್ತಿ : ಗ್ರಾಮಗಳಲ್ಲಿ ನೈರ್ಮಲ್ಯ ಸೌಕರ್ಯಗಳನ್ನು ನಿರ್ಮಿಸುವುದಕ್ಕಾಗಿ ಪ್ರೀ ಪ್ಯಾಬ್ರಿಕೇಟೆಡ್ ಶೌಚಾಲಯಗಳನ್ನು ಸೇರಿಸಲಾಗುವುದು ಎಂದು ಹೇಳಿದ್ದೇವಲ್ಲ?

ಶ್ರೀ ವಾಟಾಳ್ ನಾಗರಾಜ್ : ಹೇಳಿದ್ದೀರಿ ಸ್ವಾಮಿ. ಹೋದ ಸಾರಿ ಈ ಸದನದಲ್ಲಿ ಮಾನ್ಯ ರಾಜಶೇಖರ ಮೂರ್ತಿಯವರು ಹೇಳಿದ್ದಾರಲ್ಲ? ಅದು ಯಾವುದು ಏನಾಯಿತು?

ಮುಂದಿನ ಸಾರಿ ಇನ್ನೊಬ್ಬರು ಬರುತ್ತಾರೆ ಅವರು ಏನು ಮಾಡುತ್ತಾರೋ? ಹಾಗಾದರೆ ರಾಜ್ಯದಲ್ಲಿನ ಸುಮಾರು 56 ಸಾವಿರ ಹಳ್ಳಿಗಳಲ್ಲಿ ಈ ಕಾರ್ಯಕ್ರಮವನ್ನು ಮಾಡಬೇಕೆಂದಿದ್ದರೆ ಎಷ್ಟು ಸಾವಿರ ಹಳ್ಳಿಗಳಲ್ಲಿ ಮಾಡುತ್ತೀರಿ?

ಶ್ರೀ ಕೆ. ಶಿವಮೂರ್ತಿ : ಸ್ಪೆಶಲ್ ಕಾಂಪೋನೆಂಟ್ ಪ್ರೋಗ್ರಾಂನಲ್ಲಿ ಮನೆಗಳನ್ನು ಕಟ್ಟುವ ಉದ್ದೇಶಕ್ಕಾಗಿ 32 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದೇವೆ, ಅದರಲ್ಲಿ ಪೂರ್ತಿ ಹಣವನ್ನು ಮನೆಕಟ್ಟುವುದಕ್ಕಾಗಿ ಇಟ್ಟಿದ್ದೇವೆ, ಆಗ ಪ್ರತಿ ಮನೆಗೊಂದು ಶೌಚಾಲಯ ನಿರ್ಮಾಣವಾಗುತ್ತದೆ.....

ಶ್ರೀ ವಾಟಾಳ್ ನಾಗರಾಜ್ : ಯಾವುದೇ ಸರಕಾರಗಳು ಏನೆಲ್ಲಾ ಹೇಳಿದ್ದನ್ನು ಮಾಡಿದ್ದಾರೆ ಜಾರಿಗೆ ತಂದಿದ್ದಾರೆ ಎಂಬುದು ನಮಗೆಲ್ಲಾ ಗೊತ್ತಾಗಿದೆ. ಇದನ್ನು ನೋಡಿದರೆ ನಾನು ಮಾತನಾಡುತ್ತಿರುವ ವಿಚಾರವನ್ನು ಬಿಟ್ಟು ಬೇರೆ ವಿಚಾರವನ್ನು ಮಾತನಾಡಬೇಕಾಗುತ್ತದೆ. ತಾವುಗಳು ಹಳ್ಳಿಗಳ ಕಡೆ ನೋಡಿರಬೇಕು, ಅಲ್ಲಿ ಬೊಂಬೆ ಡಬ್ಬ ಎಂದು ಬರುತ್ತದೆ. ಅದರಲ್ಲಿ ಕಣ್ಣು ಹಾಕಿಕೊಂಡು ನೋಡುವುದು ಇರುತ್ತದೆ. ಡಬ್ಬದವನು ಲಂಡನ್ ನೋಡಿದೆಯಾ? ಎಂದು ಕೇಳಿದರೆ ನೋಡುವವನು ಹೌದು ಸ್ವಾಮಿ ಎಂದು ಹೇಳುವುದು, ಆಮೇಲೆ ಬಾಂಬೆ ನೋಡಿದೆಯಾ, ರಾಣಿಯನ್ನು ನೋಡಿದೆಯಾ, ರಾಜನನ್ನು ನೋಡಿದೆಯಾ ಎಂದೆಲ್ಲಾ ಕೇಳುತ್ತಾ ಇರುತ್ತಾನೆ ನೋಡುವಾತ ಹೌದು ಹೌದು ಎಂದು ಹೇಳುತ್ತಾ ಇರುತ್ತಾನೆ. ಹೀಗೆ ಡಬ್ಬದ ನೋಟದ ತರಹ ನಮಗೆ ಬೇಡ......

ಶ್ರೀ ಕೆ. ಶಿವಮೂರ್ತಿ : ವಾಟಾಳ್‌ರವರು ಜಾತ್ರೆಯ ಮಾತನ್ನು ಹೇಳುತ್ತಿದ್ದಾರೆ ಎಂದು ಕಾಣುತ್ತದೆ.....

ಶ್ರೀ ವಾಟಾಳ್ ನಾಗರಾಜ್ : ನಾವು ಜಾತ್ರೆಯನ್ನು ನೋಡಿದ್ದೇವೆ, ಜಾತಿಯಲ್ಲಿಯೂ ಇದ್ದೇವೆ, ಜಾನುವಾರುಗಳನ್ನು ಅಲ್ಲಿಂದ ತಂದಿದ್ದೇವೆ, ರೈತರೂ ಆಗಿದ್ದೇವೆ, ತಮ್ಮಂಥವರನ್ನು ನಾವೂ ನೋಡಿದ್ದೇವೆ. ನಾನು ಈ ಸದನಕ್ಕೆ 1967ರಿಂದ ಬಂದವನು. ಇಲ್ಲಿ ಜಾತ್ರೆಯ ಚಾವಡಿ-ಗೀವಡಿಯ ಕಥೆ ನನಗೂ ಗೊತ್ತಿದೆ, ಅದನ್ನು ಹೇಳಬೇಕೇ? ಅದೆಲ್ಲ ಈಗ ಬೇಡ ಎಂದು ಭಾವಿಸುತ್ತೇನೆ.

ಡಾ॥ ಎನ್.ಬಿ. ನಂಜಪ್ಪ: ಹಾಗಾದರೆ 40 ವರ್ಷಗಳಿಂದ ಈ ದೇಶದಲ್ಲಿ ರಾಜ್ಯದಲ್ಲಿ ಏನು ಆಗಿಲ್ಲವೆ? ಬರೀ ಡಬ್ಬವನ್ನು ಮಾತ್ರ ತೋರಿಸಿದ್ದಾರೆಯೇ? ಕನ್ನಂಬಾಡಿ ನೋಡು, ಅದು ನೋಡು, ಇದು ನೋಡು ಎಂದು ಡಬ್ಬ ಮಾತ್ರ ತೋರಿಸಿದ್ದಾರೆಯೇ ತಮಗೆ?

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ 40 ವರ್ಷಗಳಿಂದ ಈ ರಾಜ್ಯ ಸಮಾಧಿಯಾಗಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಕೇವಲ ತಮ್ಮ ಲೆಕ್ಕ ಮಾತ್ರ ತಾವು ತೆಗೆದುಕೊಳ್ಳುವುದಲ್ಲ ಎಲ್ಲರ ಲೆಕ್ಕವನ್ನೂ ಕೂಡ ಸ್ವಲ್ಪ ತೆಗೆದುಕೊಳ್ಳಬೇಕು. ತಮ್ಮ ಕೇಳಿನೋಡಿ.....

ಶ್ರೀ ವಾಟಾಳ್ ನಾಗರಾಜ್ : ಇದು ಬಾಂಬೇ ಡಬ್ಬಕ್ಕಿಂತಲೂ ಹೊಲಸು. ಅದರಲ್ಲಿ ಏನೂ ಅನುಮಾನವಿಲ್ಲ, ಇದು ಕೇವಲ ನೋಡಿದವರಿಗೆ ಮಾತ್ರ ಗೊತ್ತಾಗುತ್ತದೆ. ತಾವುಗಳು ನೋಡಿದ್ದೀರಾ?

ಉಪಾಧ್ಯಕ್ಷಿಣಿಯವರು : ಅವರು ಹಬ್ಬವನ್ನು ನೋಡಿದ್ದಾರೆ. ಬಾಂಬೆಯನ್ನೂ ನೋಡಿದ್ದಾರೆ..

ಶ್ರೀ ವಾಟಾಳ್ ನಾಗರಾಜ್ : ಈ ಗ್ರಾನೈಟ್‌ನ್ನು ಸುಮಾರು 16 ವರ್ಷಗಳಿಂದ ನಮ್ಮ ರಾಜ್ಯದಲ್ಲಿ ತೆಗೆಯುತ್ತಾ ಇದ್ದಾರೆ. ಇದರಲ್ಲಿ ನಿರಂತರವಾಗಿ ಏನು ಅನ್ಯಾಯ ನಡೆಯುತ್ತಿದೆ ಎನ್ನತಕ್ಕಂಥಾದ್ದು ಈ ಸರಕಾರಕ್ಕೆ ಇನ್ನೂ ಅರ್ಥವೇ ಆಗಿಲ್ಲ. ನಾನು ಸುಮಾರು ಐದಾರು ವರ್ಷಗಳಿಂದ ಈ ರಾಜ್ಯದ ಒಳಗೆ, ಶಾಸನಸಭೆಯ ಒಳಗೆ ಸುದೀರ್ಘವಾಗಿ ಹೇಳಿದ್ದೇನೆ. ಆದರೆ ಇದುವರೆಗೂ ಈ ರೀತಿಯಾಗಿ ಅನ್ಯಾಯ ನಡೆಯುತ್ತಿದೆ ಎಂದು ಏಕೆ ಇವರಿಗೆ ಗೊತ್ತಾಗಿಲ್ಲ ಎಂಬುದು ಒಂದು ಪ್ರಶ್ನೆ. ನಮ್ಮ ಇಡೀ ರಾಜ್ಯದಲ್ಲಿ ಸಮಗ್ರವಾಗಿ ನಿಸರ್ಗ ಸಂಪತ್ತು ನಾಶವಾಗಿದೆ. ಎಷ್ಟು ನಾಶವಾಗಿದೆ ಎಂಬ ಬಗ್ಗೆ ಸರಕಾರದಲ್ಲಿ ಯಾವ ಒಂದು ಸಣ್ಣ ಲೆಕ್ಕವೂ ಇಲ್ಲ. ಎಷ್ಟು ಧಾರ್ಮಿಕ ಸ್ಥಳಗಳಲ್ಲಿ ಪವಿತ್ರ ಸ್ಥಳಗಳಲ್ಲಿ ಎಷ್ಟು ಕಲ್ಲುಗಳನ್ನು ತೆಗೆದಿದ್ದಾರೆ, ಈ ಒಂದು ಪವಿತ್ರ ಧಾರ್ಮಿಕ ಸ್ಥಳಗಳ ಒಂದು ಚಿತ್ರ ಎಷ್ಟು ನಗ್ನವಾಗಿದೆ? ಈ ಬಗ್ಗೆ ಖಂಡಿತವಾಗಿಯೂ ಈ ಸರಕಾರದ ಗಮನಕ್ಕೆ ಬಂದಿಲ್ಲ. ಒಂದು ದಿನಕ್ಕೆ ಕನಿಷ್ಟ 700 ಕ್ಯುಬಿಕ್ ಮೀಟರ್ ಕಲ್ಲುಗಳನ್ನು ಈ ಜನರು ತೆಗೆಯುತ್ತಾ ಇದ್ದಾರೆ. ಸುಮಾರು 2 ಕೋಟಿ 50 ಲಕ್ಷ ರೂಪಾಯಿಗಳ ಕಲ್ಲನ್ನು ಒಂದು ದಿನಕ್ಕೆ ಈ ಜನರು ತೆಗೆಯುತ್ತಾ ಇದ್ದಾರೆ. ಇದೇನು ಕಡಿಮೆಯೇ? ಒಂದು ಕ್ಯುಬಿಕ್ ಮೀಟರ್ ಕಲ್ಲಿಗೆ ಸರಕಾರಕ್ಕೆ ಕೊಡತಕ್ಕಂಥದ್ದು ಕೇವಲ 600 ರೂಪಾಯಿಗಳ ರಾಜಧನ. ಒಂದು ಕ್ಯುಬಿಕ್ ಮೀಟರ್‌ಕಲ್ಲಿಗೆ ಕನಿಷ್ಟ 40 ಸಾವಿರ ರೂಪಾಯಿಗಳ ಬೆಲೆ ಇದೆ. ಇಳಕಲ್, ಪಿಂಕು, ಕೊಳ್ಳೆಗಾಲ, ಚಾಮರಾಜನಗರ, ಯಳಂದೂರು, ಈ ಪ್ರದೇಶಗಳಲ್ಲಿ ಕಲ್ಲು ತೆಗೆಯುತ್ತಾ ಇದ್ದರಲ್ಲ? ಈ ಕಲ್ಲುಗಳ ಬೆಲೆ 15 ಸಾವಿರದಿಂದ, 25 ಸಾವಿರ ರೂಪಾಯಿಯಿಂದ, 40 ಸಾವಿರ ರೂಪಾಯಿಗಳವರೆಗೂ ಇದೆ. ಈ ಕಲ್ಲಿನ ರಾಜಧನದ

ಬಗ್ಗೆ ನಮ್ಮ ಮಂತ್ರಿಗಳು ಇವತ್ತು ವಿಧಾನಪರಿಷತ್ತಿನಲ್ಲಿ ಇದನ್ನು ನಾವು ರಾಷ್ಟ್ರೀಕರಣ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಯಾವ ರೀತಿಯಾಗಿ ಇವರು ಈ ನಿರ್ಧಾರ ಕೈಗೊಂಡಿದ್ದಾರೋ ನನಗಂತೂ ಗೊತ್ತಿಲ್ಲ. ಇದನ್ನು ರಾಷ್ಟ್ರೀಕರಣ ಮಾಡಿಬಿಟ್ಟರೆ ಕಲ್ಲೆಲ್ಲಾ ನಮ್ಮ ಕೈಗೇನೂ ಬರುವುದಿಲ್ಲ. ರಾಷ್ಟ್ರೀಕರಣವನ್ನು ಮಾಡಿದರೆ ಮತ್ತೆ ಯಾರ ಕೈಗೇನೂ ಹೋಗುವುದಿಲ್ಲ.

ರಾಷ್ಟ್ರೀಕರಣವನ್ನು ಮಾಡಿದರೆ ಮತ್ತೆ ಈ ಸ್ವತ್ತು ಸರ್ಕಾರದಲ್ಲಿಯೇ ಉಳಿಯುತ್ತದೆ. ಸರ್ಕಾರದಲ್ಲಿ ಒಂದು ಅವಿಭಾಜ್ಯವಾದ ಅಂಗವಾಗಿರುತ್ತದೆ. ಅದೇನೂ ಆ ಕಡೆಗೆ ಈ ಕಡೆಗೂ ಎಲ್ಲಿಯೂ ಹೋಗುವುದಿಲ್ಲ. ಒಂದು ದಿನಕ್ಕೆ ಎರಡು ಕೋಟಿ ರೂಪಾಯಿ ಸರ್ಕಾರಕ್ಕೆ ನಷ್ಟವಾಗುತ್ತಿದೆ. ಇದು ಕನಿಷ್ಠ ಸರಾಸರಿ. ವರ್ಷದಲ್ಲಿ 500 ಕೋಟಿ ರೂಪಾಯಿ ಕಲ್ಲಿನಿಂದಲೇ ಹೋಗುತ್ತಿದೆ. ಈ ಗ್ರಾನೈಟ್ ಕಲ್ಲಿನಿಂದ ಅಷ್ಟು ಹೋಗುತ್ತಿದೆ. ನಾನು ಇದನ್ನು ನಿಮಗೆ, ಈ ನಿಸರ್ಗ ಸಂಪತ್ತನ್ನು ಉಳಿಸುವುದು ಬೇಡ, ಸಮಗ್ರವಾಗಿ ಕಲ್ಲಿನ ಲೂಟಿ ನಡೆಯುತ್ತಿದೆಯಲ್ಲಾ ಎನ್ನುವುದಾದರೆ ಸರ್ಕಾರಕ್ಕೆ ಆ ಹಣ ಬರಬೇಕಲ್ಲಾ! ನನಗನ್ನಿಸುತ್ತದೆ, ಸರ್ಕಾರಕ್ಕೂ ಇದು ಬರುವುದಿಲ್ಲ. ಎಂ.ಎಂ.ಎಲ್. ಎಂದು ಒಂದು ಸಂಸ್ಥೆ ತಮಗೆ ಗೊತ್ತಿದೆ. ಅದು ಸರ್ಕಾರದ ಅಧೀನಕ್ಕೆ ಒಳಪಟ್ಟ ಒಂದು ಸಂಸ್ಥೆ. ಈ ಸಂಸ್ಥೆಗಳ ಮೂಲಕ ದೇಶ ದೇಶ ವಿದೇಶಗಳಿಗೆ ಈ ಕಲ್ಲನ್ನು ರಫ್ತು ಮಾಡುತ್ತಿದ್ದೇವೆ. ನಾವು ಒಟ್ಟು ಎಷ್ಟು ರಫ್ತು ಮಾಡಿದ್ದೇವೆ, ಖಾಸಗಿಯವರು ಎಷ್ಟು ಮಾಡಿದ್ದಾರೆ ಎಂದು ಎರಡಕ್ಕೂ ಲೆಕ್ಕವನ್ನು ಹಾಕಿದರೆ ಶೇಕಡ 5 ಭಾಗ ಮೈಸೂರು ಮಿನರಲ್ ಸಂಸ್ಥೆಯವರು ರಫ್ತು ಮಾಡುವುದಕ್ಕಾಗಿಲ್ಲ. 95 ಭಾಗ ಗ್ರಾನೈಟ್ ಕಲ್ಲನ್ನು ಖಾಸಗಿಯವರು ವಿದೇಶಗಳಿಗೆ ರಫ್ತು ಮಾಡಿದ್ದಾರೆ. ಮೈಸೂರು ಮಿನರಲ್ ಸಂಸ್ಥೆಯಲ್ಲಿ ಒಳ್ಳೆಯವರು ಇಲ್ಲ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿ ನೌಕರರ ಸಂಘದವರು ಈಗ ಸುಮಾರು ಎಂಟು ತಿಂಗಳ ಹಿಂದೆ ಸುದೀರ್ಘವಾದ ಒಂದು ಪತ್ರಿಕಾ ಹೇಳಿಕೆಯನ್ನು ನೀಡಿದರು. ಕೆಲವರಮೇಲೆ ತೀವ್ರವಾದಂಥ ಆರೋಪಣೆ ಇದೆ ಹಾಗೂ ಕೆಲವು ಹಿರಿಯ ಅಧಿಕಾರಿಗಳು ಇದರಲ್ಲಿ ಒಳಗಾಗಿದ್ದಾರೆ. ಅವರುಗಳ ಬಗ್ಗೆ ನೀವು ಮೊದಲು ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಆದರೆ ಅವರನ್ನು ನೀವು ತೆಗೆಯುವುದಕ್ಕೆ ತಯಾರಾಗಿಲ್ಲ. ಅವರನ್ನು ಮುಟ್ಟುವುದಕ್ಕೂ ತಯಾರಾಗಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ನಿಮಗೆ ಪೂರಕವಾಗಿ ಒಂದು ಮಾತನ್ನು ಹೇಳುತ್ತೇನೆ. ಎಂ.ಎಂ.ಎಲ್.ನಲ್ಲಿ ರಮೇಶಬಾಬು ಎನ್ನುವಂಥ ವ್ಯಕ್ತಿಯೊಬ್ಬರನ್ನು ಸಸ್ಪೆಂಡ್ ಮಾಡಿ ಎಂದು ಸರ್ಕಾರ ಆಜ್ಞೆಯನ್ನು ಹೊರಡಿಸಿದರೂ ಕೂಡ ಅವರನ್ನು ಮ್ಯಾನೇಜಿಂಗ್ ಡೈರೆಕ್ಟರ್ ಸಸ್ಪೆಂಡ್ ಮಾಡುತ್ತಿಲ್ಲ. ಗೌರ್ನಮೆಂಟ್ ರೆಕಮೆಂಡ್ ಮಾಡಿದೆ. ಪಿ.ಯು.ಸಿ. ಕಮಿಟಿಯಲ್ಲಿ ಕೂಡ ರೆಕಮಂಡ್ ಮಾಡಿದೆ. ಆದರೂ ಕೂಡ ಅಲ್ಲಿ ಅವರನ್ನು ಸಸ್ಪೆಂಡ್ ಮಾಡುತ್ತಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಇವೆಲ್ಲವನ್ನೂ ನೋಡಲಿಕ್ಕೆ ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿ ಇದೆ ಎಂದು ತಮಗೆ ಗೊತ್ತಿದೆ. ಹಿಂದಿನ ಸರ್ಕಾರದಲ್ಲಿ ಕಮಿಟಿ ರಚಿತವಾಗಿದ್ದು ಅದು 26ರಲ್ಲಿ ಒಂದು ರಿಪೋರ್ಟ್‌ನ್ನು ಕೂಡಾ ಕೊಟ್ಟಿದೆ. ಎಂ.ಎಂ.ಎಲ್.ನಲ್ಲಿ ನಾಲ್ಕು ಜನ ಅಧಿಕಾರಿಗಳು ಭ್ರಷ್ಟಾಚಾರ ಮಾಡಿದ್ದಾರೆ. ಮೂರು ಜನರಮೇಲೆ ಕ್ರಮ ತೆಗೆದುಕೊಂಡಿದ್ದಾರೆ, ಮಿಸ್-ಯೂಸ್ ಆಗಿದೆ ಎಂದು ಹೇಳಿ. ಒಬ್ಬ ಅಧಿಕಾರಿ ಮ್ಯಾನೇಜಿಂಗ್ ಡೈರೆಕ್ಟರ್ ಜೊತೆಯಲ್ಲಿ ಶಾಮೀಲಾಗಿ ಅವನ್ನು ಸಸ್ಪೆಂಡ್ ಮಾಡುವ ಬದಲು ಪ್ರಮೋಷನ್ ಕೂಡ ಕೊಟ್ಟಿದ್ದಾರೆ. ಅದನ್ನು ಸ್ಪೆಲ್‌ಔಟ್ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಹೋದರೆ ಆ ಕಡತವನ್ನೇ ಪಿ.ಯು.ಸಿ. ಕಮಿಟಿಗೆ ವಹಿಸಲಿಲ್ಲ.

ಶ್ರೀ ಬಸವರಾಜರಾಯರೆಡ್ಡಿ : ಇಂಡಸ್ಟ್ರಿ ಸೆಕ್ರೆಟರಿಯವರು ಕೂಡ ಅವರನ್ನು ಸಸ್ಪೆಂಡ್ ಮಾಡಿ ಎಂದು ಆರ್ಡರನ್ನು ಮಾಡಿದ್ದಾರೆ. ಆದರೂ ಎಂ.ಎಂ.ಎಲ್.ನವರು ಅವರನ್ನು ಸಸ್ಪೆಂಡ್ ಮಾಡಲಿಕ್ಕೆ ತಯಾರಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ನಾನು ಬಹಳ ಆಳವಾಗಿ ಈ ವಿಚಾರದಲ್ಲಿ ಅಭ್ಯಾಸ ಮಾಡಿದ್ದೇನೆ. ಇದರಲ್ಲಿ ಎರಡನೇ ಅಭಿಪ್ರಾಯವಿಲ್ಲ. ನನಗೆ ಕಣ್ಣೀರು ಬರುತ್ತದೆ ಪ್ರಾಮಾಣಿಕವಾಗಿ, ಆತ್ಮಸಾಕ್ಷಿಯಾಗಿ ಹೇಳುತ್ತಿದ್ದೇನೆ. ಈ ರಾಜ್ಯದ ನೈಸರ್ಗಿಕ ಸಂಪತ್ತು ಎಷ್ಟು ಲೂಟಿಯಾಗುತ್ತಿದೆ, ಇದರ ಬಗ್ಗೆ ಯಾರ ಮುಂದೆ ನಾವು ಕೂಗಿಕೊಳ್ಳಬೇಕು, ಯಾರ ಮುಂದೆ ನಾವು ಕೂಗಿಕೊಳ್ಳಬೇಕು. ಎಲ್ಲಿ ಹೋಗಿ ಕೂಗಬೇಕು? ಹೊರಗಡೆ ಕೂಗಿದ್ದು ಕೂಗಿದ್ದು ಆಯಿತು. ಇದು ಪವಿತ್ರವಾದಂಥಮನೆ. ಈ ಮನೆಯಲ್ಲಿ ಕೂಗಿ ಕೂಗಿ ಸಾಕಾಯಿತು. ಕೊನೆಗೆ ಈ ಸರ್ಕಾರಕ್ಕೆ ಯಾವ ಯಾವ ಭಾಷೆ ಇದೆ, ಅವೆಲ್ಲದರಲ್ಲಿಯೂ ಹೇಳಿಆಯಿತು. ಕೊನೆಗೆ ಈ ಸರ್ಕಾರಕ್ಕೆ ಯಾವ ಯಾವ ಭಾಷೆ ಇದೆ, ಅವೆಲ್ಲದರಯೂ ಹೇಳಿ ಆಯಿತು. ಆದರೆ ಈ ಸರ್ಕಾರದ ತಲೆಗೆ ಅದು ಬರುತ್ತಿಲ್ಲ. ಈ ಮೈಸೂರು ಮಿನರಲ್ ಸಂಸ್ಥೆಯ ಬಗ್ಗೆ ಸರ್ಕಾರ ಸಮಗ್ರವಾಗಿ ಒಂದು ತನಿಖೆಯನ್ನು ತಾವು ಕೂಡಲೇ ಮಾಡತಕ್ಕದ್ದಕ್ಕೆ, ಒಂದು ವ್ಯವಸ್ಥೆಯನ್ನು ಮಾಡಿ. ಎಷ್ಟೋ ಹೆಗ್ಗಣಗಳು ನಿಮ್ಮ ಕೈಗೆ ಸಿಗುತ್ತವೆ. ನಿಮ್ಮ ಬೋನಿಗೆ ಎಷ್ಟೋ ಹೆಗ್ಗಣಗಳು ಬೀಳುತ್ತವೆ. ಇದರ ಬಗ್ಗೆ ತಾವು ಸಮಗ್ರವಾಗಿ ಒಂದು ತನಿಖೆಯನ್ನು ನಡೆಸಿ. ಇದರ ಜೊತೆಯಲ್ಲಿ ಮತ್ತೊಂದು ವಿಚಾರವೇನೆಂದರೆ ಈ ಸಂಸ್ಥೆಯವರು ಕೆಲವು ಪ್ರದೇಶಗಳಲ್ಲಿ ಕಲ್ಲುಗಳನ್ನು ತೆಗೆಯುವಾಗ ನೂರು ಕಲ್ಲನ್ನು ತೆಗೆದರೆ ಹತ್ತು ಕಲ್ಲುಗಳನ್ನು ಸಂಸ್ಥೆಯ ಹೆಸರಿಗೆ ಮಾಡಿಕೊಳ್ಳುತ್ತಾರೆ. ಇನ್ನು 90 ಕಲ್ಲನ್ನು ಅವರು ಇಲ್ಲಿಯೇ ಖಾಸಗಿಯವರಿಗೆ ತೆಗೆದುಕೊಂಡುಬಿಡಿ ಒಂದು ಹೇಳಿ ಕೊಟ್ಟುಬಿಡುತ್ತಾರೆ. ಇದಕ್ಕೆ ಲೆಕ್ಕ ಇಲ್ಲ, ಏನೂ ಇಲ್ಲ. ಇದುವರೆಗೂ ಸರ್ಕಾರದವರು ನಮಗೆ ರಾಜಧನ ಬರುತ್ತಿದೆ ಎಂದು ಏನು ಹೇಳುತ್ತಾರೆ, ಅದನ್ನು ಯಾವ ರೀತಿಯಾಗಿ ವಸೂಲು ಮಾಡುತ್ತಿದ್ದೀರಿ ಸ್ವಾಮಿ?

ಇದಕ್ಕೆ ಯಾವುದಾದರೂ ಒಂದು ಸಂಸ್ಥೆ ಅಥವಾ ಏಜೆನ್ಸಿ ಬೇಕಲ್ಲಾ! ಒಂದು ಚೆಕ್‌ಪೋಸ್ಟ್ ಬೇಕಲ್ಲಾ! ನಿಮ್ಮ ಡಿಸ್ಟಿಲ್ಲರಿಗಳ ಮುಂದೆ ಎಕ್ಸೈಜ್‌ನವರ ಒಬ್ಬ ಅಧಿಕಾರಿಯನ್ನು ಹಾಕಿರುತ್ತೀರಿ, ಇಲ್ಲಿ ಕಲ್ಲನ್ನು ತೆಗೆಯುತ್ತಾರಲ್ಲಾ, ಅಲ್ಲಿ ಎಲ್ಲಿದೆ ಚೆಕ್ ಪೋಸ್ಟ್? ಎಷ್ಟು ಕಲ್ಲುಗಳನ್ನು ಗಣಿಯಿಂದ ತೆಗೆದು ಎಷ್ಟು ಕಲ್ಲು ಲಾರಿಗೆ ಹೋಯಿತು, ಎಷ್ಟು ಕಲ್ಲು ಹಡಗಿಗೆ ಹೋಯಿತೆಂದು ಎಲ್ಲಿ ಹೇಳಿದ್ದಾರೆ? ಮಂಗಳೂರು ಬಂದರಿನಿಂದ ಹೋಗುತ್ತಿದೆ, ವಿಶಾಖಪಟ್ಟಣ ಬಂದರಿನಿಂದ ಹೋಗುತ್ತಿದೆ. ತಮಿಳುನಾಡಿನ ಬಂದರಿನಿಂದ ಹೋಗುತ್ತಿದೆ. ಅದರಲ್ಲಿ ಏನೂ ಅನುಮಾನವಿಲ್ಲ. ಇದಕ್ಕೆ ಯಾರು ಶಾಮೀಲು ಅಂದರೆ ಮೈಸೂರು ಮಿನರಲ್ ಸಂಸ್ಥೆಯ ಕೆಲವು ಅಧಿಕಾರಿಗಳು ಮತ್ತು ಗಣಿ ಮತ್ತು ಭೂ ವಿಜ್ಞಾನದ ಇಲಾಖೆಯವರು. ಅಲ್ಲಿ ಏನೇನು ನಡೆದಿದೆ, ಯಾವ್ಯಾವ ಖನಿಜಗಳು ಹೋಗಿವೆ ಎಂದರೆ ಹರಳುಗಳು, ಮುತ್ತುಗಳು. ಇಡೀ ರಾಜ್ಯದ ಮೂಲೆಮೂಲೆಯಲ್ಲಿ ಈ ರೀತಿ ಹೋಗುತ್ತಿರುವುದು ನಮ್ಮ ಕಣ್ಣಿಗೆ ಬೀಳುತ್ತಿಲ್ಲ, ಕಲ್ಲಾದರೂ ಒಂದು ಕ್ಯೂಬಿಕ್ ಮೀಟರಿಗೆ 40 ಸಾವಿರ ರೂಪಾಯಿಯಾಗುತ್ತದೆ. ಒಂದು ಹರಳಿಗೆ 40 ಸಾವಿರ ಆಗುತ್ತದೆ. ಎಷ್ಟು ಹರಳು ಹೋಗಿದೆಯೋ, ಯಾವ್ಯಾವ ಹರಳುಗಳು ಹೋಗಿದೆಯೋ ಗೊತ್ತಿಲ್ಲ. ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸಂಪೂರ್ಣ ದಿವಾಳಿ ಎದ್ದಿದೆ. ಇವರು ಹಗಲು ದರೋಡೆ ಮಾಡುತ್ತಿದ್ದಾರೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು ಖಾಸಗೀ ಗ್ರಾನೈಟ್ ಕಲ್ಲಿನ ಮಾಲೀಕರ ಜೊತೆಯಲ್ಲಿ ಶಾಮೀಲಾಗಿದ್ದಾರೆ. ಅಲ್ಲಿರತಕ್ಕ ನಿವೃತ್ತಿ ಅಧಿಕಾರಿಗಳು ಅವರೇ ಗಣಿಯನ್ನು ನಡೆಸುತ್ತಿದ್ದಾರೆ. ಕರ್ನಾಟಕದಲ್ಲಿ ಕನಿಷ್ಠ ಕಡಿಮೆ ಎಂದರೆ ಒಂದು ಸಾವಿರ

ಗಣಿಗಳಿವೆ. ಕನಿಷ್ಠ 25 ಸಾವಿರ ಎಕರೆ ಪ್ರದೇಶದಲ್ಲಿ ಕರ್ನಾಟಕದ ಮೂಲೆಮೂಲೆಯಲ್ಲಿ ತೆಗೆಯತಕ್ಕ ಪ್ರದೇಶಗಳು ರೆವಿನ್ಯೂ ಭೂ, ಅರಣ್ಯ ಭೂಮಿ ದೇವಸ್ಥಾನಗಳು ಖಾಸಗೀ ಜಮೀನುಗಳು ಲೂಟಿಯಾಗುತ್ತಿವೆ. ಈ ಹಗಲು ದರೋಡೆಯನ್ನು ಯಾರ ಕೈಯಲ್ಲಿಯೂ ತಪ್ಪಿಸುವುದಕ್ಕಾಗುವುದಿಲ್ಲ. ಇದಕ್ಕೆ ಸದನದ ಸಮಿತಿ ಮಾಡಬೇಕು. ಆಳುವ ಪಕ್ಷದವರು ಬೇಕಾದರೆ ಇರಲಿ, ನಾವು ಕೇವಲ ಇಬ್ಬರು ಇರುತ್ತೇವೆ. ತಾವು ಈ ರಾಜ್ಯದ ಮೂಲೆ ಮೂಲೆಗೆ ಒಂದು ವಾರಗಳ ಕಾಲ ಪ್ರವಾಸ ಮಾಡಿ ಈ ಗಣಿಗಳ ಮುಂದೆ ತಾವು ಹೋದರೆ ಎಷ್ಟು ದರೋಡೆ ಎಷ್ಟು ಲೂಟಿಯಾಗಿದೆ ಎನ್ನುವುದು ಗೊತ್ತಾಗುತ್ತದೆ. ಮಾನ್ಯ ಮೊಯಿಲಿಯವರು ಮಂಗಳೂರು ಬಂದರನ್ನು ನೋಡಿರಬಹುದು. ಆ ಬಂದರನ್ನು ಬಿಟ್ಟು ಮುಂದೆ ಹೋದರೆ ಕನಿಷ್ಠ ನೂರು ಎಕರೆ ಪ್ರದೇಶದಲ್ಲಿ ಬಿದ್ದಿರತಕ್ಕ ಕಲ್ಲುಗಳ ರಾಶಿ ನನ್ನ ಅಂದಾಜಿನ ಪ್ರಕಾರ ಎರಡು ಸಾವಿರ ಕೋಟಿ ರೂಪಾಯಿಯ ಕಲ್ಲು ಅಲ್ಲಿದೆ. ಇದು ಯಾರ ಸ್ವತ್ತು? ಇದು ಎಲ್ಲಿಗೆ ಹೋಗುತ್ತಿದೆ? ಯಾವುದಕ್ಕೆ ಹೋಗುತ್ತಿದೆ? ಇದನ್ನು ಯಾರು ಕೇಳುವವರೇ ಇಲ್ಲವೇ? ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ 15 ವರ್ಷಗಳ ಹಿಂದೆ 5 ರೂಪಾಯಿ ದಿನಗೂಲಿ ಕೆಲಸಕ್ಕೆ ಸೇರಿದವನು ಇವತ್ತು 100 ಕೋಟಿ ರೂಪಾಯಿಯ ಆಸ್ತಿವಂತನಾಗಿದ್ದಾನೆ. ಇವತ್ತು ಬೆಂಗಳೂರಿನಲ್ಲಿ ದೊಡ್ಡ ಹೋಟೆಲ್ ಅನ್ನು ನಡೆಸುತ್ತಿದ್ದಾನೆ. ತಮಿಳುನಾಡಿನಿಂದ ಬಂದವರು, ಆಂಧ್ರದಿಂದ ಬಂದವರು ಮತ್ತು ಕೇರಳದಿಂದ ಬಂದವರು, ಲೂಟಿ ಮಾಡಿ ಕೋಟಿ ಕೋಟಿ ರೂಪಾಯಿಯನ್ನು ಮಾಡುತ್ತಿದ್ದಾರೆ. ಬಿಜಾಪುರಕ್ಕೆ ಪ್ರವಾಸಕ್ಕೆ ಹೋದಾಗ ನೋಡಬಹುದು. ಇಳಕಲ್, ಸೀರೆ ಒಂದು ಕಾಲದಲ್ಲಿ ಬಹಳ ವೈಭವವಾಗಿ ಪ್ರಸಿದ್ಧಿಯಾಗಿತ್ತು. ಆದರೆ ಇವತ್ತು ಇಳಕಲ್ ಸುತ್ತಮುತ್ತ ನೋಡಿದರೆ ರಮಣೀಯವಾದಂತಹ ಗುಗ್ಗಲಮಣಿ ಬಸವೇಶ್ವರ ದೇವಸ್ಥಾನದ ಸುತ್ತ ರಮಣೀಯವಾದಂತಹ ಗುಲಾಬಿ ಬಣ್ಣದ ಸುಂದರವಾದಂತಹ ಸುಮಾರು ಎರಡು ಸಾವಿರ ಎಕರೆ ಪ್ರದೇಶದಲ್ಲಿ ಕಲ್ಲನ್ನು ತೆಗೆಯುತ್ತಿದ್ದಾರೆ. ಕನಿಷ್ಠ 10 ಸಂಸ್ಥೆಯವರು ಎಷ್ಟು ಕಲ್ಲನ್ನು ತೆಗೆದಿರಬಹುದೆಂದು ನೀವು ಲೆಕ್ಕ ಹಾಕಿದರೆ ನನ್ನ ಅಂದಾಜಿನ ಪ್ರಕಾರ ಅದೊಂದೇ ಸ್ಥಳದಲ್ಲಿ 5 ಸಾವಿರ ಕೋಟಿ ರೂಪಾಯಿಗಳ ಕಲ್ಲನ್ನು ತೆಗೆದಿರಬಹುದು. ಇದು ಯಾರ ಕಣ್ಣಿಗೂ ಬೀಳುತ್ತಾ ಇಲ್ಲವೇ? ಸರ್ಕಾರದ ಕಣ್ಣಿಗೆ ಬೀಳುತ್ತಾ ಇಲ್ಲವೇ? ಏತಕ್ಕೆ ನೀವು ಬಿಟ್ಟಿದ್ದೀರಿ? ನಿಸರ್ಗ ಸಂಪತ್ತನ್ನು ತಾವು ಉಳಿಸಬೇಕಲ್ಲ. ಒಂದು ಕಡೆ ಮಹದೇಶ್ವರ ಬೆಟ್ಟ, ಮತ್ತೊಂದು ಕಡೆ ಬಿಳಿಗಿರಿರಂಗನ ಬೆಟ್ಟ, ಮತ್ತೊಂದುಕಡೆ ರಾಮದೇವರ ಗುಡ್ಡ, ಮತ್ತೊಂದು ಕಡೆ ಸಾವನದುರ್ಗ, ಮತ್ತೊಂದುಕಡೆ ಶಿವಗಂಗೆ, ಈ ರೀತಿ ರಾಜ್ಯದ ಮೂಲೆ ಮೂಲೆಯಲ್ಲಿರತಕ್ಕಂಥ ಗ್ರಾನೈಟ್ ಎಲ್ಲಾ ಕಡೆ ಲೂಟಿ ಮಾಡಿದ್ದಾರೆ. ನಾನು ಅದಕ್ಕಾಗಿಯೇ ಕೇಳುತ್ತಿದ್ದೇನೆ. ಈ ಬಗ್ಗೆ ನಡೆದಿರತಕ್ಕಂಥ ಅನ್ಯಾಯವನ್ನು ಸಮಗ್ರವಾಗಿ ಪರಿಶೀಲಿಸಿ, ಸರ್ಕಾರಕ್ಕೆ ಪರಿಶೀಲಿಸುವುದಕ್ಕೆ ಆತ್ಮಸ್ಥೈರ್ಯ ಇದ್ದರೆ, ಸರ್ಕಾರಕ್ಕೆ ಚಿಂತನೆ ಇದ್ದರೆ, ಮತ್ತು ಸರ್ಕಾರಕ್ಕೆ ಯಾವುದೇ, ಯಾರ ಆತಂಕವೂ ಇಲ್ಲದೆ, ಯಾರ ಒತ್ತಡಕ್ಕೂ ಮಣಿಯದೇ ಇದ್ದೇವೆಂದು ನೀವೇನಾದರೂ ಹೇಳುವುದಾದರೆ, ನಾಳೆ ಬೆಳಿಗ್ಗೆ ಹೈಕೋರ್ಟ್ ನ್ಯಾಯಾಧೀಶರಿಂದ ತನಿಖೆ ಮಾಡಿಸಲಿಕ್ಕೆ ಆಜ್ಞೆ ಮಾಡಿ.

ಆಗ ಎಷ್ಟು ಜನರು ಸಿಕ್ಕುತ್ತಾರೆ. ಬಹುತೇಕ ಜನ ಈ ಗ್ರಾನೈಟ್ ಲೂಟಿ ಮಾಡುತ್ತಿದ್ದಾರಲ್ಲ, ಇವರನ್ನೆಲ್ಲಾ ರಾಷ್ಟ್ರದ ಭದ್ರತಾ ಕಾನೂನು ಪ್ರಕಾರ ಒಳಗೆ ಹಾಕಬೇಕಾಗುತ್ತದೆ. ಯಾವುದೇ ದೇವಸ್ಥಾನದ ವಿಗ್ರಹವನ್ನು ಕದ್ದರೆ ಮೂರು ವರ್ಷ ಜೈಲು ಶಿಕ್ಷೆ ಎಂದು ಇದೆ. ಆ ವಿಗ್ರಹವನ್ನು ಮಾಡತಕ್ಕಂಥ ಕಲ್ಲನ್ನು ಕದ್ದುಕೊಂಡು ಹೋದರೆ, ಅವನಿಗೆ ಬಿಡುವುದು ಎಂದು ಹೇಳಿದರೆ ಇದು ಯಾವ ನೀತಿ? ಆದ್ದರಿಂದ, ಇಂತಹ ವಿಚಾರಗಳನ್ನು ನೀವು ಪತ್ತೆಹಚ್ಚಬೇಕು. ರಾಷ್ಟ್ರೀಯ ಭದ್ರತಾ ಕಾನೂನು ಪ್ರಕಾರ ಇವರನ್ನೂ ಒಳಗೆ ಹಾಕಬೇಕು. ನಾನು ಗ್ರಾನೈಟ್ ಬಗ್ಗೆ

ಕೂಗುತ್ತೇನೆಂದು ಹೇಳಿ, ನಿರಂತರವಾಗಿ ನನ್ನಮೇಲೆ ಅಪಪ್ರಚಾರ ಮಾಡಲಿಕ್ಕೆ ನನ್ನ ಚುನಾವಣೆಯಲ್ಲಿ ಬಂದರು. ಒಂದು ಓಟಿಗೆ 500 ರೂಪಾಯಿ ಎಂದು ಹೇಳಿದರು.

ಶ್ರೀ ಎಲ್.ಆರ್. ಶಿವರಾಮೇಗೌಡ : ಈ ರಾಜ್ಯದಲ್ಲಿ ಅಗ್ಗದ ಕಾಸಿಗೆ ಕೊಟ್ಟಂಥ ಕಲ್ಲುಗಳನ್ನು ಹೊರದೇಶದವರು ಗೋರಿಯಮೇಲೆ ಹಾಕುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಈಗ ಇಟಲಿ, ಜಪಾನ್ ಇನ್ನಿತರ 20 ರಾಷ್ಟ್ರಗಳಿಗೆ ಈ ಕಲ್ಲುಗಳು ಹೋಗುತ್ತಿದೆ. ನಮ್ಮ ಮಹದೇಶ್ವರ ಬೆಟ್ಟದ ಕಲ್ಲುಗಳು, ಬಿಳಗಿರಿ ರಂಗನ ಬೆಟ್ಟದ ಕಲ್ಲುಗಳು, ಅವರ ಗೋರಿಗಳಿಗೆ ಅಲ್ಲದಿದ್ದರೂ ಅವರ ವೈಭವ, ವಿಲಾಸ ಜೀವನಗಳಿಗೆ ಅವರ ಮನೆಯ ಮುಂದೆ ಸುಂದರವಾದಂಥ ತಾಣಗಳಿಗೆ, ಹೋಗಿದೆ. ಇದರಲ್ಲಿ ಅನುಮಾನ ಇಲ್ಲ. ಇದು ಸ್ಪಷ್ಟವಾದಂಥ ಅಭಿಪ್ರಾಯ ನಮ್ಮ ಕಲ್ಲು ಎಷ್ಟು ಸುಂದರವಾದಂಥ ಕಲ್ಲು. ಈ ಬಗ್ಗೆ ನಾನು ಒಂದು ಸಲಹೆ ಕೊಡುತ್ತೇನೆ. ಎಲ್ಲಾ ಖನಿಜಗಳು ಸೇರಿ ನಾನು ನಿಮಗೆ 10 ಕೋಟಿ ರೂಪಾಯಿ ಕೊಡುತ್ತೇನೆ. ನಮ್ಮ ಸರ್ಕಾರ ಈ ಗ್ರಾನೈಟ್‌ನಿಂದ ಒಂದು ವರ್ಷಕ್ಕೆ 70 ಲಕ್ಷ ರೂಪಾಯಿ ಬರುತ್ತದೆಂದು ಹೇಳುತ್ತಿದೆ. ರಾಜಧನ, ನನಗೆ ತಾವು ಏನೂ ಕೊಡಬೇಕಾಗಿಲ್ಲ. ಒಂದು ತಿಂಗಳು ಕಾಲ ನನಗೆ ತಾವು ಮಂತ್ರಿ ಮಾಡುವುದು ಬೇಡ. ಏಕೆಂದರೆ, ನಿಮ್ಮಲ್ಲಿಯೇ ಕೈಗೊಬ್ಬರು, ಕಾಲಿಗೊಬ್ಬರು ಕಿತ್ತಾಡುತ್ತಿದ್ದಾರೆ. ನಾನು ಅದಕ್ಕೆ ಬರುವುದಿಲ್ಲ, ಅದಕ್ಕೆ ಒಂದು ಸಮಿತಿಯನ್ನು ರಚನೆಮಾಡಿ ನನ್ನನ್ನು ಆ ಸಮಿತಿಯ ಅಧ್ಯಕ್ಷನನ್ನಾಗಿ ಮಾಡಿ ಅಥವಾ ಸದಸ್ಯನನ್ನಾಗಿ ಮಾಡಿ, ಒಂದು ತಿಂಗಳು ನನಗೆ ಅವಕಾಶ ಕೊಡಿ. ಈ ಸರ್ಕಾರಕ್ಕೆ ವರ್ಷಕ್ಕೆ ಒಂದಲ್ಲ, ಎರಡಲ್ಲ, ನೂರು ಕೋಟಿ ರೂಪಾಯಿಗಳ ಆದಾಯ ತೋರಿಸಿಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನೂರು ಕೋಟಿ ರೂಪಾಯಿ ಬಹಳ ಕಡಿಮೆಯಾಯಿತು. ಇಳಕಲ್ ಹತ್ತಿರ ಐದು ಸಾವಿರ ಕೋಟಿ ರೂಪಾಯಿ ಬೆಲೆ ಬಾಳುವ ಗ್ರಾನೈಟ್ ಇದೆ. ಅಲ್ಲಿ ಸುಲಿಗೆ ಆಗುತ್ತಿದೆ ಎಂದು ಹೇಳಿದಿರಿ. 2 ಸಾವಿರ ಕೋಟಿ ರೂಪಾಯಿ ಕಲ್ಲು ಮಂಗಳೂರು ಹತ್ತಿರ ಇದೆ ಎಂದು ಈ ಒಂದು ಮಟ್ಟದಲ್ಲಿ ಹೇಳುತ್ತಿರುವಾಗ, ನೂರು ಕೋಟಿ ರೂಪಾಯಿ ಕೊಟ್ಟರೆ ಬಾಕಿ ಆದಾಯ ಏನು ಆಗುತ್ತದೆ?

ಶ್ರೀ ವಾಟಾಳ್ ನಾಗರಾಜ್ : ತಮಗೆ ಹೇಳಬೇಕೆಂದರೆ ಒಂದು ವರ್ಷಕ್ಕೆ ನೀವು ತೆರಿಗೆ ಹಾಕುತ್ತೀರಲ್ಲಾ, ಯಾವ ತರಹ ತೆರಿಗೆ ಹಾಕಬೇಕು, ಯಾವ ರೀತಿ ಹಣ ವಸೂಲು ಮಾಡಬೇಕು, ಅದರ ಬಗ್ಗೆ ಯೋಚನೆ ಮಾಡಿ ಹೇಳುವುದಾದರೆ, ನಾನು ಬಹಳ ಕಡಿಮೆ ಹೇಳಿದ್ದೇನೆ. ಹಿಂದೆ ವೀರೇಂದ್ರ ಪಾಟೀಲರ ಸರ್ಕಾರ ಈ ಗ್ರಾನೈಟ್ ಉದ್ದಿಮೆಯನ್ನು ಕೊಡಬೇಕೆಂದು ಪ್ರಾರಂಭ ಮಾಡಿದಾಗ ನಾವು ವಿರೋಧ ಮಾಡಿದ್ದೆವು. ದಯವಿಟ್ಟು ಇದನ್ನು ಕೊಡಬೇಡಿ. ಸ್ವಲ್ಪ ತಾವು ನಮ್ಮ ಸಲಹೆಯನ್ನು ಕೇಳಿಕೊಂಡು ಕೊಡಬೇಕೆಂದು ಹೇಳಿದ್ದೆವು. ನನ್ನನ್ನೂ, ಮಾನ್ಯ ಸಿಂಧ್ಯರವರನ್ನೂ, ಕರೆದು ಮಾತನಾಡುತ್ತೇನೆಂದು ಹೇಳಿದ್ದೀರಿ. ಆಗ ಕಾರ್ಯದರ್ಶಿಯಾಗಿದ್ದಂಥ ಮಾನ್ಯ ಪ್ರಭುರವರು ಇಲ್ಲೇ ಇದ್ದಾರೆ. ಅವರು ಒಂದು ಸಾಕ್ಷಿ ಕಲ್ಲು ಇದ್ದಹಾಗೆ. ತಾವು, ನಮ್ಮನ್ನು ಕರೆದಿದ್ದೀರಿ. ಮಾತುಕತೆ ಆಡಿ, ನಿಜವಾಗಿ ಅನ್ಯಾಯ ನಡೆದಿದ್ದರೆ ಅದನ್ನು ತಡೆಗಟ್ಟಬೇಕೆಂದು ಪ್ರಾಮಾಣಿಕವಾಗಿ ಹೇಳಿದ್ದೀರಿ. ಎಲ್ಲಾ ವಿರೋಧ ಪಕ್ಷದವರೂ ಸೇರಿ ಒಂದು ಪತ್ರವನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಬರೆದಿದ್ದೆವು. ಆ ಪತ್ರವನ್ನು ಬರೆದು ಸುಮಾರು ಒಂದೂವರೆ ತಿಂಗಳಾಯಿತು. ನಾವು ಏನು ಬರೆದಿದ್ದೆವು ಎಂದರೆ, ನೀವು ಯಾರಿಗೋ ಹೊರಗಡೆಯವರಿಗೆ ಅಂದರೆ ಖಾಸಗಿಯವರಿಗೆ ಗ್ರಾನೈಟನ್ನು ಕೊಡಬೇಕೆಂದಿದ್ದೀರಂತೆ, ಆ ರೀತಿ ಕೊಡುವುದಕ್ಕೆ ಮುಂಚೆ ನಮ್ಮ ಜೊತೆ ಮಾತನಾಡಿ ಎಂದು ಹೇಳಿದೆವು. ನಮ್ಮ ಜೊತೆ ಮಾತನಾಡಿದಮೇಲೆ ಮುಂದೆ ನೀವು ಏನು

ಬೇಕಾದರೂ ನಿರ್ಧಾರವನ್ನು ಕೈಗೊಳ್ಳಿ ಎಂದು ಹೇಳಿದ್ದೆವು. ಆದರೆ ಇದುವರೆಗೂ ನಮ್ಮನ್ನು ಕರೆದು ಮಾತನಾಡತಕ್ಕ ಸೌಜನ್ಯವನ್ನೂ ಕೂಡ ಮಾನ್ಯ ಮುಖ್ಯ ಮಂತ್ರಿಗಳು ತೋರಿಸಲಿಲ್ಲ. ಆ ಪತ್ರಕ್ಕೆ ಬಹಳ ಜವಾಬ್ದಾರಿಯಿಂದ ಮಾನ್ಯ ಚಂದ್ರೇಗೌಡರೂ ಸಹಿ ಮಾಡಿದ್ದಾರೆ, ನಾನೂ ಮಾಡಿದ್ದೇನೆ, ರೈತ ಸಂಘದ ಮಾನ್ಯ ನಂಜುಂಡಸ್ವಾಮಿಯವರೂ ಮಾಡಿದ್ದಾರೆ, ಅದೇ ರೀತಿ ಮಾನ್ಯ ಸಿಂಧ್ಯರವರು, ಬೈರೇಗೌಡರು, ಯಡಿಯೂರಪ್ಪನವರೂ, ಶಿವರಾಮೇಗೌಡರೂ ಸಹಿ- ಮಾಡಿದ್ದಾರೆ. ಎಲ್ಲರೂ ಹೇಳಿದ್ದೇವೆ. ಆದರೆ ಅದನ್ನು ಸರ್ಕಾರದವರು ಗಣನೆಗೇ ತೆಗೆದುಕೊಳ್ಳಲಿಲ್ಲ ಎಂದರೆ ಅದು ಸರಿಯಲ್ಲ. ಮಾನ್ಯ ಮೊಯ್ಲಿಯವರೆ, ತಾವೂ ಇದ್ದೀರಿ. ತಾವು ಬಹಳ ಜವಾಬ್ದಾರಿ ಇರತಕ್ಕ ಸಚಿವರು. ತಮಗೆ ನಿಸರ್ಗದ ಬಗ್ಗೆ ಬಹಳ ಚಿಂತನೆ ಇದೆ. ನೀವು ಕಿವಿ ಇದ್ದರೂ ಇಲ್ಲದಂತೆ ಕುಳಿತುಕೊಳ್ಳುವುದನ್ನು ನಾನಂತೂ ಒಪ್ಪುವುದಿಲ್ಲ. ಈ ಬಗ್ಗೆ ತಾವು ಪರಿಣಾಮಕಾರಿಯಾಗಿ ನೋಡಬೇಕು. ಮಂಗಳೂರಿನಲ್ಲಿ ಏನಾಗಿದೆ ಎಂದು ಮಾನ್ಯ ಇದಿನಬ್ಬನವರಿಗೆ ಚೆನ್ನಾಗಿ ಗೊತ್ತಿದೆ. ಕಲ್ಲು ಕಲ್ಲು ಒಂದು ರೀತಿಯ ಕತೆ ಹೇಳುತ್ತಿವೆ.

ಮಾನ್ಯ ಅಧ್ಯಕ್ಷರೇ, ತಾವು ತೀರಾ ದೂರಕ್ಕೇನೂ ಹೋಗಬೇಡಿ. ಕೇವಲ ಒಂದು ಗಂಟೆ ಪ್ರಯಾಣ ಮಾಡಿದರೆ ಮಾನ್ಯ ಸಿಂಧ್ಯರವರ ಕ್ಷೇತ್ರ ಕನಕಪುರವನ್ನು ದಾಟಿದರೆ ಮುಂದೆ ದೊಡ್ಡ ಆಲಹಳ್ಳಿ ಕಡೆಗೆ ಎಡೆ ಮತ್ತು ಬಲಗಡೆಗೆ ಹೋದರೆ ಅಲ್ಲಿ ಎಲ್ಲಾ ಕಲ್ಲುಗಳನ್ನೂ ಚಿಂದಿ ಚಿಂದಿ ಮಾಡಿರುವುದು ಕಣ್ಣಿಗೆ ಕಾಣುತ್ತದೆ. ಕುವೈತ್‌ನಲ್ಲಿ ಸದ್ದಾಂ ಏನು ಯುದ್ಧವನ್ನು ನಡೆಸಿದ ಅಂಥ ಭೀಕರ ವಾತಾವರಣ ಅಲ್ಲಿ ಕಾಣಿಸುತ್ತದೆ. ನಮಗೆ ಅರಣ್ಯ ಬಹಳ ಮುಖ್ಯವಾದುದು. ಅರಣ್ಯದ ಬಗ್ಗೆ ಒಂದು ನೀತಿಯೇ ಇದೆ. ಸಂಜೆ 6 ಗಂಟೆಯಮೇಲೆ ಯಾರೂ ಕೂಡ ಅರಣ್ಯದೊಳಕ್ಕೆ ಹೋಗಬಾರದು, ಬೆಂಕಿ ಹಚ್ಚಬಾರದು, ವನ್ಯ ಪ್ರಾಣಿಗಳಿಗೆ ತೊಂದರೆಯಾಗಬಾರದು. ಪ್ರಾಣಿಗಳಿಗೆ ಅನ್ಯಾಯ ಮಾಡಬಾರದು ಎಂದು ಇದೆ. ತಮಗೆ ಹೇಳುತ್ತೇನೆ, ಚಾಮರಾಜ ನಗರ, ಯಳಂದೂರು, ಕೊಳ್ಳೇಗಾಲ, ಬಿಳಿಗಿರಿ ರಂಗನಬೆಟ್ಟ ಇಲ್ಲಿಯ ಅರಣ್ಯ ಪ್ರದೇಶದಲ್ಲಿ ಸುಮಾರು 38 ಜನರು ಕಲ್ಲುಗಳನ್ನು ತೆಗೆಯುತ್ತಿದ್ದಾರೆ. ಇವರನ್ನು ಅರಣ್ಯದೊಳಕ್ಕೇ ಬಿಡಬಾರದು. ಸಾಮಾನ್ಯವಾಗಿ ಅರಣ್ಯ ಪ್ರದೇಶದೊಳಕ್ಕೆ ಬಿಡಲೇಬಾರದು. ಆದರೆ ಇಂಥ ಪರಿಸ್ಥಿತಿಯಲ್ಲಿ ವನ್ಯ ಮೃಗಗಳ ರಕ್ಷಣಾ ಕಾಯಿದೆಯ ಪ್ರಕಾರ ಅರಣ್ಯದೊಳಕ್ಕೆ ಯಾರೂ ಕೂಡ ಹೋಗಲೇಬಾರದು. ಅಂಥಾದ್ದರಲ್ಲಿ ಒಂದು ದಿನದಲ್ಲಿ ಒಂದು ಸಾವಿರದಿಂದ 10 ಸಾವಿರದವರೆಗೆ ಸಿಡಿಮದ್ದುಗಳನ್ನು ಸಿಡಿಸುತ್ತಾರೆ. ಕಲ್ಲುಗಳನ್ನು ತೆಗೆಯಬೇಕಾದರೆ ಸಿಡಿಮದ್ದುಗಳನ್ನು ಸಿಡಿಸುತ್ತಾರೆ. ಸಂಜೆ 6 ಗಂಟೆಗೆ ಅಲ್ಲಿ ಹೋಗಿ ನಿಂತರೆ ಯುದ್ಧಭೂಮಿಯ ರೀತಿಯಲ್ಲಿ ಧಡ, ಧಡ ಎಂದು ಶಬ್ದ ಬರುತ್ತದೆ. ಹೀಗಾದರೆ ಯಾವ ಪ್ರಾಣಿಗಳು ಉಳಿಯುತ್ತವೆ? ಪ್ರಾಣಿಗಳ ರಕ್ಷಣೆ, ವನ್ಯ ಮೃಗಗಳ ರಕ್ಷಣೆ ಎಂಬುದು ಏನೂ ಇಲ್ಲ. ಅರಣ್ಯಕ್ಕೆ ಬೆಂಕಿ ಬಿದ್ದರೆ ಯಾರೂ ಕೇಳುವವರೇ ಇಲ್ಲ. ಪ್ರಾಣಿಗಳು ಸತ್ತರೆ ಕೇಳುವವರಿಲ್ಲ, ಆನೆಗಳು ಸತ್ತರೆ ಕೇಳುವವರಿಲ್ಲ; ಮರಗಳನ್ನು ಕದ್ದುಕೊಂಡು ಹೋದರೆ ಕೇಳುವವರಿಲ್ಲ. ಅಂದರೆ ಈ ರಾಜ್ಯದಲ್ಲಿ ಹೇಳುವವರೂ, ಕೇಳುವವರೂ ಯಾರೂ ಇಲ್ಲವೆ? ನಾನು ತಮಗೆ ಹೇಳುತ್ತೇನೆ. ಇಬ್ಬರು ಒಳ್ಳೆಯ ಅಧಿಕಾರಿಗಳಿದ್ದಾರೆ. ಕೊಳ್ಳೇಗಾಲದಲ್ಲಿ ಒಬ್ಬ ಅರಣ್ಯಾಧಿಕಾರಿ, ಚಾಮರಾಜ ನಗರದಲ್ಲಿ ಒಬ್ಬ ಅರಣ್ಯಾಧಿಕಾರಿ. ಈ ಇಬ್ಬರು ಒಳ್ಳೆಯ ಅದಿಕಾರಿಗಳಿದ್ದಾರೆ. ಉನ್ನತಾಧಿಕಾರಿಗಳು ಆಜ್ಞೆಯನ್ನು ಮಾಡಿ ಇಲ್ಲಿ ಕಲ್ಲುಗಳನ್ನು ತೆಗೆಯಬೇಕೆಂದು ಹೇಳಿದರೂ ಕೂಡ, ಅದು ಸಾಧ್ಯವಿಲ್ಲವೆಂದು ಹೇಳಿದರು. ನಿಜವಾಗಿಯೂ ನಾವು ಅವರಿಗೆ ಬಹುಮಾನವನ್ನು ಕೊಡಬೇಕು. ಅಂಥ ಅಧಿಕಾರಿಗಳು ನಮ್ಮಲ್ಲಿದ್ದಾರೆ.

ಮಾನ್ಯ ಅಧ್ಯಕ್ಷರೆ, ತಮಗೆ ಕೈಮುಗಿದು ಕೇಳಿಕೊಳ್ಳುತ್ತೇನೆ. ನಮ್ಮ ಅರಣ್ಯ ಉಳಿಯಬೇಕೆಂದು ಹೇಳುವುದಾದರೆ, ಅರಣ್ಯ ಸಂಪತ್ತು ಉಳಿಯಬೇಕೆಂದು ಖಂಡಿತವಾಗಿಯೂ

ಅರಣ್ಯ ಪ್ರದೇಶದಲ್ಲಿ ಗ್ರಾನೈಟ್ ತೆಗೆಯುವುದನ್ನು ಈ ಕೂಡಲೇ ತಾವು ನಿಲ್ಲಿಸಬೇಕು. ಆದುದರಿಂದ ನಾನು ಹೇಳುತ್ತಿದ್ದೇನೆ; ಈ ಇಲಾಖೆಗೆ ದೇಶಮುಖ್ ಎನ್ನತಕ್ಕ ಒಬ್ಬ ಮಂತ್ರಿ ಬಂದರು, ಅವರು ಹೋದರು, ನಂತರ ಜಿಗಜಿಣಗಿಯವರು ಮಂತ್ರಿಗಳಾಗಿ ಬಂದರು, ಅವರೂ ಹೋದರು. ಈಗ ಉಸ್ತಾದ್‌ರವರು ಮಂತ್ರಿಗಳಾಗಿ ಬಂದಿದ್ದಾರೆ. ತಮಗೆ ಹೇಳುವುದಾದರೆ, ಸ್ವಲ್ಪ ಹೆಚ್ಚುಕಡಿಮೆ ಇವರೆಲ್ಲರೂ ಕೂಡ ಬಿಜಾಪುರದವರೇ. ಇಂಥ ಒಂದು ಪರಿಸ್ಥಿತಿಯಲ್ಲಿ ನಾನು ಇದನ್ನು ಸರ್ಕಾರದಲ್ಲಿ ಬಹಳ ಗಂಭೀರವಾಗಿ ಕೇಳುತ್ತಿದ್ದೇನೆ. ಇವತ್ತು ಮಾನ್ಯ ಉಸ್ತಾದ್‌ಸಾಹೇಬರಿಗೆ ಹೇಳುತ್ತಿದ್ದೇನೆ. ಪಾಪ ಅವರಿಗೆ ಅರ್ಥವಾಗುವುದಿಲ್ಲ. ನಾನು ಏನೇ ಹೇಳಿದರು ಅವರು ಕೇಳುವುದಿಲ್ಲ. ನಾನು ಆಕಾಶ ಭೂಮಿಗೆ ಇಳಿಯುತ್ತಿದೆ, ಇಷ್ಟೊಂದು ಲೂಟಿಯಾಗುತ್ತಿದೆ ಎಂದು ಹೇಳಿದರೂ ಕೂಡ ಅವರಿಗೆ ಅರ್ಥವಾಗುವುದಿಲ್ಲ. ಅವರು ಇಲ್ಲ ಇಲ್ಲ, ರಾಷ್ಟ್ರೀಕರಣ ಮಾಡುವುದ ಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಇದು ಏನು ಅವರಿಗೆ ಅರ್ಥವಾಗುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

ಕಲ್ಲು ಕಂಟ್ರಾಕ್ಟರ್ಸ್ ಎಷ್ಟು ತೊಂದರೆಯನ್ನು ಕೊಟ್ಟಿದ್ದಾರೆನ್ನುವುದು ತಮಗ ಗೊತ್ತಿಲ್ಲ. ನಿರಂತರವಾಗಿ ತೊಂದರೆಯನ್ನು ಕೊಟ್ಟಿದ್ದಾರೆ. ತೊಂದರೆ ಎಂದರೆ ಹಾಗೀಗಲ್ಲ. ಅವರು ಕೊಡುತ್ತಿರತಕ್ಕಂಥ ತೊಂದರೆ ಒಂದೆರಡಲ್ಲ. ಇದನ್ನು ನಾನು ಅನುಭವಿಸುತ್ತಿದ್ದೇನೆ. ತಮಗೂ ಇದೇ ರೀತಿ ತೊಂದರೆ ಕೊಡುತ್ತಿದ್ದಾರೋ ಏನೋ? ತಮಗೆ ನಾನು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ ದಯವಿಟ್ಟು ಗ್ರಾನೈಟ್ ಕಲ್ಲಿನ ಲೂಟಿಯನ್ನು ಹಗಲು ದರೋಡೆಯನ್ನು ಸರ್ಕಾರದವರು ನಿಲ್ಲಿಸಬೇಕು. ಇದು ಅತ್ಯಂತ ಪರಿಣಾಮಕಾರಿಯಾದ ಕ್ರಮ ಎನ್ನುವ ಮಾತನ್ನು ತಮಗೆ ಹೇಳುತ್ತಿದ್ದೇನೆ.

ಉಪಾಧ್ಯಕ್ಷಣಿಯವರು : ಮಾನ್ಯ ವಾಟಾಳ್ ನಾಗರಾಜ್‌ರವರೇ ನೀವು ಈಗಾಗಲೇ 40 ನಿಮಿಷಗಳ ಕಾಲ ಮಾತನಾಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷಣಿಯವರೇ ಇನ್ನೊಂದು 35 ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ಇನ್ನು ಎರಡು ಸಬ್ಜೆಕ್ಟ್ ಬಗ್ಗೆ ಮಾತನಾಡಬೇಕಾಗಿದೆ.

ಒಬ್ಬ ಮಾನ್ಯ ಸದಸ್ಯರು : ಸಬ್ಜೆಕ್ಟ್ ಎಂದು ಹೇಳುವುದು ಇಂಗ್ಲಿಷ್ ಪದ.

ಶ್ರೀ ವಾಟಾಳ್ ನಾಗರಾಜ್: ಒಂದೊಂದುಸಾರಿ ನಿಮಗೆ ಕನ್ನಡವನ್ನೇ ಮಾತನಾಡುತ್ತಿದ್ದರೆ ನೀವೆಲ್ಲ ಮೇಲೆ ಬೀಳುತ್ತೀರಿ. ಇಂಗ್ಲಿಷ್ ಭಾಷೆಯ ಒಂದೊಂದು ಪದವನ್ನು ಸೇರಿಸಿ ನೀವು ಇಂಗ್ಲಿಷ್ ಪದವನ್ನು ಕೇಳಿ ಪಾವನವಾಗಲಿ ಎಂದು ಒಂದೊಂದು ಸೇರಿಸಬೇಕಾಗುತ್ತದೆ. ಈಗ ಮಂಗಳೂರು ಕನ್ನಡವು ಶುದ್ಧ ಕನ್ನಡ, ಹೈದರಾಬಾದ್ ಕನ್ನಡವೂ ಶುದ್ಧ ಕನ್ನಡ ನಮ್ಮ ಕನ್ನಡವು ಶುದ್ಧ ಕನ್ನಡ ಇದರಲ್ಲಿ ಅಶುದ್ಧವಾದಂಥ ಪರಿಸ್ಥಿತಿ ಏನೂ ಇಲ್ಲ. ತಾವು ಏನೂ ಚಿಂತೆ ಪಡಬೇಕಾಗಿಲ್ಲ. ನಾವು ತಮ್ಮ ಜೊತೆಗೆ ಸೇರಿದ್ದೇವೆ. ತಾವು ಬೇರೆಯೆಂದು ಭಾವಿಸಬಾರದು. ನಮ್ಮನ್ನು ತಾವು ಕೈಬಿಡಬಾರದು. ಯಾರನ್ನು ಕೈಬಿಟ್ಟರೂ ನಮ್ಮನ್ನು ಕೈಬಿಡಬಾರದು. ಕನ್ನಡದ ಪ್ರಶ್ನೆಬಂದಾಗ ನಾವು ಸಮಗ್ರವಾಗಿ ನಿಮ್ಮ ಜೊತೆಯಲ್ಲಿಯೇ ಇರುತ್ತೇವೆ. ಅದರಲ್ಲಿ ಏನು ಹಿಂದುಮುಂದಿಲ್ಲ.

ಸ್ವಾಮಿ ಕನ್ನಡ ಸಂಸ್ಕೃತಿ ಇಲಾಖೆಯ ಬಗ್ಗೆ ಸರ್ಕಾರದವರು ಹೇಳುತ್ತಾರೆ. ನಾವು ಆಕಾಶದಿಂದ ಭೂಮಿಗೆ ಇಳಿಯುತ್ತಿದ್ದೇವೆ. ಹಂಪೆಯಲ್ಲಿ ವಿಶ್ವವಿದ್ಯಾನಿಲಯವನ್ನು ಮಾಡುತ್ತಿದ್ದೇವೆ, ಮತ್ತು ಮೈಸೂರಿನಲ್ಲಿ ಎಲ್ಲ ಸಾಹಿತಿಗಳನ್ನು ಕವಿಗಳನ್ನು, ವರಕವಿ ಪುಟ್ಟಪ್ಪನವರನ್ನು ಕರೆಯಿಸಿದ್ದೇವೆ, ಅವರು ಬಂದಿದ್ದರು ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಅವರೇನು ಬರಲಿಲ್ಲ, ನೀವೇ ಹೋಗಿ ಕರೆದುಕೊಂಡು ಬಂದಿರಿ. ಬರಲೇಬೇಕು ತಮ್ಮ ಪಾದದೂಳಿ ಅಲ್ಲಿ ಇರಲೇಬೇಕೆಂದು ಹೇಳಿ ತಾವು ಅವರನ್ನು

ಕರೆದುಕೊಂಡು ಬಂದಿರಿ. ತಾವು ಆಶೀರ್ವಾದ ಮಾಡಬೇಕೆಂದು ಹೇಳಿ ಕರೆದುಕೊಂಡು ಬಂದಿರಿ. ನಾನು ಅವತ್ತು ಮೈಸೂರಿನಲ್ಲಿಯೇ ಇದ್ದೆ. ಸುಮಾರು 200 ಜನ ಸಾಹಿತಿಗಳು, ಕವಿಗಳು ಅಲ್ಲಿಗೆ ಬಂದರು. ಈಗಾಗಲೇ ಎರಡು ತಿಂಗಳು ಆಯಿತೆಂದು ಕಾಣುತ್ತದೆ. ಆಗಲೇ ಆ ಸಭೆಯನ್ನು ಮರೆತುಬಿಟ್ಟೆವು. ಏನು ಕಾರ್ಯಕ್ರಮವನ್ನು ಕೈಗೊಂಡಿದ್ದೀರಿ? ತಾವು ಕನ್ನಡದ ಬಗ್ಗೆ ಈ ಎರಡು ತಿಂಗಳಲ್ಲಿ ಕೈಗೊಂಡ ಕ್ರಮವೇನೆಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದು ಸೋಮವಾರ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಬರುತ್ತದೆ. ಎಷ್ಟು ದುಡ್ಡನ್ನು ಇಟ್ಟಿದ್ದೀರಿ. ಇದರಲ್ಲಿ 67 ಲಕ್ಷ ರೂಪಾಯಿಗಳನ್ನು ಒದಗಿಸಿ ಕನ್ನಡ ಸಂಸ್ಕೃತಿ ಇಲಾಖೆ 25 ಕಾರ್ಯಕ್ರಮಗಳನ್ನು ಕೊಟ್ಟಿದ್ದೀರಿ. ಮಂಗಳಾರತಿಗೆ ಕಾಸು ಹಾಕುತ್ತಾರೆ ಹಾಗೆ ಕನ್ನಡ ಸಂಸ್ಕೃತಿ ಇಲಾಖೆಯನ್ನು ತೀರ ಕಟ್ಟಕಡೆಯ ಇಲಾಖೆಯನ್ನಾಗಿ ಮಾಡಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನಿಮಗೆ ಹೇಳಬೇಕಾದರೆ, ಕನ್ನಡ ಸಂಸ್ಕೃತಿ ಇಲಾಖೆಯೇ ಬೇರೆ, ಕನ್ನಡ ವಿಶ್ವವಿದ್ಯಾಲಯ ಹಂಪೆಯಲ್ಲಿ ಏನು ಸ್ಥಾಪನೆ ಮಾಡುತ್ತೇವೆ ಅದು ಶಿಕ್ಷಣ ಇಲಾಖೆಯಲ್ಲಿ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಆದ್ದರಿಂದ ಈ ಇಲಾಖೆಯ ಅಭಿವೃದ್ಧಿಗೆ ಅಧ್ಯಕ್ಷರೆ 67 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಇನ್ನು ಯಾವುದೇ ಅಕಾಡೆಮಿಯನ್ನು ನೋಡುವುದಿಲ್ಲ. ಒಂದೂವರೆ ವರ್ಷವಾಯಿತು. ಸ್ವಾಮಿ ಏನಾಗಿದೆ, ಪಂಡಿತರು ಯಾರು ನಿಮಗೆ ಸಿಗಲಿಲ್ಲವೇ ಅದಕ್ಕೆ ಸಂಬಂಧಪಟ್ಟ ಅಧ್ಯಕ್ಷತೆಯನ್ನು ವಹಿಸಲು ಯೋಗ್ಯರಾಗಿರತಕ್ಕಂಥವರು ಯಾರು ಸಿಗಲಿಲ್ಲವೇ? ಅವರು ಯಾರು ಸಿಗದಿದ್ದರಿಂದ ಕೆಲಸಕ್ಕೆ ಬಾರದವರಿಗೆಲ್ಲ ಪದ್ಮಶ್ರೀ ಕೊಟ್ಟುಕೊಂಡು ಕುಳಿತಿದ್ದೀರಿ. ಅವರು ನಮ್ಮ ಕರ್ನಾಟಕದಲ್ಲಿ ಆಕಾಶದಿಂದ ಭೂಮಿಯವರೆಗೆ ಸೇವೆ ಮಾಡಿದ್ದಾರೆಂದು ಅವರಿಗೆ ಕೊಡಿಸಿಬಿಟ್ಟಿರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಪದ್ಮಶ್ರೀ ಕೊಡುವುದು ಕೇಂದ್ರ ಸರ್ಕಾರದವರು.

ಶ್ರೀ ಎಂ. ವೀರಪ್ಪ ಮೊಯಿಲಿ : ಪದ್ಮಶ್ರೀ ಪ್ರಶಸ್ತಿ ಕೊಡುವ ಬಗ್ಗೆ ನಮ್ಮ ಸರ್ಕಾರ ರೆಕಮಂಡ್ ಮಾಡುತ್ತದೆ. ಪು.ತಿ.ನ. ಅವರದ್ದು ನಾವು ರೆಕಮಂಡ್ ಮಾಡಿದ್ದೇವೆ. ಬಾಕಿಯವರನ್ನು ಎಷ್ಟುಮಂದಿ ಮಾಡಿದ್ದೇವೆಂದು ಉತ್ತರಕೊಡುವಾಗ ಹೇಳುತ್ತೇವೆ. ರಾಜ್ಯ ಸರ್ಕಾರ ಪದ್ಮಶ್ರೀ ಅಥವಾ ಪದ್ಮ ವಿಭೂಷಣ ಪ್ರಶಸ್ತಿಗೆ ರೆಕಮಂಡ್ ಮಾಡಿದವರನ್ನು ಬಿಟ್ಟು ಬೇರೆಯವರಿಗೆ ಕೇಂದ್ರ ಸರ್ಕಾರದವರು ಪ್ರಶಸ್ತಿಗಳನ್ನು ಕೊಡಬಹುದು. ಅವರಿಗೆ ಬೇಕಾದವರನ್ನು ಅವರು ಆಯ್ಕೆ ಮಾಡಿ ಪ್ರಶಸ್ತಿ ನೀಡಬಹುದು. ಅದಕ್ಕೆ ನಮ್ಮ ಶಿಫಾರಸ್ಸೇನು ಬೇಕಾಗಿಲ್ಲ.

ಶ್ರೀ ಬಸವರಾಜ್ ರಾಯರೆಡ್ಡಿ : ರಾಜ್ಯ ಪ್ರಶಸ್ತಿ ಕೊಟ್ಟವರಿಗೆ ಪದ್ಮಶ್ರೀ ಪ್ರಶಸ್ತಿ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನೀವು ಯಾರಿಗೆ ಬೇಕಾದರೂ ಪ್ರಶಸ್ತಿಗಳನ್ನು ಕೊಟ್ಟುಕೊಳ್ಳಿ. ಕತ್ತೆ ಕತ್ತಿಗೆ ಬೇಕಾದರೆ ಪ್ರಶಸ್ತಿ ಕಟ್ಟಿ, ನನ್ನ ಅಭ್ಯಂತರವಿಲ್ಲ. ನಿಮ್ಮ ವ್ಯವಸ್ಥೆ ಹಾಗೆ ಇದ್ದರೆ ನಾವು ಏನು ಮಾಡುವುದಕ್ಕಾಗುತ್ತದೆ?

ಶ್ರೀ ಆರ್.ಎನ್. ನಾಯಕ್ : ಪ್ರಶಸ್ತಿ ಪಡೆದವರು ಯಾರು ಏನು ಎಂದು ತಾವು ಹೇಳಿದರೆ ಒಳ್ಳೆಯದು. ಕನ್ನಡದ ಬಗ್ಗೆ ಅಭಿಮಾನ ಇಟ್ಟುಕೊಂಡಿರುವವರು ಕನ್ನಡದ ಕವಿಗಳಿಗೆ ಪ್ರಶಸ್ತಿ ಕೊಟ್ಟುದುದರ ಬಗ್ಗೆ ಎಷ್ಟು ಅಭಿಮಾನ ಇಟ್ಟುಕೊಂಡಿದ್ದೀರಿ

ಶ್ರೀ ವಾಟಾಳ್ ನಾಗರಾಜ್ : ನಾನು ಎಲ್ಲರನ್ನೂ ಕುರಿತು ಹೇಳುತ್ತಿಲ್ಲ. ಕವಿಗಳ ಬಗ್ಗೆಯಾಗಲಿ, ಸಾಹಿತಿಗಳ ಬಗ್ಗೆಯಾಗಲೀ, ಪಂಡಿತರ ಬಗ್ಗೆಯಾಗಲೀ ಹೇಳತಕ್ಕವನಲ್ಲ ನಾನು. ಆ ಪ್ರಶ್ನೆ ಅಲ್ಲ. 4 ವಾರದ ಹಿಂದೆ ಇಲ್ಲಸ್ಟ್ರೇಟೆಡ್ ವೀಕ್ಲಿ ಪತ್ರಿಕೆಯಲ್ಲಿ ಬಂದದ್ದನ್ನು ತಾವು ಓದಿರಬಹುದು. ಅದರಲ್ಲಿ ಕೆಲಸಕ್ಕೆ ಬಾರದ ಪ್ರಶಸ್ತಿಗಳು ಎಂದು 4 ಪುಟ ಬರೆದಿದ್ದಾರೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ನಿಮ್ಮಂಥವರು, ತಿಳಿವಳಿಕೆ ಇರತಕ್ಕವರು, ತಿಳಿದಿರತಕ್ಕವರು ಇದರ ಬಗ್ಗೆ ವಿಚಾರ ಮಾಡಬೇಕು. ಮಾನ್ಯ ರಂಗನಾಥ್ ಅವರು ಹಿರಿಯ ಸಮಾಜವಾದಿ ಧುರೀಣರು. ಸರ್ಕಾರದಲ್ಲಿದ್ದವರು, ಇರತಕ್ಕವರು; ಯಾರ್‍ಯಾರಿಗೆ ಏನೇನು ಪ್ರಶಸ್ತಿಗಳನ್ನು ಕೊಡಬೇಕೆಂಬುದನ್ನು ತಿಳಿದುಕೊಳ್ಳಬೇಕು. ರಾಜ್ಯೋತ್ಸವ ಪ್ರಶಸ್ತಿ ಕೊಟ್ಟಿರುವುದು ಎಲ್ಲಾ ಸರಿಯೇ? ಇಷ್ಟದ ಪ್ರಕಾರ ಲಿಸ್ಟ್ ತಯಾರಿಸುವುದು. ಕಿರಾಣಿ ಅಂಗಡಿಯವನಿಗೂ ಕೊಡುವುದು. ಆತ ಶಾಲು ಹೊದಿಸಿಕೊಂಡು ಮಹಾಮೇಧಾವಿಗಳ ಪಕ್ಕದಲ್ಲಿ ಕೂರಬೇಕು. ನಾವು ಅವರನ್ನು ನೋಡಿದ್ದೇವೆ. ಅದು ಪರಿಸ್ಥಿತಿಯಾಗಿದೆ.

ಶ್ರೀ ಆರ್.ಎನ್. ನಾಯಕ್ : ಕತ್ತೆ ಕೊರಳಿಗೆ ಕಟ್ಟುವುದರಿಂದ ಕುದುರೆಗೆ ಅವಮಾನವಾಗುತ್ತದೆ. ಯಾರನ್ನು ಕತ್ತೆ ಎಂದು ಹೇಳಿದಿರಿ ಅದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್ : ಆಗಬಹುದು, ಇನ್ನು ಏನು ಅನ್ನಬೇಕು? ನಾಯಿ ಎಂದು ಹೇಳಬೇಕೇ?

ಉಪಾಧ್ಯಕ್ಷಿಣಿಯವರು : ಆ ಭಾಷೆ ಉಪಯೋಗಿಸುವುದು ಬೇಡ ; ಯಾರಿಗೇ ಆಗಲಿ ಅದು ಬೇಡ, ತಮ್ಮ ಭಾಷಣವನ್ನು ಮುಂದುವರಿಸಿ.

ಶ್ರೀ ವಾಟಾಳ್ ನಾಗರಾಜ್ : ಅದರಲ್ಲಿ ತಪ್ಪೇನು ಇದೆ? ನಿಮ್ಮ ಸರ್ಕಾರ ಕತ್ತೆಯಂಥ ಸರ್ಕಾರ, ಎಮ್ಮೆಯಂಥ ಸರ್ಕಾರ ಅಂದರೇ ತಪ್ಪೇನು? ಎಮ್ಮೆ ಚರ್ಮ ಎನ್ನುತ್ತೇವೆ? ಅದರಲ್ಲಿ ತಪ್ಪೇನಿದೆ? ಅದು ತಪ್ಪಲ್ಲ.

ಶ್ರೀ ಎನ್.ಬಿ. ನಂಜಪ್ಪ : ನಾಗರಾಜ್ ಅವರು, ಕತ್ತೆ, ನಾಯಿ ಎಂದೆಲ್ಲ ಮಾತನಾಡುತ್ತಿರುವುದು ಸರಿಯೇ?

ಶ್ರೀ ಆರ್.ಎನ್. ನಾಯಕ್ : ಭಾಷೆ ಬಳಸುವುದು ಅವರವರ ಯೋಗ್ಯತೆ ಮೇಲೆ ಹೋಗುತ್ತದೆ. ಸರ್ಕಾರಕ್ಕೆ ಕತ್ತೆ ಅಂದರೆ ಏನೂ ಆಗಲಿಲ್ಲ.

ಶ್ರೀ ಬಸವರಾಜ್ ರಾಯರೆಡ್ಡಿ : ಕತ್ತೆ ಸರ್ಕಾರ ಎಂದರೆ ಭಾರ ಹೊರುವ ಸರ್ಕಾರ ಎಂದು. ಬಹಳ ಭಾರ ಹೊರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅಮೆರಿಕದವರ ಚುನಾವಣೆಯ ಗುರುತು ಕತ್ತೆ. ಅವರು ಅಧಿಕಾರ ನಡೆಸಿದ್ದಾರೆ, ಅಧಿಕಾರ ಚಲಾಯಿಸಿದ್ದಾರೆ. ಅದೇನು ಕೆಟ್ಟದ್ದಲ್ಲ. ಕತ್ತೆ ಬಹಳ ಪವಿತ್ರವಾದುದು. ಆ ಪದವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ನಾನು ತಯಾರಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಳೆ ಬರದಿದ್ದರೆ ಕತ್ತೆ ಪೂಜೆ ಮಾಡಿ ಕಾಲು ಹಿಡಿಯಬೇಕಾಗುತ್ತದೆ.

ಉಪಾಧ್ಯಕ್ಷಿಣಿಯವರು : ಈಗ ಕತ್ತೆ ವ್ಯಾಖ್ಯಾನ ಸಾಕು, ಮುಂದೆ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ತಾವು ಕೇಳಬೇಕು, ಕೇಳದಿದ್ದರೆ ಹೇಗೆ?

ಹಿಂದೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಬೇರೆ ರಾಜ್ಯದಲ್ಲಿ ಮಳೆ ಬರದೇ ಇದ್ದರೆ, ಹಳ್ಳಿಗಳಲ್ಲಿ ಮಳೆ ಬರದೆ ಇದ್ದರೆ ಕತ್ತೆಗಳಿಗೆ ಮದುವೆ ಮಾಡುತ್ತಿದ್ದರು.

ಶ್ರೀ ಆರ್.ಎನ್. ನಾಯಕ್: ನಿಮಗೆ ಅರ್ಜೆಂಟಾಗಿ ಕೆಲಸ ಆಗಬೇಕಾದರೆ, ಕತ್ತೆಯ ಕಾಲು ಹಿಡಿಯಬೇಕು ತಾನೆ?

ಶ್ರೀ ವಾಟಾಳ್ ನಾಗರಾಜ್: ಅಂತ ಹೇಳುತ್ತಾರೆ. ಅತ್ತೆಗೂ ಒಂದು ಕಾಲ, ಕತ್ತೆಗೂ ಒಂದು ಕಾಲ ಎಂದು ಹೇಳುತ್ತಾರೆ.

ಉಪಾಧ್ಯಕ್ಷಣಿಯವರು: ಸೊಸೆಗೆ?

ಶ್ರೀ ವಾಟಾಳ್ ನಾಗರಾಜ್: ಸೊಸೆಗಾ?

ಶ್ರೀ ಬಿ.ಎಂ. ಇದಿನಬ್ಬ: ಕತ್ತೆ ಮೇದಲ್ಲಿ ಮತ್ತೆ ಮೇವಿಲ್ಲ ಎಂದು ಹೇಳುವುದುಂಟು.

ಶ್ರೀ ವಾಟಾಳ್ ನಾಗರಾಜ್: ಆದ್ದರಿಂದ ಕತ್ತೆ ಪದ ಇದೆಯಲ್ಲ ಇದು ಬಹಳ ಪವಿತ್ರವಾದುದು. ಇದನ್ನು ಲಘುವಾಗಿ..

ಉಪಾಧ್ಯಕ್ಷಿಣಿಯವರು: ಸಂಸ್ಕೃತಿ ಇಲಾಖೆ ಮೇಲೆ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್: ಸಂಸ್ಕೃತಿ ಇಲಾಖೆ ಆ ಪರಿಸ್ಥಿತಿಗೆ ಬಂದಿದೆ.

ಶ್ರೀ ಬಸಪ್ಪ ಎಚ್. ಬನ್ನಿಕೋಡ್: ಬಹಳ ಚೆನ್ನಾಗಿ ಹೇಳುತ್ತಾರೆ. ಕತ್ತೆ ಉದಾಹರಣೆ ಕೊಟ್ಟಿದ್ದು ಬಹಳ ಸೂಕ್ತವಾಗಿದೆ. ಕತ್ತೆ ಭಾರ ಹೊರುವಂಥದ್ದು. ಪ್ರಭಾವಶಾಲಿಗಳಿಗೆ ಪ್ರಶಸ್ತಿ ಕೊಟ್ಟಿದ್ದಾರೆ ಎಂಬ ಮಾತನ್ನು ಹೇಳಿದ್ದಾರೆ.

ಡಾ. ಎನ್.ಬಿ. ನಂಜಪ್ಪ: ನಾಯಿ ಅಂದರೆ ಒಳ್ಳೆಯ ಪದ ತಾನೆ?

ಶ್ರೀ ವಾಟಾಳ್ ನಾಗರಾಜ್: ಹೌದು.

ಡಾ. ಎನ್.ಬಿ. ನಂಜಪ್ಪ: ನಾಗರಾಜ್‌ರವರು ನಾಯಿಯ ಹಾಗೆ ಮಾತನಾಡುತ್ತಿದ್ದಾರೆ ಎಂದು ನಾವು ಹೇಳಿದ್ದರೆ ಹೇಗಿರುತ್ತದೆ? ಚೆನ್ನಾಗಿರುತ್ತದೆಯೇ?

ಶ್ರೀ ಆರ್.ಎನ್. ನಾಯಕ್: ನೀವು ಹೇಳಿದ್ದನ್ನು ಒಪ್ಪುವುದಕ್ಕಾಗುವುದಿಲ್ಲ. ಅವರು ಮನುಷ್ಯರಾಗಿ ಮಾತನಾಡುತ್ತಿದ್ದಾರೆ ಎಂದು ನಾವು ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಒಂದು ಪ್ರಶ್ನೆ. ನಾನು ಮನುಷ್ಯನಾಗಿ ಮಾತನಾಡುತ್ತಿದ್ದೇನೆ. ನಾನು ಪ್ರಾಣಿ ಆಗಿದ್ದರೆ ಅವರೆಲ್ಲರೂ ಪ್ರಾಣಿಗಳು. ಆದ್ದರಿಂದ ನಾನು ಮನುಷ್ಯನಾಗಿ ಮಾತನಾಡುವುದರಿಂದ ಅವರೆಲ್ಲರನ್ನೂ ನಾನು ಮನುಷ್ಯರು ಎಂದು ತಿಳಿದಿದ್ದೇನೆ. ನಂಜಪ್ಪ ನಾಯಕರನ್ನು ಮನುಷ್ಯರು ಅಂತಲೇ ತಿಳಿದಿರುವುದು.

(ಡಾ. ಎನ್.ವಿ. ನಂಜಪ್ಪನವರು ಕುಳಿತುಕೊಂಡು ಏನೋ ಹೇಳಿದರು.)

ಶ್ರೀ ವಾಟಾಳ್ ನಾಗರಾಜ್ : ನಂಜಪ್ಪನವರೇ ಸ್ವಲ್ಪ ಗಂಭೀರವಾಗಿ ಕುಳಿತುಕೊಳ್ಳಿ. ನನಗೆ ಗೊತ್ತಿದೆ ನಿಮ್ಮ ವ್ಯಾಖ್ಯಾನ. ನಾಯಿ, ಕುರಿ ಕಥೆ ಹೇಳಬೇಡಿ. ಗೂಬೆಯಂಥ ಮನುಷ್ಯ ಎಂದು ಹೇಳುವುದಕ್ಕಾಗುತ್ತದೆಯೇ?

ಡಾ. ಎನ್.ಬಿ. ನಂಜಪ್ಪ : ಕತ್ತೆ ಸರ್ಕಾರ ಎಂದು ಹೇಳಿದರೆ ಏನರ್ಥ?

ಶ್ರೀ ವಾಟಾಳ್ ನಾಗರಾಜ್ : ಕತ್ತೆ ಚರ್ಮದಂಥ ಸರ್ಕಾರ, ಎಮ್ಮೆ ಚರ್ಮದಂಥ ಸರ್ಕಾರ.

ಉಪಾಧ್ಯಕ್ಷರು : ಶ್ರೀಯುತ ವಾಟಾಳ್ ನಾಗರಾಜರೇ, ತಾವು ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಕನ್ನಡ, ಸಂಸ್ಕೃತಿ ಇಲಾಖೆ .....

(ಡಾ. ನಂಜಪ್ಪ ಅವರು ಮತ್ತೆ ಕೆಲವರು ಕುಳಿತುಕೊಂಡು ಏನೋ ಹೇಳಿದರು.)

ಶ್ರೀ ವಾಟಾಳ್ ನಾಗರಾಜ್ : ನಿಜ, ನಿಜ. ನೀವು ಏತಕ್ಕೆ ಹೆಗಲು ಮುಟ್ಟಿ ಮುಟ್ಟಿ ನೋಡಿಕೊಳ್ಳಬೇಕು?

ಶ್ರೀ ಎಂ.ಪಿ. ವೆಂಕಟೇಶ್ : ಡಾ. ನಂಜಪ್ಪನವರಿಗೆ ವಾಟಾಳ್ ನಾಗರಾಜ್ ಅವರು ಏನೇನು ಮಾತನಾಡಿದ್ದರೆ ಎಂಬುದನ್ನು ಕಳುಹಿಸಿಕೊಡಿ.

ಉಪಾಧ್ಯಕ್ಷರು : ನಂಜಪ್ಪನವರೇ, ಅವರು ಮುಗಿಸುತ್ತಿದ್ದಾರೆ. ದಯವಿಟ್ಟು ತಾವು ಕುಳಿತುಕೊಳ್ಳಬೇಕು. ತಾವು ಮುಗಿಸಬೇಕು. ಶ್ರೀ ವಾಟಾಳ್ ನಾಗರಾಜ್ ಅವರೇ ತಾವು ಒಂದು ಗಂಟೆ ಹೊತ್ತು ಮಾತನಾಡಿದ್ದೀರಿ. * * *

ಶ್ರೀ ವಾಟಾಳ್ ನಾಗರಾಜ್ : ..........***.........***.........

*** ಈ ಪದಗಳನ್ನು ಉಪಾಧ್ಯಕ್ಷಿಣಿಯವರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿರುತ್ತದೆ.

ಡಾ. ಎನ್.ಬಿ. ನಂಜಪ್ಪ : ಈ ಸದನದ ಚೌಕಟ್ಟಿನಲ್ಲಿ ಉಪಯೋಗಿಸತಕ್ಕಂಥ ಭಾಷೆಯನ್ನು ಉಪಯೋಗಿಸಿ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಹಾಗೆಯೇ ಮಾತನಾಡುತ್ತಿದ್ದೇನೆ. ಹೊರಗೆ ಮೊಗಸಾಲೆಯಲ್ಲಿ ಮಾತನಾಡುತ್ತಿದ್ದೇನಾ ನಾನು?

ಶ್ರೀ ಕೆ.ಹೆಚ್. ರಂಗನಾಥ್ : ಸದನದ ಚೌಕಟ್ಟಿನಲ್ಲಿ ಮಾತನಾಡುತ್ತಿದ್ದೇನೆ ಎಂದು ಮಾನ್ಯ ಸದಸ್ಯರು ಹೇಳಿದರು. ಸದನದ ಚೌಕಟ್ಟಿನ ಭಾಷೆ ಏನಿದೆ ಅದರಂತೆ ಈಗ ತಾನೇ ಅವರು ಬಳಸಿದ ಭಾಷೆ ಇಲ್ಲ. ಮಾನ್ಯ ಸದಸ್ಯರನ್ನು "ಏನು ನಂಜಪ್ಪ ನೀನು, ನಾನೇನಂತೆ ಎಂದು" ಹೇಳುವುದಲ್ಲ. ತಾವೂ ಕೂಡ (ಉಪಾಧ್ಯಕ್ಷರಿಗೆ) ನಮ್ಮನ್ನು ಕರೆಯುವಾಗ ಏನು ರಂಗನಾಥ್ ಎಂದು ಹೇಳುವುದಕ್ಕೆ ಬರುವುದಿಲ್ಲ. ಮಾನ್ಯ ಸದಸ್ಯರು ಎಂದು ಹೇಳಬೇಕಾಗುತ್ತದೆ. ಇನ್ನೊಬ್ಬ ಸದಸ್ಯರನ್ನು ನೇರವಾಗಿ ಸಂಭೋಧಿಸತಕ್ಕದ್ದು ಕೂಡ ನಮ್ಮ ಸದನದ ಚೌಕಟ್ಟಿನ ವ್ಯಾಪ್ತಿಯ ಭಾಷೆಯಲ್ಲಿ ಬರುವುದಿಲ್ಲ. ಅದೇನು ಹಾಗೆ ಯಾವ ದೃಷ್ಟಿಯಿಂದ ಹೇಳಿದರೋ. ಬಹುಮಟ್ಟಿಗೆ ಅವರು ವಿಷಾದಪಡುವುದಾದರೆ ಬಹಳ ಒಳ್ಳೆಯದು. ಇಲ್ಲದೇಹೋದರೆ ತಾವು ಅದನ್ನು ತೆಗೆಸಿಹಾಕುವುದು ಒಳ್ಳೆಯದು. ಕಡತದಲ್ಲಿ ಅದು ಹೋಗತಕ್ಕದ್ದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್ : ನಂಜಪ್ಪನವರು, ನಾನು ಬಹಳ ಸ್ನೇಹಿತರು. ನಾನು ಏನು ನಂಜಪ್ಪನವರೇ ಎಂದಾಕ್ಷಣ ಅವರೇನೂ ಚಿಂತೆ ಪಟ್ಟಿಲ್ಲ. ಆ ರೀತಿ ಹೇಳುವುದು ತಮಗೆ ಸರಿಯಲ್ಲ ಎಂದು ಹೇಳುವುದಾದರೆ ನನ್ನದೇನೂ ಇಲ್ಲ. ನಾನು ವಿಷಾದಪಡುವುದಕ್ಕೆ ಸಿದ್ಧನಿದ್ದೇನೆ. ಅದಕ್ಕೇನಂತೆ.

ಶ್ರೀ ಕೆ.ಹೆಚ್. ರಂಗನಾಥ್ : ನಮ್ಮ ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಅದಲ್ಲ. ಅದು ಸದನದ ಭಾಷೆ ಅಲ್ಲ. ಅವರು ಚಿಂತೆ ಪಡದೇ ಇರಬಹುದು. ನಾವು ಚಿಂತೆಪಡುತ್ತೇವೆ. ಮಾನ್ಯ ಸದಸ್ಯರು ಅನ್ನಬಹುದು, ಅವರು ಅನ್ನಿಸಿಕೊಳ್ಳಬಹುದು. ಆ ಪ್ರಶ್ನೆ ಬೇರೆ. ಆದರೆ ಸದನದಲ್ಲಿ ಆ ರೀತಿ ಬಳಸತಕ್ಕದ್ದು ಸರಿಯಲ್ಲ. ನೇರವಾಗಿ ಸಂಬೋಧನೆ ಮಾಡತಕ್ಕದ್ದಲ್ಲ. ಒಂದೊಂದು ಸಾರಿ ಏನಾದರೂ ಆಗುತ್ತದೆ, ನಾವು ಸುಮ್ಮನೆ ಇರುತ್ತೇವೆ. ಆದರೆ ಅದೇ ಒಂದು ಪರಿಪಾಠ ಆದರೆ ಬಹಳ ಕಷ್ಟವಾಗುತ್ತದೆ. ಅದು ಸದನದ ಭಾಷೆ ಅಲ್ಲ. ಅವರು ವಿಷಾದಪಟ್ಟರೆ ಆ ಮಾತು ಬೇರೆ. ಇಲ್ಲದೇ ಇದ್ದರೆ ತಾವು ಎಕ್ಸ್‌ಪಂಜ್ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಂಜಪ್ಪ ಎಂದು ನಾನು ಏನು ಹೇಳಿದ್ದೇನೆ. ತೆಗೆಯಿರಿ ಸ್ವಾಮಿ ಅದನ್ನು. ಅದಕ್ಕೇನಂತೆ. ತಮಗೆ ಬೇಡ ಅಂದರೆ ತೆಗೆಯಿರಿ. ನಾನು ಉದ್ದೇಶಪೂರ್ವಕವಾಗಿ ಹೇಳಿಲ್ಲ. ಬೇಡ ಅಂದರೆ ತೆಗೆಯಿರಿ. ಅಧ್ಯಕ್ಷರೇ

ತೆಗೆಯಿರಿ. ನನಗೂ ಅವರಿಗೂ ಇರುವ ಸ್ನೇಹದಿಂದ ಹೇಳಿದ್ದೇನೆ ಅಷ್ಟೆ. ತಮಗೆ ಬೇಡ ಅಂದರೆ ಆ ಪದವನ್ನು ತೆಗೆಯಿರಿ.

ಉಪಾಧ್ಯಕ್ಷರು : ಆಯಿತು.

ಶ್ರೀ ಕೆ.ಹೆಚ್. ರಂಗನಾಥ್ : ಸದನದಲ್ಲಿ ಮಾತನಾಡುವಾಗ ಮಾನ್ಯ ಸದಸ್ಯರು ಎಂದು ಸಂಭೋಧಿಸಿ ಮಾತನಾಡಬೇಕಾಗುತ್ತದೆ. I am raising a point of order. ಅವರೇ ಹಿಂತೆಗೆದುಕೊಂಡರೆ ಆ ಪ್ರಶ್ನೆ ಬೇರೆ. ಇಲ್ಲದಿದ್ದರೆ ಕಡತದಿಂದ ತೆಗೆಯಬೇಕು.

Madam Deputy Speaker : I agree with Sri. K.H. Ranganath and see that it is expunged.

ಶ್ರೀ ವಾಟಾಳ್ ನಾಗರಾಜ್ : ಏನು ನಂಜಪ್ಪನವರೇ ಅಂತ ಹೇಳಿದ್ದನ್ನು ತೆಗೆದುಬಿಡಿ ಸ್ವಾಮಿ. ಅವರು ಹೇಳಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್ : ನೀನು ಎಂದು ಹೇಳಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ನೀನು ಅಂತ ಹೇಳಲಿಲ್ಲ, ಎಂದೆಂದಿಗೂ ಹೇಳಿಲ್ಲ, ನೀನು ಅಂತ ಹೇಳಿದ್ದರೆ ನೀವು ಹೇಳುವ ಶಿಕ್ಷೆಗೆ ಗುರಿಯಾಗುತ್ತೇನೆ. ತೆಗೆಯಿರಿ ಸ್ವಾಮಿ. ಆ ಮಾತು ಹೇಳಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ತಾವು ರೆಕಾರ್ಡ್ ತರಿಸಿ ನೋಡಿ. ಹಿಂದಿನ ಕಾಲದ ಒಂದು ಪ್ರೆಸಿಡೆಂಟ್ ಸಹ ಇದೆ. ಅಧ್ಯಕ್ಷರದ್ದು ಡಿಸಿಷನ್ ಕೂಡ ಇದೆ. ಮಾನ್ಯ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಅಂದಿನ ವಿರೋಪಕ್ಷದ ಸದಸ್ಯರು ಇಲ್ಲಿ ನಾಯಕರಿದ್ದಾಗ ನಿಜಲಿಂಗಪ್ಪನವರು ಬಾಯಿತಪ್ಪಿ ಹಾಗೆ ಅಂದಾಗ ಒಂದು ಡಿಸಿಷನ್ ಆಗಿದೆ. ಪ್ರೆಸ್ ಮಾಡಿ ಇದರ ಬಗ್ಗೆ ಅಧ್ಯಕ್ಷರ ಒಂದು ಡಿಸಿಷನ್ ಆಗಿದೆ. ನಾನು ಏಕೆ ಇದನ್ನು ಹೇಳಿದೆ ಎಂದರೆ ನಾವು ಬಳಸತಕ್ಕಂತಹ ಭಾಷೆ ಕೂಡ ಸರಿಯಾಗಿರಬೇಕು. ನನಗೆ ನೀನು ಎಂದು ಕೇಳಿಸಿದ ಹಾಗಾಯಿತು. He is not supposed to address him. He is only to address the Hon'ble Speaker.

ಉಪಾಧ್ಯಕ್ಷರು : ನಾನು ತರಿಸಿಕೊಡುತ್ತೇನೆ. ಆ ರೀತಿ ಏನಾದರೂ ಇದ್ದರೆ ಎಕ್ಸ್‌ಪಂಜ್ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾನು ನೀನು ಎಂದು ಹೇಳತಕ್ಕಂತಹ ಪದವನ್ನು ನನ್ನ ಜೀವನದಲ್ಲೇ ಉಪಯೋಗಿಸುವುದಿಲ್ಲ. ನಾನು ಎಲ್ಲರ ಬಗ್ಗೆ ಕೂಡ ಗೌರವದಿಂದ ಹೇಳತಕ್ಕಂತಹ ಮನುಷ್ಯ. ಅವರಿಗೆ ಅದು ಹಾಗೆ ಕೇಳಿಸಿರಬಹುದು. ನೀನು ಎನ್ನತಕ್ಕಂತಹ ಪದವನ್ನು ನಾನು ಬಳಸಿದ್ದರೆ ಅದೇನಾದರೂ ಕಡತದಲ್ಲಿದ್ದರೆ ಅದನ್ನು ನನಗೂ ತೋರಿಸಬೇಕು. ನಾನು ಅಂದಿದ್ದೇನೆಯೇ ಇಲ್ಲವೇ ಎಂಬುದನ್ನು ತಾವು ತರಿಸಿನೋಡಿ.

ಉಪಾಧ್ಯಕ್ಷರು : ನಾಗರಾಜರವರೇ ತಾವು ಪ್ರಾರಂಭ ಮಾಡಿ 1 ಗಂಟೆಯಾಯಿತು. ಇನ್ನು 5 ನಿಮಿಷದಲ್ಲಿ ಮುಗಿಸಿಬಿಡಿ.

ಶ್ರೀ ವಾಟಾಳ್ ನಾಗರಾಜ್ : ಇನ್ನು 20 ನಿಮಿಷದಲ್ಲಿ ಮುಗಿಸುತ್ತೇನೆ.

ಉಪಾಧ್ಯಕ್ಷರು : ಬೇರೆಯವರು ಮಾತನಾಡಲಿಕ್ಕೆ ನೀವೇ ಸಹಕಾರ ಕೊಡಬೇಕು. ಇನ್ನೂ 3-4 ಜನರು ಮಾತನಾಡುವವರಿದ್ದಾರೆ ಇದಿನಬ್ಬ ಅವರಿಗೆ ಅವಕಾಶ ಕೊಡಿ ಎಂದು ನೀವೇ ಹೇಳಿದಿರಿ.

ಶ್ರೀ ಬನ್ನಿಕೋಡ್ ಹೆಚ್. ಬಸಪ್ಪ : ಎಲ್ಲರಿಗೂ ಇಂತಿಷ್ಟು ಸಮಯವೆಂದು ನಿಗದಿ ಮಾಡಿಕೊಡಿ. ಅದರಂತೆ ಮುಗಿಸಲಿ.

ಶ್ರೀ ವಾಟಾಳ್ ನಾಗರಾಜ್ : ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಉಪಾಧ್ಯಕ್ಷರೇ ಈ ಬಾರಿ ಮಾನ್ಯ ಮುಖ್ಯಮಂತ್ರಿಗಳು ತಂದಿರತಕ್ಕಂತಹ .....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಅತ್ಯಂತ ವಿಷಾದದಿಂದ ನಾನು ಈ ಸಭೆಯನ್ನು ತ್ಯಾಗಮಾಡಿ ಹೊರಗೆ ಹೋಗುತ್ತಿದ್ದೇನೆ. ಪ್ರಾಮಾಣಿಕವಾಗಿ ಮಾತನಾಡತಕ್ಕಂತಹವರಿಗೆ ಮಧ್ಯೆ ಅಡ್ಡಿಪಡಿಸಿದರೆ ರಕ್ಷಣೆ ಕೊಡತಕ್ಕಂಥಾದ್ದು ಸರಿಯಲ್ಲವೆಂದು ಹೇಳಿ ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಸದನದಲ್ಲಿ ಆಸಕ್ತಿಯಿಂದ ಚರ್ಚೆಯಲ್ಲಿ ಭಾಗವಹಿಸಿ ಸರಕಾರದ ಕೆಲಸದ ಬಗ್ಗೆ ಸ್ವಲ್ಪ ಟೀಕೆ ಮಾಡತಕ್ಕಂತಹ ಸದಸ್ಯರು ಬಡ್ಜೆಟ್ ಬಗ್ಗೆ ಮಾತನಾಡುವಾಗ 10 ನಿಮಿಷ ಹೆಚ್ಚಿಗೆ ತೆಗೆದುಕೊಂಡರೆ ಅಂತಹ ಸಂದರ್ಭದಲ್ಲಿ ಏನೂ ಆಗುವುದಿಲ್ಲ. ಎಷ್ಟು ಜನ ಅದರ ಬಗ್ಗೆ ಆಸಕ್ತಿ ವಹಿಸಿ ಕೆಲಸ ಮಾಡುತ್ತಿಲ್ಲ. ವಿಷಯಗಳನ್ನು ಓದಿ ಸಂಗ್ರಹಣೆ ಮಾಡಿ ಹೇಳುತ್ತಿದ್ದಾರೆ. ಅವರು ಹೇಳತಕ್ಕಂತಹ ಶೈಲಿ ಕೆಲವರಿಗೆ ಹಿಡಿಸದೇ ಇರಬಹುದು. ಈ ಸಭೆಗೆ ಅಗೌರವ ತರತಕ್ಕಂತಹ ವಿಚಾರವಿದ್ದರೆ ಅದನ್ನು ಕಡತದಿಂದ ತೆಗೆದುಹಾಕತಕ್ಕಂತಹ ಹಕ್ಕು ನಮಗೆ ಇದೆ. 4-5 ಬಾರಿ ಅವರು ವಿಧಾನಸಭೆಗೆ ಗೆದ್ದು ಬಂದಿದ್ದಾರೆ. ಅವರಿಗೆ ಅಪಾರವಾದ ಅನುಭವ ಇದೆ. ಅವರಿಗೆ ತಾವು ಅವಕಾಶ ಕೊಡಬೇಕು.

ಉಪಾಧ್ಯಕ್ಷರು : ನಾನು ಏನು ಹೇಳಿದೆ ಎಂದರೆ ಇನ್ನು 5 ನಿಮಿಷದಲ್ಲಿ ಮುಗಿಸಿ ಎಂದು ಹೇಳಿದೆ ಅಷ್ಟೆ. ಬನ್ನಿಕೋಡ್‌ರವರು ಹಾಗೂ ಇನ್ನೂ ಕೆಲವರು ಮಾತನಾಡಬೇಕೆಂದಿದ್ದಾರೆ. ಈ ಕಡೆ ಯಾರು ಮಾತನಾಡುತ್ತಾರೋ ಗೊತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹೊಸ ಸದಸ್ಯರಿಗೆ ಅವಕಾಶ ಮಾಡಿಕೊಡಬೇಕು. ಇಲ್ಲವೆಂದು ಹೇಳುವುದಿಲ್ಲ. ಎಲ್ಲರಿಗೂ ಮಾತನಾಡಲು ಅವಕಾಶ ಕೊಡಬೇಕು. ಬನ್ನಿ ಕೋಡ್‌ರವರಿಗೆ ಸಮಯ ನೀಡಬಾರದೆಂದು ಯಾರೂ ಹೇಳುವುದಿಲ್ಲ. ವಾಟಾಳ್ ನಾಗರಾಜ್‌ರವರನ್ನು ಕರೆಯಿಸಿ ಅವರಿಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಿ. ಅವರು ಇನ್ನೂ ಪೂರ್ತಿ ಮಾಡಿಲ್ಲ.

ಶ್ರೀ ಬನ್ನಿಕೋಡ್ ಹೆಚ್. ಬಸಪ್ಪ : ಎಲ್ಲರಿಗೂ ಸಮಯವನ್ನು ಹಂಚಿಕೊಡಿ.

ಉಪಾಧ್ಯಕ್ಷರು : ಅವರು ಹೊರಗೆ ಹೋಗಿದ್ದಾರೆ. ಇಲ್ಲ ಆಯಿತು. ಶ್ರೀ ಇದಿನಬ್ಬನವರು ನಿಂತಿದ್ದಾರೆ. ಅವರು ಮಾತನಾಡಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರು ವಾಪಸ್ಸು ಬಂದಮೇಲೆ ಅವಕಾಶ ಕೊಡಿ.

ಉಪಾಧ್ಯಕ್ಷರು : ಆಯಿತು.

\+ ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಉಪಾಧ್ಯಕ್ಷಿಣೆಯವರೆ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕ ಆಯವ್ಯಯಪತ್ರವನ್ನು ನಾನು ಸಂಪೂರ್ಣವಾಗಿ ಸ್ವಾಗತಿಸಿ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಎಲ್ಲಾ ವಿಚಾರಗಳನ್ನು ಹೇಳುವುದಕ್ಕೆ ಅವಕಾಶವಿಲ್ಲ. ಆದರೂ ಕೂಡ ಕಂಡುಕೊಂಡಂತಹ ವಿಚಾರ .....

ಉಪಾಧ್ಯಕ್ಷರು : ಮಾನ್ಯ ಸದಸ್ಯರಾದ ಇದಿನಬ್ಬರವರೇ, ತಾವು ಆದಷ್ಟು ಬೇಗ 10-15 ನಿಮಿಷಗಳಲ್ಲಿ ತಮ್ಮ ಭಾಷಣ ಮುಗಿಸಿದರೆ ಇನ್ನು ಮೂರ್‍ನಾಲ್ಕು ಜನಗಳಿಗೆ ಮಾತನಾಡಲಿಕ್ಕೆ ಅವಕಾಶ ಕೊಡಬಹುದು.

ಶ್ರೀ ಬಿ.ಎಂ. ಇದಿನಬ್ಬ : ಆಯಿತು. ದುರ್ಬಲ ವರ್ಗಗಳ ಕಲ್ಯಾಣ ಕಾರ್ಯಗಳಿಗೋಸ್ಕರ ಸಾಮಾಜಿಕ, ಆರ್ಥಿಕ ನೀತಿ ಅವರ ಬೆನ್ನೆಲುಬು. ದುರ್ಬಲವರ್ಗದವರಿಗೆ ಶೇಕಡ 32ರಷ್ಟು ಮೀಸಲಿರಿಸಲಾಗಿದೆಯೆಂದು ಹೇಳಲಾಗಿದೆ. ಮೀಸಲಾತಿಯನ್ನು ನಿರ್ಧರಿಸಿರುವುದರಿಂದ ಮೊದಲು ಶೇಕಡ 18ರಷ್ಟು ಇತ್ತು, ಈಗ 32ರಷ್ಟು ಮಾಡಬೇಕೆಂದಿದ್ದಾರೆ. ಅದೇ ರೀತಿಯಾಗಿ ಡಾ. ಅಂಬೇಡ್ಕರ್ ಅವರು ಒಮ್ಮೆ ಸಂಸತ್ತಿನಲ್ಲಿ ಹೀಗೆಂದಿದ್ದರು:

"ನಮ್ಮಲ್ಲಿ ರಾಜಕೀಯ ಸಮಾನತೆ ಇದೆ. ಆದರೆ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಅಸಮಾನತೆ ಉಳಿದಿದೆ. ನಾವು ಆದಷ್ಟು ಬೇಗನೆ ಈ ವೈಪರಿತ್ಯವನ್ನು ತೊಡೆದುಹಾಕಬೇಕು".

ಅದಕ್ಕಾಗಿ ಇವತ್ತು ದುರ್ಬಲವರ್ಗದವರಿಗೆ ಮೊದಲ ಆದ್ಯತೆಯ ಕಾಯಕ್ರಮವನ್ನು ಇಟ್ಟುಕೊಂಡು ಈ ಆಯವ್ಯಯ ಪತ್ರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅನೇಕ ಸೂಚನೆಗಳನ್ನು ಮಾಡಿದ್ದಾರೆ. ಇದು ಕಾರ್ಯರೂಪಕ್ಕೆ ಬಂದರೆ ಇದಕ್ಕೆ ಅಧಿಕಾರಿಗಳು ಕೂಡ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದರೆ, ಇದನ್ನು ಕಾರ್ಯರೂಪಕ್ಕೆ ತಂದರೆ ನಿಜವಾಗಿಯೂ ಇದು ಒಳ್ಳೆಯ ಕೆಲಸವೆಂದು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಅದೇ ರೀತಿಯಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಎಂದು ಒಂದುಂಟು. ಅದಕ್ಕೆ 1990-91ರಲ್ಲಿ 100 ಲಕ್ಷ ರೂಪಾಯಿಗಳನ್ನು ಇಟ್ಟಿದ್ದರು. ಅದು ಇನ್ನು ಹೆಚ್ಚಿನ ಕೆಲಸ ಮಾಡಲಿವೆಯೆಂದು ಈ ವರ್ಷ 240 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. 2100 ಫಲಾನುಭವಿಗಳಿಗೆ ಅದರಿಂದ ಉಪಕಾರ ಮಾಡಬೇಕೆಂದು ಆಲೋಚನೆ ಮಾಡಿದ್ದಾರೆ. ಅಲ್ಪಸಂಖ್ಯಾತರ ಅಂದರೆ ಮುಸ್ಲಿಮರಾಗಲೀ, ಕ್ರಿಶ್ಚಿಯನ್ನಾಗಲೀ ಜೈನರಾಗಲೀ ಇವತ್ತು ಅವರಿಗೆ ಅನೇಕ ಸಮಸ್ಯೆಗಳಿವೆ. ಅದನ್ನು ಪೂರ್ತಿ ಮಾಡಲಿಕ್ಕೆ ಒಳ್ಳೆಯ ರೀತಿಯ ಕೆಲಸ ಕೊಟ್ಟು, ಒಂದು ಮಾರ್ಚಿಯಿಂದ ಮತ್ತೊಂದು ಮಾರ್ಚಿಯವರೆಗೆ ಒಂದು ವರ್ಷದವರೆಗೆ ಹಣವನ್ನು ಇಟ್ಟಿದ್ದಾರೆ. ಇದನ್ನು ಅಧಿಕಾರಿಗಳು ಒಳ್ಳೆಯ ರೀತಿಯಲ್ಲಿ ನೋಡಿಕೊಂಡು ಅದರಂತೆ ಖರ್ಚುಮಾಡಿದರೆ ಅಲ್ಪಸಂಖ್ಯಾತರಿಗೆ ಉಪಕಾರ ಸಿಕ್ಕಿದಂತಾಗುತ್ತದೆ.

ಆ ರೀತಿ ಮಾಡಿದರೆ ನಿಜವಾಗಿಯೂ 240 ಲಕ್ಷ ರೂಪಾಯಿ ಇಟ್ಟಿದ್ದು ಉಪಕಾರಕ್ಕೆ ಬೀಳುತ್ತದೆಂದು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಅದೇ ರೀತಿಯಲ್ಲಿ ಹಿಂದುಳಿದ ವರ್ಗಗಳವರ ಅಭಿವೃದ್ಧಿ ನಿಗಮನ ಎಂದು ಉಂಟು. ಅದಕ್ಕೆ 1990-91ನೇ ಸಾಲಿನಲ್ಲಿ 117 ಲಕ್ಷ ರೂಪಾಯಿ ಇಟ್ಟಿದ್ದರು. ಈ ವರ್ಷ ಅಂದರೆ 1991-92ಕ್ಕೆ 400 ಲಕ್ಷ ರೂಪಾಯಿ ಇಟ್ಟಿದ್ದಾರೆ. ಇದು ಬಹಳ ಒಳ್ಳೆಯ ಸೂಚನೆ. ಏಕೆಂದರೆ ಹಿಂದಿನ ವರ್ಷಕ್ಕಿಂತಲೂ ಹಿಮ್ಮಡಿ ಮಾಡಿದ್ದಾರೆ. ಹಿಂದುಳಿದ ವರ್ಗಗಳವರ ಅಭಿವೃದ್ಧಿಗೆ ಹೆಚ್ಚಿನ ಒತ್ತನ್ನು ಕೊಟ್ಟು ಈ ಆಯವ್ಯಯ ಪಟ್ಟಿಯಲ್ಲಿ ಕೊಟ್ಟಿದ್ದಾರೆ. ನಿಜವಾಗಿಯೂ ನೋಡಿದರೆ ಈ ಆಯವ್ಯಯ ಪಟ್ಟಿಯಲ್ಲಿ ಬಡವರ, ಹಿಂದುಳಿದ ವರ್ಗಗಳವರ ಶೋಷಣೆಗೆ ಒಳಪಟ್ಟವರ ಅಲ್ಪಸಂಖ್ಯಾತರ ಮತ್ತು ದಲಿತರ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಇಟ್ಟುಕೊಂಡು ಆಯವ್ಯಯ ಪಟ್ಟಿಯನ್ನು ತಯಾರು ಮಾಡಿದ್ದಾರೆ. ಮುಖ್ಯ ಮಂತ್ರಿಗಳು ಈ ವಿಷಯದಲ್ಲಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಈ ರಾಜ್ಯದಲ್ಲಿ ಹಿಂದುಳಿದವರು, ಅಲ್ಪಸಂಖ್ಯಾತರು, ದಲಿತರು ಶೋಷಣೆಗೆ ಒಳಗಾದವರು ಜಾಸ್ತಿಯಿರುವ ಇವರಿಗೆ 175 ತಾಲ್ಲೂಕುಗಳಲ್ಲಿ ದಾಮಾಷ ಪ್ರಕಾರ ಅವರಿಗೆ ಒಳ್ಳೆಯದು. ಆದರೆ ಎಲ್ಲರಿಗೂ ಒಳ್ಳೆಯದಾಗುತ್ತದೆ. ಕೆಳಗಿನವರು ಕೆಳಗಿದ್ದರೆ ಕೇವಲ 5-10 ಪರ್ಸೆಂಟ್ ಮಾತ್ರ ಇರುವ ಜನ ಮುಂದೆ ಬಂದರೆ ಅದರಿಂದ ಕರ್ನಾಟಕ ರಾಜ್ಯಕ್ಕೆ ಒಳ್ಳೆಯದಾಗುವುದಿಲ್ಲ. ಆದ್ದರಿಂದ ಆಯವ್ಯಯಪಟ್ಟಿಯಲ್ಲಿ ಆ ಕಡೆಗೆ ಹೆಚ್ಚಿನ ಗಮನವನ್ನು ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ವೃದ್ಧಾಪ್ಯವೇತನ, ವಿಧವಾ ಮಾಸಾಶನ. ಇದು 50 ರೂಪಾಯಿ ಇದ್ದದನ್ನು ಈಗ

75 ರೂಪಾಯಿ ಮಾಡಿದ್ದಾರೆ. ಇದು ಬಹಳ ದೊಡ್ಡ ಸಾಹಸದ ಕೆಲಸ. ಏಕೆಂದರೆ ಬಡ ಜನ 50 ರೂಪಾಯಿ ಸಿಕ್ಕುವಾಗಲೇ ಪ್ರಾರ್ಥನೆ ಮಾಡುತ್ತಿದ್ದರು, ನಮಗೆ ಏನೂ ಇಲ್ಲ ಸರ್ಕಾರ 50 ರೂಪಾಯಿಗಳನ್ನಾದರೂ ಕೊಡುತ್ತಿದೆ, ನಮ್ಮನ್ನು ನೋಡಿಕೊಳ್ಳುವವರು ಯಾರೂ ಇಲ್ಲ, ಗಂಡುಮಕ್ಕಳಿಲ್ಲ. ನಮಗೆ ಸಿಗುತ್ತಿದೆಯೆಂದು ಅವರು ಪ್ರಾರ್ಥನೆ ಮಾಡುತ್ತಿದ್ದರು. ಇವತ್ತು ಅಂತಹವರಿಗೆ 75 ರೂಪಾಯಿ ಸಿಗುವಾಗ ಅವರು ಮತ್ತೂ ಸಂತೋಷಪಡುತ್ತಾರೆ. ಅದೇ ರೀತಿಯಲ್ಲಿ ಮಧ್ಯಾಹ್ನದ ಊಟ ಕೊಡುವಂತಹ ಒಂದು ಕಾರ್ಯಕ್ರಮ. ಈ ಆಯವ್ಯಯಪತ್ರದಲ್ಲಿ ಏನೂ ಇಲ್ಲವೆಂದು ಹೇಳುವುದು ಬಹಳ ಸುಲಭ. ಒಳ್ಳೆಯದು ಏನುಂಟು ಅದನ್ನು ಮೆಚ್ಚತಕ್ಕ ಗುಣ ನಿಮಗೆ ಇರಬೇಕು. ಮಧ್ಯಾಹ್ನ ಊಟದ ವ್ಯವಸ್ಥೆ ಮಾಡಿರತಕ್ಕ ಕಾರ್ಯಕ್ರಮ ಏನಿದೆ ಅದು ಬಹಳ ಒಳ್ಳೆಯದು. ಶಾಲೆಗಳಲ್ಲಿ ಕಲಿಯತಕ್ಕ ಮಧ್ಯಮವರ್ಗಗಳ ಮಕ್ಕಳಿಗೆ ಇದು ಬಹಳ ಉಪಕಾರ ತರತಕ್ಕ ವಿಚಾರ. ವಿದ್ಯಾಭ್ಯಾಸಕ್ಕೆ ಹಾತೊರೆಯುವ ಬಡವರ ಮಕ್ಕಳಿಗೆ ಇದರಿಂದ ಬಹಳ ಪ್ರಯೋಜನವಾಗುತ್ತದೆ. ನನ್ನ ಮನಸ್ಸಿಗೆ ಸಂತೋಷ ತರತಕ್ಕ ವಿಚಾರವೇನೆಂದರೆ, ಕೋಮುಗಲಭೆಯಾಗಿ ಇಷ್ಟೆಲ್ಲ ನಮ್ಮ ರಾಜ್ಯದಲ್ಲಿ ಅನಾಹುತಗಳಾದರೂ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧನೆ ಮಾಡಿದ್ದಾರೆ. ಇದಕ್ಕಾಗಿ ಕಳೆದವರ್ಷ 167 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಈ ವರ್ಷ ಇದಕ್ಕಾಗಿ 195 ಕೋಟಿ ರೂಪಾಯಿ ಚಿಲ್ಲರೆ ಹಣವನ್ನು ಇಟ್ಟಿದ್ದಾರೆ. ಇದು ಬಹಳ ಒಳ್ಳೆಯ ವಿಷಯ. ಅಗ್ನಿಶಾಮಕದಳಗಳನ್ನು ಹೆಚ್ಚು ಮಾಡುವ ವಿಷಯ ಈ ಆಯವ್ಯಯದಲ್ಲಿ ಉಂಟು. ಇದಕ್ಕಾಗಿ 13 ಕೋಟಿ ರೂಪಾಯಿಗಳನ್ನು ತೆಗೆದು ಇಟ್ಟಿದ್ದಾರೆ. ಇದು ಬಹಳ ಮುಖ್ಯ. ಬೆಂಕಿಯನ್ನು ಹಾಕಿ ನಿರಪರಾಧಿಗಳನ್ನು ಸುಡತಕ್ಕದ್ದನ್ನು ಕಂಡಿದ್ದೇವೆ. ರಾತ್ರೋರಾತ್ರಿ ಬೆಂಕಿಇಟ್ಟು ಗಲ್ಲಿ ಗಲ್ಲಿಗಳಲ್ಲಿ ಸುಡತಕ್ಕ ಕಾರ್ಯಕ್ರಮವನ್ನು ನಾವು ನೋಡಿರತಕ್ಕದ್ದು ಇದೆ. ಅನೇಕ ಕಡೆಗಳಲ್ಲಿ ಚೆನ್ನಪಟ್ಟಣದಲ್ಲಾಗಲೀ, ರಾಮನಗರದಲ್ಲಾಗಲೀ, ಕೋಲಾರದಲ್ಲಾಗಲೀ, ಹೊಸದುರ್ಗದಲ್ಲಾಗಲೀ, ಚೆನ್ನರಾಯ ಪಟ್ಟಣದಲ್ಲಾಗಲೀ, ಸೋಮವಾರಪೇಟೆಯಲ್ಲಾಗಲೀ, ತುಮಕೂರಿನಲ್ಲಾಗಲೀ, ಸುಳ್ಯಾದಲ್ಲಾಗಲೀ ಇದನ್ನೇ ನಾವೆಲ್ಲ ಕಂಡಿದ್ದೇವೆ. ಬೆಂಕಿ ಇಟ್ಟು ಸುಟ್ಟುಹಾಕುವಂತಹ ಸಂದರ್ಭದಲ್ಲಿ ಅಗ್ನಿಶಾಮಕದಳಗಳು ಇದ್ದರೆ ಬೆಂಕಿಯನ್ನು ಆರಿಸಲಿಕ್ಕೆ ಅನುಕೂಲವಾಗುತ್ತದೆ. ಅಗ್ನಿಶಾಮಕದಳ ಕೂಡಲೇ ಬರುವಂತಹ ವ್ಯವಸ್ಥೆಯನ್ನು ಮಾಡಬೇಕು. ಕೆಲವು ಕಡೆ ಆ ವ್ಯವಸ್ಥೆಯಿಲ್ಲ. ಅದರಿಂದ ಅನೇಕ ಅನಾಹುತಗಳು ಸುಲಭವಾಗಿ ಜಾಸ್ತಿಯಾಗುವುದಕ್ಕೆ ಕಾರಣವಾಗಿದೆ. ಅಗ್ನಿಶಾಮಕದಳಕ್ಕೆ 13 ಕೋಟಿ ರೂಪಾಯಿ ಎತ್ತಿಟ್ಟಿರತಕ್ಕದ್ದು ನಿಜವಾಗಿಯೂ ಹೊಗಳತಕ್ಕ ಮತ್ತು ಪ್ರಶಂಸನೀಯವಾದ ವಿಚಾರ. ಕಟ್ಟಕಡೆಯದಾಗಿ ಕನ್ನಡ ಸಂಸ್ಕೃತಿಯ ಇಲಾಖೆಯ ಬಗ್ಗೆ ಹೇಳುತ್ತೇನೆ. ಇನ್ನು ಅನೇಕರು ಮಾತನಾಡುವವರು ಇದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರು ಸಹ ಹೇಳಿದರು. ಇದು ದುಃಖದ ವಿಚಾರ. ಕರ್ನಾಟಕವೆಂದು ನಾವು ಹೇಳಿ, ಕರ್ನಾಟಕ ವಿಧಾನಮಂಡಲವೆಂದು ನಾವು ಹೇಳಿ ಕರ್ನಾಟಕವೆಂದು ಹೇಳುತ್ತೇವೆ, ಕೇರಳವೆಂದು ಹೇಳುತ್ತೇವೆ, ಅದೇ ರೀತಿಯಲ್ಲಿ ತೆಲುಗುದೇಶವೆಂದು ಹೇಳುತ್ತೇವೆ.

ಕೇರಳದಲ್ಲಿ ತಾವು ಹೋಗಿ ನೋಡಬೇಕು. ಅಲ್ಲಿ ಅವರು ಮಲೆಯಾಳಕ್ಕೆ ಕೊಡತಕ್ಕಂಥ ಪ್ರಾಶಸ್ತ್ಯ, ಸಾಹಿತ್ಯದಲ್ಲಾಗಲೀ, ಪತ್ರಿಕಾ ವಿಭಾಗದಲ್ಲಾಗಲೀ, ಅಲ್ಲಿ ವಿಧಾನಸಭೆಯಲ್ಲಿ ಮಾತನಾಡತಕ್ಕಂಥ 144 ಜನ ಎಂ.ಎ. ಬಿ.ಎ. ಆದಂಥ ಇಷ್ಟು ಕೂಡ ಮಲೆಯಾಳದಲ್ಲಿಯೇ ಮಾತನಾಡತಕ್ಕಂಥವರು. ಸ್ಪೀಕರ್ ಕೂಡ ಮಲೆಯಾಳದಲ್ಲಿ ಮಾತನಾಡತಕ್ಕಂಥ ಒಂದು ಪರಿಪಾಠವನ್ನು ಕೇರಳದಲ್ಲಿ ಇಟ್ಟುಕೊಂಡಿದ್ದಾರೆ. ಇದೇ ರೀತಿ ತಮಿಳನಾಡಿನಲ್ಲಿ ಸಹ ಇಟ್ಟುಕೊಂಡಿದ್ದಾರೆ. ಆದರೆ ಕನ್ನಡ ನಾಡಿನಲ್ಲಿ ಔದಾರ್ಯ, ಬಹಳವಾದ ದಾಕ್ಷಿಣ್ಯ, ಎಲ್ಲರೂ ಬೇಕು ಎಂದು ಹೇಳುತಕ್ಕಂಥ ಒಂದು ಭಾವನೆ.

ಇವತ್ತು ನಿಜಕ್ಕೂ ಶ್ರೀ ವಾಟಾಳ್ ನಾಗರಾಜ್ ಅವರು ಹೇಳಿದ ಮಾತುಗಳು ಬಹಳ ಅರ್ಥಪೂರ್ಣವಾದವು. ಬೇರೆ ಬೇರೆ ಕಡೆಯಿಂದ ಬಂದಿರತಕ್ಕಂಥ, ಯಾರೂ ಬರಬಾರದು ಅಂತ ಅಲ್ಲ. ಆದರೆ ಬೇರೆ ಕಡೆಯಿಂದ ಬಂದಂಥವರು ನೂರು ಕೋಟಿ, ಇನ್ನೂರು ಕೋಟಿ ಎಂದು ಸಂಪಾದನೆ ಮಾಡುವಾಗ ಕನ್ನಡಿಗರು ಇಲ್ಲಿ ಒದ್ದಾಡುತ್ತಿದ್ದಾರೆ. ಅವರಿಗೆ ಸರಿಯಾದಂಥ ಕೆಲಸ ಇಲ್ಲ. ಸರೋಜಿನಿ ಮಹಿಷಿಯ ಆ ವರದಿಯನ್ನು ಕೂಡ ಜಾರಿಮಾಡಿ ಕೆಲಸ ಕೊಡತಕ್ಕಂಥ ಕಾರ್ಯಕ್ರಮ ಆಗಿಲ್ಲವೆಂದು ಹೇಳುವುದು ನೋಡಿದರೆ ಏನು ಹೇಳಬೇಕು? ಕರ್ನಾಟಕ... ಕರ್ನಾಟಕ. ಇದು ಭಾಷಾವಾರು ರಾಜ್ಯದ ನೆಲೆಯಲ್ಲಿ ಬಂದಿರುವಾಗ, ಇದರ ಅರ್ಥ ಏನೆಂದರೆ, ಭಾಷಾವಾರು ರಾಜ್ಯದ ಅರ್ಥವೇ ಅವರವರ ರಾಜ್ಯ ಒಳ್ಳೆಯದಾಗಬೇಕು ಎನ್ನುವಂಥಾದ್ದು. ಇವತ್ತು ಕರ್ನಾಟಕ, ಕನ್ನಡಕ್ಕೆ ಒಳ್ಳೆಯದಾಗಬೇಕು, ಕನ್ನಡ ಭಾಷೆ ಒಳ್ಳೆಯದಾಗಬೇಕು, ಕನ್ನಡ ಸಾಹಿತ್ಯ ಒಳ್ಳೆಯದಾಗಬೇಕು. ಕನ್ನಡ ಸಂಸ್ಕೃತಿಯ ಈ ಎಲ್ಲ ಕಾರ್ಯಕ್ರಮಗಳೂ ಮೇಲೆದ್ದು ಬರಬೇಕು ಅಂತ ಇದಕ್ಕೆ 50 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಇದಕ್ಕೆ ಐದು ಕೋಟಿ ರೂಪಾಯಿಗಳಾದರೂ ಇರಬೇಕಿತ್ತು ಎಂದು ನನ್ನ ಆಸೆ. ಏಕೆಂದರೆ 60 ವರ್ಷಗಳ ಹಿಂದೆ, ಈಗಿನ ಸ್ಥಿತಿ ಆಗಿನದ್ದಕ್ಕಿಂತ ನೂರುಪಾಲು ಜಾಸ್ತಿಯಾಗಿದೆ. ಶ್ರೀ ಕುವೆಂಪು ಅವರು ಹೇಳುತ್ತಾರೆ-

ಸಾಯುತಿದೆ ನಿಮ್ಮ ನುಡಿ
ಓ ಕನ್ನಡದ ಕಂದರಿರಾ
ಹೊಸನುಡಿಯ ಹೊರೆಯಿಂದ ಕುಸಿದು ಕುಗ್ಗಿ
ನಿರಿನಿಟಿಲು ನಿಟಿಲೆಂದು ಮುದಿಮೂಳೆ ಮುರಿಯುತಿದೆ
ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ
ಸಾಯುತಿದೆ ನಿಮ್ಮ ನುಡಿ-ಓ ಕನ್ನಡದ ಕಂದರಿರಾ
ರಾಜನುಡಿಯೆಂದೊಂದು
ದೇವ ನುಡಿಯೆಂದೊಂದು
ರಾಷ್ಟ್ರ ನುಡಿಯೆಂದೊಂದು ಹತ್ತಿಜಗ್ಗಿ
ನಿರಿನಿಟಿಲು ನಿಟಿಲೆಂದು ಮುದಿಮೂಳೆ
ಮುರಿಯುತಿದೆ ಕನ್ನಡಮ್ಮ ಬೆನ್ನು ಬಳುಗಿ ಬಗ್ಗಿ
ಮಕ್ಕಳೇ ಕೆಲರು ಬಾಯ್ಮುಚ್ಚಿ ಹಿಡಿದಿಹರು ನುಗ್ಗಿ
ಮೊಲೆವಾಲಿ-ನೊಡಗೂಡಿ ಬಂದನುಡಿ ತಾಯಿನುಡಿ
ಕೊಲೆಗೈದರುಮ್ಮನನೇ ಕೊಲಿಸಿದಂತೆ
ತಾಯ್ಮುತ್ತು ಕೊಡುವೊಂದು ನಿಮ್ಮ ಕೆನ್ನೆಯಮೇಲೆ
ಅದು ಪೋಣಿಸಿದ ಮುತ್ತಿನಂತೆ
ಉತ್ತರದ ಕಾಶಿಯಲಿ ಕತ್ತಿಮಿಂದ್ಯೆತರಲು
ದಕ್ಷಿಣ ದೇಶಕರು ಕುದುರೆಯಹುದೆ
ತಾಯಿತ್ತ ಮೊಲೆಹಾಲೆ ನಿಮ್ಮಮೈಗಾಗದಿರೆ
ಹೊತ್ತ ಹೊರೆಫಲಕಾರಿ ನೆತ್ತರಹುದೇ!

ಅಂತ ಹೇಳಿ ರಾಷ್ಟ್ರಕವಿ ಕುವೆಂಪು ಅವರು 50 ವರ್ಷಗಳ ಹಿಂದೆ ಹೇಳಿದ್ದಾರೆ. ಕನ್ನಡದ ಈ ದುರ್ಗತಿಯನ್ನು, ಕನ್ನಡ ಸಾಹಿತ್ಯದ ಈ ದುರ್ಗತಿಯನ್ನು, ಕನ್ನಡ ನುಡಿಯ ದುರ್ಗತಿಯನ್ನು ಇಲ್ಲಿ ನೋಡಿದರೆ, ಇವತ್ತು ಅದರ ನೂರು ಪಾಲು ಜಾಸ್ತಿಯಾಗಿದೆ. ಉದಾಹರಣೆ ಹೇಳುವುದಿದ್ದರೆ ಮಂಗಳೂರಿನಲ್ಲಿ ಇವತ್ತು ಯಾವುದೇ ಒಂದು ಸರ್ಕಲ್‌ನಲ್ಲಿ ನಿಂತು ನೋಡಿದರೆ, ನೂರಕ್ಕೆ ತೊಂಬತ್ತು ಜನ ಮಲೆಯಾಳದಲ್ಲಿ ಮಾತನಾಡತಕ್ಕಂಥ ಜನರಲ್ಲದೆ ಕನ್ನಡದಲ್ಲಿ ಮಾತನಾಡತಕ್ಕಂಥ ಜನರನ್ನು ಅಲ್ಲಿ ನೋಡಲಿಕ್ಕೆ ಸಾಧ್ಯವಿಲ್ಲ. ಇವತ್ತು ಬೆಂಗಳೂರಿನಲ್ಲೂ ಯಾವುದಾದರೂ ಸರ್ಕಲ್‌ನಲ್ಲಿ ನಿಂತು ಕೇಳಿದರೆ, ತೆಲುಗು, ತಮಿಳು ಮಾತನಾಡತಕ್ಕಂಥ ಜನ ನೂರಕ್ಕೆ ಎಪ್ಪತ್ತು-ಎಂಬತ್ತು ಭಾಗದಷ್ಟಲ್ಲದೆ, ಕನ್ನಡದಲ್ಲಿ ಮಾತನಾಡುವವರು ಐದು-ಹತ್ತು ಪರ್ಸೆಂಟ್ ಕೂಡ ಸಿಗುವುದು ಕಷ್ಟ. ಅವತ್ತು ಕೇರಳದ ಕೇಳಪ್ಪನ್ ಕೇಳಿದ್ದರು- ಗೋಕರ್ಣದವರೆಗೆ ನಮಗೆ ಕೇರಳ ಕೊಡಬೇಕು ಎಂದು. ನಮ್ಮ ಔದಾರ್ಯವನ್ನು ನಾವು ಇದೇ ರೀತಿ ತೋರಿಸಿದರೆ, ನಮ್ಮ ದಾಕ್ಷಿಣ್ಯವನ್ನು ಇದೇ ರೀತಿ ತೋರಿಸಿ ಸರ್ಕಾರ ಇದರ ಬಗ್ಗೆ ಹೆಚ್ಚಿನ ಗಮನ ಕೊಡದೇ ಹೋದರೆ ಕನ್ನಡ ಸಂಸ್ಕೃತಿ ಎಂದು ಹೇಳತಕ್ಕಂಥ ಈ ಮಾತು ಕನ್ನಡಿಯ ಒಳಗೆ ಇರತಕ್ಕಂಥ ಗಂಟಿನಂದಾದೀತು. ಇದಕ್ಕೆ 50 ಲಕ್ಷ ಅಲ್ಲ, ಐದು ಕೋಟಿ ಕೊಡಬೇಕು. ಇವತ್ತು ಕನ್ನಡ ಸಂಸ್ಕೃತಿ ಎಂದು ಹೇಳುವಾಗ, ಎಲ್ಲಾ ಅಕಾಡೆಮಿಗಳನ್ನು ಕೂಡಲೇ ಸ್ಥಾಪನೆ ಮಾಡಬೇಕು. ಅದೇ ರೀತಿ ಡಿವಿಜಿ, ಕುವೆಂಪು, ಬೇಂದ್ರೆಯವರಾಗಲೀ, ಅವರು ಬರೆದಿರತಕ್ಕಂಥ ಅನೇಕ ಪುಸ್ತಕಗಳನ್ನು ಬಹಳ ಅಗ್ಗದ ದರದಲ್ಲಿ ಅಚ್ಚುಹಾಕಿ ಐದು ರೂಪಾಯಿ, ಆರು ರೂಪಾಯಿಗೆ ಸಿಗುವ ಹಾಗೆ ಈ ರೀತಿಯ ಕಾರ್ಯಕ್ರಮಗಳನ್ನು ಮಾಡಿ ಕನ್ನಡ ಸಂಸ್ಕೃತಿಯನ್ನು ಉಳಿಸಿದರೆ ಮಾತ್ರ ಕರ್ನಾಟಕ ಉಳಿಯುತ್ತದೆ, ಕನ್ನಡ ಭಾಷೆ ಉಳಿಯುತ್ತದೆ, ಕನ್ನಡ ಸಾಹಿತ್ಯ ಉಳಿಯುತ್ತದೆ. ಇಲ್ಲದೇ ಹೋದರೆ ಇದು ಬರಿ ಬಾಯಲ್ಲಿ ಹೇಳತಕ್ಕ ಮಾತಾಗುತ್ತದೆ.

ಈ 50 ಲಕ್ಷ ಕೊಟ್ಟಿರುವುದು ನಿಜವಾಗಿಯೂ ಬಹಳ ಕಡಿಮೆ. ನಮ್ಮ ಕರ್ನಾಟಕದ ಜೀವನಾಡಿಯೇ ಕನ್ನಡ, ಕನ್ನಡ ಸಾಹಿತ್ಯ, ಕನ್ನಡ ಭಾಷೆ. ಒಬ್ಬ ಹೇಳುತ್ತಾನೆ-ಭಾಷೆ ಇಲ್ಲದವನಿಗೆ ಏನೂ ಇಲ್ಲ ಅಂತ. ಇವತ್ತು ಹಳ್ಳಿಗಳಲ್ಲಿ ಏನೇ ಬರೆಯುವುದಿದ್ದರೂ ಕನ್ನಡದಲೇ ಬರೆಯುತ್ತಾರೆ. ಅವರು ಉರ್ದುವಿನಲ್ಲಿ ಬರೆಯುವುದಿಲ್ಲ, ಇಂಗ್ಲೀಷಿನಲ್ಲಿ ಬರೆಯುವುದಿಲ್ಲ. ಇವತ್ತೇನೋ ಎಲ್ಲ ಇಂಗ್ಲೀಷಿನಲ್ಲಿ ಆಗಬೇಕೆಂದು ಒಂದು ಕಡೆ ಬೊಬ್ಬೆ ಹೊಡೆಯುತ್ತಿದ್ದಾರೆ. ಇದು ಏಕೆಂದು ನನಗೆ ಅರ್ಥವಾಗುವುದಿಲ್ಲ. ಇಲ್ಲಿ ಕನ್ನಡವನ್ನೇ ಕಾಪಾಡಿಕೊಳ್ಳಲಿಲ್ಲ, "ತಾಯಿತ್ತ ಮೊಲೆಹಾಲೆ ನಿಮ್ಮ ಮೈಗಾಗದಿರೆ, ಹೊತ್ತ ಹೊರೆಫಲಕಾರಿ ನೆತ್ತರಹುದೇ" ಎಂಬ ಭಾವಾರ್ಥವನ್ನು ನಾವು ತಿಳಿದುಕೊಳ್ಳಬೇಕು. ಇಷ್ಟು ಹೇಳಿ ಈ ಬಜೆಟ್‌ನಲ್ಲಿ ಬಡವರಿಗೆ, ಹಿಂದುಳಿದ ವರ್ಗದವರಿಗೆ, ಅಲ್ಪಸಂಖ್ಯಾತರಿಗೆ ಒಳ್ಳೆಯ ಕಾರ್ಯಕ್ರಮ ಕೊಟ್ಟಿದ್ದಾರೆ. ನನಗೆ ಇನ್ನು ಹೆಚ್ಚಿಗೆ ಮಾತನಾಡುವುದಕ್ಕೆ ಅವಕಾಶ ಇದ್ದಿದ್ದರೆ ಇನ್ನೂ ಅನೇಕ ವಿಚಾರಗಳನ್ನು ನಾನು ಹೇಳುತ್ತಿದ್ದೆ. ಕೊಟ್ಟಿರುವ ಹಣ ಲ್ಯಾಪ್ಸ್ ಆಗದ ಹಾಗೆ ಅಧಿಕಾರಿಗಳು ಚೆನ್ನಾಗಿ ನೋಡಿಕೊಂಡು, ಒಳ್ಳೆಯ ರೀತಿಯಲ್ಲಿ ಕಾರ್ಯಕ್ರಮವನ್ನು ತಂದರೆ, ನಿಜವಾಗಿಯೂ ಉಪಕಾರವಾಗುತ್ತದೆಂದು ಹೇಳಿ, ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಉಪಾಧ್ಯಕ್ಷಿಣಿಯವರೇ, 1991-92ನೇ ಸಾಲಿನ ಆಯವ್ಯಯವನ್ನು ವಿರೋಧಿಸುತ್ತಾ, ಈ ಒಂದು ಆಯವ್ಯಯ ಅನ್ನದಾತರನ್ನು ಅಲಕ್ಷಿಸುವಂಥ ಆಯವ್ಯಯ, ರೈತವರ್ಗದವರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದಂಥ ಆಯವ್ಯಯ, ನೀರು ಒದಗಿಸಿದಂಥ ನಿಷ್ಕ್ರೀಯ ಆಯವ್ಯಯ, ರಾಜಕೀಯ ಕುತಂತ್ರದಿಂದ ಕೂಡಿದಂಥ ಆಯವ್ಯಯ, ಹರಿಜನ ಗಿರಿಜನ, ಹಿಂದುಳಿದ ವರ್ಗದವರಿಗೆ ವಂಚನೆ ಮಾಡುವುದಕ್ಕೆ ಹಾಕಿಕೊಂಡ ಆಯವ್ಯಯ. ಇದು ಕುದುರೆಗೆ ನೀರು

ತೋರಿಸಿದಂತೆ ಇರತಕ್ಕ ಆಯವ್ಯಯ ಎಂದು ಹೇಳಬಯಸುತ್ತೇನೆ. ಇದರಲ್ಲಿ ಒಂದೊಂದಾಗಿ ಈ ಮಾತಿನ ಬಗ್ಗೆ ಹೇಳುವುದಾದರೆ, ಈ ರಾಷ್ಟ್ರದ, ರಾಜ್ಯದ ಜನತೆಗೆ ಅನ್ನ ಕೊಡತಕ್ಕ ಅನ್ನದಾತರಾದ ರೈತವರ್ಗದವರನ್ನು ಯಾವುದೇ ರೀತಿಯ ಅಭಿವೃದ್ಧಿ ಪಡಿಸತಕ್ಕ, ರೈತರ ಆರ್ಥಿಕ ಅಭಿವೃದ್ಧಿಯ ಒಂದು ಆಲೋಚನೆ, ಒಂದು ವಿಚಾರ ಈ ಆಯವ್ಯಯದಲ್ಲಿ ಕಾಣುತ್ತಾ ಇಲ್ಲ. ರೈತ ರಾಷ್ಟ್ರದ ಬೆನ್ನೆಲುಬು ಎಂದು ಹೇಳುತ್ತಾ, "ರೈತ ಒಕ್ಕದಿದ್ದರೆ, ಜಗವೆಲ್ಲಾ ಬೆಕ್ಕುವುದು" ಎಂದು ಹೇಳುತ್ತಾ, ರೈತನನ್ನು ಸಮಗ್ರ ರೀತಿಯಿಂದ ಸತತವಾಗಿ, ಶೋಷಣೆಗೆ ಒಳಪಡಿಸಿದಂಥ ಈ ಸಮಾಜ ಇಂದಿಗೂ ಅದನ್ನೇ ಮುಂದುವರಿಸಿಕೊಂಡು ಬಂದಂಥ ಈ ಸರ್ಕಾರ, ಇಲ್ಲಿ ರಾಜ್ಯದ ಸಮಗ್ರ ರೈತರ ಸಾಲ ಮನ್ನಾ ಮಾಡುತ್ತೇವೆಂದು ಪದೇ ಪದೇ ಹೇಳಿ, ಸಾಲ ಮನ್ನಾ ಮಾಡುವ ವಿಚಾರದಲ್ಲಿ, ಇಲ್ಲಿ ಕೇವಲ ಜನತೆಗೆ ತಪ್ಪು ತಿಳುವಳಿಕೆ ಕೊಡತಕ್ಕ ರೀತಿಯಲ್ಲಿ ಈ ಆಯವ್ಯಯವನ್ನು ಮಂಡಿಸಲಾಗಿದೆ. ಪ್ಯಾರಾ 8ರಲ್ಲಿ ಈ ರೀತಿ ಹೇಳುತ್ತಾರೆ.

(ಶ್ರೀ ಬಿ.ಎಂ. ಇದಿನಬ್ಬರವರು, ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು) : "ಸಹಕಾರ ವಲಯದಲ್ಲಿ 10,000 ರೂಪಾಯಿಗಳವರೆಗಿನ ಕೃಷಿ ಸಾಲವನ್ನು ಮನ್ನಾ ಮಾಡುವ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ ಎಂಬುದನ್ನು ಸದನಕ್ಕೆ ತಿಳಿಸಲು ನನಗೆ ಸಂತೋಷವಾಗುತ್ತಿದೆ." ಇದು ಯಾವ ಸಾಲ ಮನ್ನಾ? ಮುಂಚೆ ಹೇಳುತ್ತಿದ್ದಾರೆ,

"ಆದ್ದರಿಂದ, ಸಹಕಾರ ಸಂಘಗಳನ್ನು ಪುನಶ್ಚೇತನಗೊಳಿಸಿ, ರೈತ ಸಮುದಾಯಕ್ಕೆ ಇನ್ನಷ್ಟು ಸಾಲ ನೀಡಿ ಅವರಿಗೆ ನೆರವು ನೀಡುವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮನ್ನಾ ಮಾಡಬೇಕಾದ ಮೊಬಲಗು 132 ಕೋಟಿ ರೂಪಾಯಿಗಳು."

ಇದು ರೈತರನ್ನು ತಪ್ಪು ದಾರಿಗೆ ಎಳೆಯುವಂಥ ವಿಚಾರವಲ್ಲವೇ? ಈಗಾಗಲೇ ಯಾವ ಕರಾರು, ಕಂಡೀಷನ್ ಮೇಲೆ, ಅಣೆವಾರು ನಿರ್ಬಂಧದ ಮೇಲೆ ಕೇಂದ್ರ ಸರ್ಕಾರ ಸಾಲ ಮನ್ನಾ ಯೋಜನೆಯನ್ನು ಹಾಕಿಕೊಂಡಿದೆ, ಈ ಮೊತ್ತ 132 ಕೋಟಿ. ಇನ್ನು ಮುಂದೆ ಸಾಲ ಮಾಡುವಂಥ ವಿಚಾರ ಈ ಆಯವ್ಯಯದಲ್ಲಿ ಇಲ್ಲ. ಹೇಳುವಂಥ ಮಾತಿಗೂ, ಅಡಗಿರತಕ್ಕ ಕ್ರಿಯೆಗೂ ಬಹಳ ಅಂತರ ಇದೆ. ಜನತೆಯನ್ನು ಮತ್ತು ರೈತರನ್ನು ಒಂದು ಸಾರಿ ಮೋಸಗೊಳಿಸಬಹುದು, ಎರಡು ಸಾರಿ ಮೋಸಗೊಳಿಸಬಹುದು, ಆದರೆ ಕೊನೆಯವರೆಗೂ ಈ ರಾಜ್ಯದ ರೈತರನ್ನು, ಈ ಸರ್ಕಾರಕ್ಕೆ ಮೋಸಗೊಳಿಸುವುದಕ್ಕೆ ಸಾಧ್ಯವಿಲ್ಲ. ಇವತ್ತು ರೈತವರ್ಗ ಎಚ್ಚೆತ್ತಿದ್ದಾರೆ, ರೈತವರ್ಗ ಬಹಳ ಬುದ್ಧಿವಂತರಾಗಿದ್ದಾರೆ, ರೈತವರ್ಗವನ್ನು ನಿರ್ಲಕ್ಷಿಸಿದಂಥ ಸರ್ಕಾರ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಯಾವುದೇ ಸಾಲ ಯೋಜನೆ, ರೈತರ ಸಾಲ ಮನ್ನಾ ಮಾಡತಕ್ಕಂಥ ಮಾತು ಈ ಆಯವ್ಯಯದಲ್ಲಿ ಇಲ್ಲ. ಹಿಂದಿನ ಸರ್ಕಾರ ಹಾಕಿಕೊಂಡಂತೆ, ರೈತರ ಸಹಕಾರಿ ಸಂಘದ ಸಾಲದ ಮೇಲಿನ ಸಂಪೂರ್ಣ ಬಡ್ಡಿಯನ್ನು ಮನ್ನಾ ಮಾಡಿದ್ದನ್ನೂ ಸಹಿತ ಈ ಸರ್ಕಾರ ತೆಗೆದುಹಾಕಿದೆ.....

ಶ್ರೀ ಆರ್.ಎನ್. ನಾಯಕ್: ಹಿಂದಿನ ಸರ್ಕಾರ ರೈತರನ್ನು ಜೈಲಿಗೆ ಹಾಕಿತ್ತು. ಅದನ್ನೂ ನೆನಪು ಮಾಡಿಕೊಳ್ಳಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್: ಆ ವಿಷಯಕ್ಕೂ ಬರುತ್ತೇನೆ. ಬಹಳ ಒಳ್ಳೆಯದು, ಮರೆಯಬಾರದೆಂದು ತಾವು ನೆನಪು ಮಾಡಿಕೊಟ್ಟಿದ್ದೀರಿ. ಆದ್ದರಿಂದ ಮಾನ್ಯ ನಾಯಕರಿಗೆ ಸ್ವಾಗತ. 7 ರೂಪಾಯಿ ಬಡ್ಡಿ ದರ, ರಿಯಾಯಿತಿ ದರ ಏನಿತ್ತು ಅದನ್ನೂ ಈ ಸರ್ಕಾರ ತೆಗೆದುಹಾಕಿದೆ. ರೈತರ ಬಾವಿಗಳು ವಿಫಲವಾದರೆ, ನೀರು ಬರದೇ ಹೋದರೆ, ಆ ವಿಫಲವಾದ ಬಾವಿಗಳಿಗೆ ಸಹಾಯಧನ ಕೊಡತಕ್ಕ ಯೋಜನೆಯನ್ನೂ ತೆಗೆದುಹಾಕಿದೆ.

ಇವತ್ತು ರಾಜ್ಯದಲ್ಲಿ ಕೋಟ್ಯಾಂತರ ರೂಪಾಯಿಗಳ ಹಣವನ್ನು ಹಿಂದಿನ ಸರಕಾರ ಈ ಒಂದು ಸಾಲಗಳ ಹಾಗೂ ಬಡ್ಡಿ ಮರುಪಾವತಿಗಾಗಿ ಹಾಕಿಕೊಂಡಿದ್ದಂತಹ ಯೋಜನೆ ಈ ಸರಕಾರದ ಆಯವ್ಯಯದಲ್ಲಿ ಇಲ್ಲ. ರೈತರ ಸಾಲ ಮನ್ನಾ ಮಾಡುವ ಯೋಜನೆ ಅಥವಾ ಯೋಜನೆ ಸರಕಾರಕ್ಕೆ ಇಲ್ಲ. ಇಂತಹ ಸರಕಾರ ರೈತರನ್ನು ಮೋಸ ಮಾಡಿ, ರೈತರನ್ನು ವಂಚಿಸಿ ಅವರಿಂದ ಪ್ರಯೋಜನ ಪಡೆಯುವುದಕ್ಕೆ ಈ ಒಂದು ಆಯವ್ಯಯದಲ್ಲಿ ರೈತರ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿರುವಂತಹ ಮಾತು ಸತ್ಯಕ್ಕೆ ದೂರವಾದುದು ಎಂದು ತಿಳಿಸಲು ಇಷ್ಟಪಡುತ್ತೇನೆ. ಈಗಲಾದರೂ ಸಹಿತ ಯಾರನ್ನು ಅನ್ನದಾತರು, ಯಾರನ್ನು ಬೆನ್ನೆಲುಬು ಎಂದು ಹೇಳುತ್ತಿದ್ದಾರೆ. ಅಂತಹ ರೈತರನ್ನು ಸರಕಾರ ಈಗಲಾದರೂ ಗಮನಿಸಬೇಕು. ಮಳೆಯಿಲ್ಲದೆ, ಬೆಳೆಯಿಲ್ಲದೆ, ಬರಗಾಲದಲ್ಲಿ ಕಂಗಾಲಾಗಿರುವ ಹಳ್ಳಿಯಜನ, ರೈತರುಗಳಿಗೆ ಇರುವ ಕಷ್ಟದಲ್ಲಿ, ಸಾಲ ಮರುಪಾವತಿ ಮಾಡುವುದಕ್ಕೆ ಆಗದಿರುವ ಕಷ್ಟದಲ್ಲಿ ಸಾಲ ಮನ್ನಾ ಅನಿವಾರ್ಯ ಎಂಬು ಸರಕಾರದವರು ಒಪ್ಪಿಕೊಂಡರೇ, ಅವಶ್ಯ ಎಂದು ಒಪ್ಪಿಕೊಂಡರೇ, ಏತಕ್ಕೆ ರೈತರ ಬಗ್ಗೆ ಯೋಚನೆ ಮಾಡಲಿಲ್ಲ ಎಂದು ಕೇಳುತ್ತೇನೆ.

ಶ್ರೀ ಆರ್.ಎನ್. ನಾಯಕ್: ರೈತರನ್ನು ಜೈಲಿಗೆ ಹಾಕಿದ್ದು ಹೇಳಲೇ ಇಲ್ಲ.

ಶ್ರೀ ಬಸವರಾಜ ರಾಯರೆಡ್ಡಿ: ರೈತರನ್ನು ಜೈಲಿಗೆ ಹಾಕಿದ್ದು ಜನತಾ ಸರ್ಕಾರ ಅಲ್ಲ. ಅದರ ಹಿಂದಿದ್ದ ಗುಂಡೂರಾಯರ ಸರಕಾರ ಗುಂಡೂರಾಯರ ಸರಕಾರ ರೈತರ ಮೇಲೆ ಗುಂಡು ಹಾಕಿತು.

ಶ್ರೀ ಆರ್.ಎನ್. ನಾಯಕ್: ನೀವು ರೈತರನ್ನು ಜೈಲಿಗೆ ಹಾಕಲಿಲ್ಲವೇ? ಪ್ರೊಫೆಸರ್ ನಂಜುಂಡಸ್ವಾಮಿಯವರನ್ನು ಕಾರವಾರ ಜೈಲಿಗೆ ತೆಗೆದುಕೊಂಡು ಹೋಗಿ ಇಟ್ಟಿದ್ದಿರಿ. ನಾನೇ ಹೋಗಿ ನೋಡಿದ್ದೇನಲ್ಲ.

(ಗೊಂದಲ)

ಛೇರ್ಮನ್ : ನಾಯಕರೇ, ಸಮಯ ಇಲ್ಲ ಅವರು ಮಾತನಾಡಿ ಮುಗಿಸಲಿ.

ಶ್ರೀ ಎಲ್.ಆರ್. ಶಿವರಾಮೇಗೌಡ: ನೀವು ರಬ್ಬರ್ ಗುಂಡು ಹೊಡೆಯುತ್ತೇವೆ ಎಂದು ನಿಜವಾದ ಗುಂಡು ಹೊಡೆದಿರಿ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್: ಯಾವ ಯಾವ ಸರಕಾರ ರೈತರ ಬಗ್ಗೆ ಏನೇನು ಮಾಡಿದೆ ಎಂದು ನನಗೆ ಗೊತ್ತಿದೆ. ರೈತರ ಸಮಸ್ಯೆ ಬಗ್ಗೆ ನಾನು ಇರತಕ್ಕಂಥಾದ್ದನ್ನು ಹೇಳುತ್ತಿದ್ದೇನೆ. ನಾನು ರೈತರ ಸಮಸ್ಯೆಯನ್ನು ಚೆನ್ನಾಗಿ ಅರಿತುಕೊಂಡಿದ್ದೇನೆ, ಅದನ್ನು ಹೇಳುತ್ತಿದ್ದೇನೆ. ರೈತ ವಿರೋಧಿ ನೀತಿ ಹಾಕಿಕೊಂಡು, ರೈತರ ಮೇಲೆ ಗುಂಡು ಹಾಕಿ, ರೈತರ ಮನೆ ಜಪ್ತಿ ಮಾಡಿದ ಸರಕಾರ ಯಾವುದೂ ಉಳಿಯಲಿಲ್ಲ. ಅಂತಹ ಯಾವ ಸರಕಾರವೂ ಉಳಿಯುವುದಿಲ್ಲ ಎಂದು ಹೇಳುತ್ತಿದ್ದೇನೆ.

(ಗೊಂದಲ)

ಚೇರ್ಮನ್ : ಚರ್ಚೆಗೆ ಆಸ್ಪದ ಕೊಡಿ, ಸಮಯ ಇಲ್ಲ.

(ಗೊಂದಲ)

ಶ್ರೀ ಆರ್.ಎನ್. ನಾಯಕ್ : ಒಬ್ಬ ರೈತರನ್ನು ಜೈಲಿಗೆ ಹಾಕಿದ್ದು ಸುಳ್ಳ ಹಾಗಾದರೆ.

(ಗೊಂದಲ)

ಶ್ರೀ ಆರ್.ಎನ್. ನಾಯಕ್: ರೈತರನ್ನು ಜೈಲಿಗೆ ಹಾಕಿದ್ದು ಸುಳ್ಳು ಎಂದು ಹೇಳಿದರೆ, ನಂಜುಂಡಸ್ವಾಮಿಯವರನ್ನು ಜೈಲಿಗೆ ಹಾಕಿದ್ದು ಯಾರು? ಅವರು ರೈತರು ಅಲ್ಲ ಎಂದು ಹೇಳಿಬಿಡಿ.

ಚೇರ್ಮನ್: ಈ ಚರ್ಚೆ ಬೇಡ, ಅವರು ಮಾತನಾಡಲಿ.

ಶ್ರೀ ಬಿ.ಹೆಚ್. ಬನ್ನಿಕೋಡ್: ನೀವು ಹೇಳಿದ್ದಕ್ಕೆ ಉತ್ತರ ಕೊಡುತ್ತೇನೆ ದಯವಿಟ್ಟು ಕೂಡಿರಿ. ನೀವು ಹೇಳಿದ್ದು ನನಗೆ ತಿಳಿದಿದೆ.

ಚೇರ್ಮನ್: ಅದಕ್ಕೆ ಉತ್ತರ ಕೊಡುವುದು ಬೇಡ, ನೀವು ನಿಮ್ಮ ಮಾತು ಮುಂದುವರಿಸಿ, ಮಾತನಾಡಿ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್: ರೈತರ ಬಗ್ಗೆ ನಿಮಗೆ ಎಷ್ಟು ಕಳಕಳಿ ಇದೆ ಎಂದು ನನಗೆ ಗೊತ್ತು. ರೈತರ ಬಗ್ಗೆ ಹಿಂದುಳಿದವರ ಬಗ್ಗೆ ಬೂಟಾಟಿಕೆ ಮಾತನಾಡಿ ಅಧಿಕಾರಕ್ಕೆ ಬಂದು, ಅಧಿಕಾರದಲ್ಲಿ ಮುಂದುವರಿದಿದ್ದೀರಿ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಹಾಗಾದರೆ ರೈತರ ಬಗ್ಗೆ ಏನೂ ಗೊತ್ತಿಲ್ಲ ಕೂಡಿರಿ. ಸರಕಾರ 60 ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಕೊಡಲಿಲ್ಲವೇ, ಕೃಷಿ ಪಾಸ್ ಬುಕ್ ಕೊಡಲಿಲ್ಲವೇ?

ಶ್ರೀ ಬಿ.ಹೆಚ್. ಬನ್ನಿಕೋಡ್: ಶಿವರಾಮೇಗೌಡರೇ ನಾನು ಈಲ್ಡ್ ಆಗಿಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಿ. ತಾವು ಸರಕಾರದ ಪರವಾಗಿ ಮಾತನಾಡುವುದಕ್ಕೆ ಅವಕಾಶ ಇದೆ. ಆಗ ತಾವು ಹೇಳಿರಿ. ಈಗ ನನಗೆ ತಿಳಿದಿರುವ ವಿಚಾರಗಳನ್ನು ಹೇಳುತ್ತಿದ್ದೇನೆ. ಬಹುತೇಕ ಅವರು ಈಗಲೇ ಪ್ರತಿಭಟನೆ ಮಾಡುತ್ತಿದ್ದಾರೆ ಎಂದು ಕಾಣುತ್ತದೆ. ಯಾವುದೇ ಸರಕಾರ ಇರಲಿ, ಅನ್ನದಾತರಿಗೆ ರೈತರಿಗೆ ಸಂಪೂರ್ಣವಾಗಿ ಮೊದಲಿನಿಂದಲೂ ಶೋಷಣೆ ಮಾಡಿಕೊಳ್ಳುತ್ತಾ ಬಂದಿರತಕ್ಕಂಥ ವ್ಯವಸ್ಥೆ ಬದಲಾಗಲೇ ಬೇಕು. ಎಲ್ಲಿಯವರೆಗೆ ಈ ವ್ಯವಸ್ಥೆ ಮುಂದುವರಿಯುತ್ತದೆ, ರೈತರು ಬೆಳೆದಂಥ ಬೆಳೆಗೆ ತಕ್ಕಂತೆ ಬೆಲೆಕೊಡುವ ವ್ಯವಸ್ಥೆ ಆಗುವುದಿಲ್ಲ ಎಲ್ಲಿಯವರೆಗೆ ಕೂಲಿಕಾರರಿಗೆ ಅವರ ದುಡಿಮೆಗೆ ತಕ್ಕಂತೆ ಕೂಲಿ ಸಿಗುವ ವ್ಯವಸ್ಥೆ ಈ ರಾಷ್ಟ್ರದಲ್ಲಿ, ರಾಜ್ಯದಲ್ಲಿ ಬರುವುದಿಲ್ಲ, ಅಲ್ಲಿಯವರೆಗೆ ಈ ರಾಷ್ಟ್ರ, ರಾಜ್ಯ ಅಭಿವೃದ್ಧಿ ಆಗುವುದಿಲ್ಲ. ಸಂಪತ್ತನ್ನು ಉತ್ಪಾದನೆ ಮಾಡತಕ್ಕ ವರ್ಗ ರೈತವರ್ಗ ಇವತ್ತು ಮಿಲ್‌ಗಳಿಗೆ ಬೇಕಾದಂತಹ ಎಣ್ಣೆ ಕಾಳುಗಳು ಇವತ್ತು ಅರೆಯಲಿಕ್ಕೆ ಬೇಕಾದಂತಹ ಹತ್ತಿ ಮತ್ತು ಆಹಾರ ಪದಾರ್ಥಗಳನ್ನು ಉತ್ಪಾದನೆ ಮಾಡತಕ್ಕಂಥ ಶಕ್ತಿ ರೈತ ವರ್ಗಕ್ಕೆ ಇದೆಯೇ ವಿನಃ ಯಾವ ವಿಜ್ಞಾನಿಗೂ ಇದನ್ನು ಉತ್ಪಾದನೆ ಮಾಡತಕ್ಕಂಥ ಶಕ್ತಿ ಇಲ್ಲ, ಮಾಡಲಾರ. ಇಂತಹ ರಾಷ್ಟ್ರದ ಸಂಪತ್ತು ಉತ್ಪಾದನೆ ಮಾಡತಕ್ಕಂಥಾದ್ದು ನೂರಕ್ಕೆ ಎಪ್ಪತ್ತರಷ್ಟು ರೈತ ವರ್ಗವನ್ನು ಅಲಕ್ಷಿಸಿದರೆ ಸಂಪತ್ತು ಸೃಷ್ಟಿ ಮಾಡತಕ್ಕಂಥ ವರ್ಗವನ್ನು ಅಲಕ್ಷಿಸಿದರೆ, ಅದು ರಾಜ್ಯಕ್ಕೆ ಒಳಿತು ಅಲ್ಲ. ಸಂಪತ್ತು ಉತ್ಪಾದನೆ ಕಡಿಮೆಯಾಗುತ್ತದೆ ಎನ್ನತಕ್ಕಂಥ ಮಾತನ್ನು ತಮ್ಮ ಮೂಲಕ ನಾನು ಸರ್ಕಾರಕ್ಕೆ ಹೇಳಬಯಸುತ್ತೇನೆ. ಇವತ್ತು ರೈತ ವರ್ಗ ಎಚ್ಚೆತ್ತಿದೆ. ಅವರನ್ನು ಯಾವ ಸರ್ಕಾರವೂ ಎದುರಿಸುವುದಕ್ಕೆ ಸಾಧ್ಯವಿಲ್ಲ ಇವತ್ತು ಅವರು ಎಚ್ಚೆತ್ತು ಬುದ್ಧಿವಂತರಾಗಿದ್ದಾರೆ. ಸರ್ಕಾರ ಮಾಡತಕ್ಕಂಥ ವಂಚನೆಗಳನ್ನು ಬುದ್ಧಿವಂತ ವರ್ಗದವರು ತಿಳಿದುಕೊಂಡಿದ್ದಾರೆ. ಒಂದು ನಿರ್ದಿಷ್ಟವಾದ ಸಾಲ ಮನ್ನಾ ಯೋಜನೆಯನ್ನು ಸರ್ಕಾರ ಹಾಕಿಕೊಂಡು ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ಹಿಂದಿನ ಸರ್ಕಾರದಲ್ಲಿ ಅಂದರೆ ಶ್ರೀ ಗುಂಡೂರಾಯರ ಸರ್ಕಾರದಲ್ಲಿ ಈ ರಾಜ್ಯದ ರೈತರ ಮೇಲೆ ಗುಂಡು ಹಾರಿಸಿ ಸುಮಾರು 130

ಜನ ಸತ್ತರು ಆ ಸರ್ಕಾರ ಏನಾಯಿತು? ರೈತ ವರ್ಗದ ಮೇಲೆ ಗುಂಡು ಹಾರಿಸಿದಂತಹ ಸರ್ಕಾರಗಳು ಯಾವುದೂ ಉಳಿದಿಲ್ಲ. ಈ ರಾಜ್ಯದಲ್ಲಿ ಈ ರಾಷ್ಟ್ರದಲ್ಲಿ ಏನಾದರೂ ರೈತರಿಗೆ ಅಲ್ಪಸ್ವಲ್ಪ ರೈತ ಪರ ಹೆಜ್ಜೆ ಇಟ್ಟಂಥ ಸರ್ಕಾರ ಅದು ಹಿಂದಿನ ಸರ್ಕಾರ. ಅದು ಬಡ್ಡಿಮನ್ನಾ ವಿಚಾರ ಇರಬಹುದು, ವಿಫಲ ಬಾವಿಗಳ ವಿಚಾರ ಇರಬಹುದು, ಮಾನ್ಯ ವಿ.ಪಿ. ಸಿಂಗ್ ಸರ್ಕಾರ ಈ ರಾಷ್ಟ್ರದಲ್ಲಿ ಪ್ರಧಾನ ಮಂತ್ರಿಗಳಾದಾಗ ಮೊಟ್ಟ ಮೊದಲನೆಯದಾಗಿ ಈ ರಾಷ್ಟ್ರದ ರೈತರಿಗೆ ಸಹಾಯ ಮಾಡುವ ಒಂದು ದಿಟ್ಟ ಹೆಜ್ಜೆ ಇಟ್ಟರು. ಅವರು ಹೇಳಿದಂತಹ ಮಾತನ್ನು ಪರಿಪಾಲಿಸಿದರೋ, ಇಲ್ಲವೋ ಎನ್ನುವುದನ್ನು ನಾವು ಅಲ್ಲಿಗೆ ಬಿಡೋಣ. ಆದರೆ ಮೊದಲ ಹೆಜ್ಜೆ ರೈತರ ಪರವಾಗಿ ಇಟ್ಟ ಸರ್ಕಾರ ಅದು ಈ ರಾಷ್ಟ್ರದಲ್ಲಿ ಶ್ರೀ ವಿ.ಪಿ. ಸಿಂಗ್‌ರವರ ಜನತಾದಳ ಸರ್ಕಾರ ಮಾನ್ಯ ಅಧ್ಯಕ್ಷರೇ ಈ ಒಂದು ರಾಜ್ಯದಲ್ಲಿ ಸ್ಟ್ಯಾಂಪ್ ಡ್ಯೂಟಿ ಆಗಲೀ ಸಾಲ ಮನ್ನಾ ಆಗಲೀ ಕಡಿಮೆ ಬಡ್ಡಿ ದರ ಆಗಲಿ ಕನಿಷ್ಟ ಪಕ್ಷ ಅವರು ಪಡೆದ ಸಾಲದ ಮೇಲೆ ಸ್ಟ್ಯಾಂಪ್ ಡ್ಯೂಟಿ ವಿನಾಯಿತಿ ಕೊಟ್ಟಿಲ್ಲ ಒಂದು ಸಾವಿರ ರೂಪಾಯಿಗಳ ಸಾಲ ಪಡೆಯಬೇಕಾದರೆ 50 ರೂಪಾಯಿಗಳು ಸ್ಟ್ಯಾಂಪ್ ಡ್ಯೂಟಿ ಕೊಡಬೇಕು.

ಒಂದು ಬೋರ್‌ವೆಲ್, ಒಂದು ಪಂಪ್‌ಸೆಟ್ ತೆಗೆದುಕೊಳ್ಳಲು ಐದು ಸಾವಿರ ರೂಪಾಯಗಳ ಸ್ಟ್ಯಾಂಪ್ ಡ್ಯೂಟಿ ಕೊಡಬೇಕು ಸಾಲ ಪಡೆಯತಕ್ಕಂಥ ರೈತರಿಗೆ ತಾವು ಈ ಸ್ಟ್ಯಾಂಪ್ ಡ್ಯೂಟಿ ವಿನಾಯಿತಿ ಕೊಡಿ ಎಂದು ನಾನು ಸಲಹೆ ಮಾಡುತ್ತೇನೆ. ರೈತ ಪಡೆದಂತಹ ಸಾಲಕ್ಕೆ ತಾವು ಸ್ಟ್ಯಾಂಪ್ ಡ್ಯೂಟಿ ವಿನಾಯಿತಿ ಕೊಟ್ಟರೆ ಎಷ್ಟೋ ಉಪಕಾರ ಮಾಡಿದಂತಾಗುತ್ತದೆ. ಒಂದು ಪಂಪ್‌ಸೆಟ್‌ಗೆ ಒಂದು ಬೋರ್‌ವೆಲ್‌ಗೆ 4-5 ಸಾವಿರ ರೂಪಾಯಿಗಳ ಸ್ಟ್ಯಾಂಪ್ ಡ್ಯೂಟಿ ಕೊಡಬೇಕಾಗಿದೆ. ಈ ಸ್ಟ್ಯಾಂಪ್ ಡ್ಯೂಟಿ ವಿನಾಯಿತಿ ರೈತರಿಗೆ ಕೊಟ್ಟರೆ ಒಳ್ಳೆಯದು ಅದು ಬಿಟ್ಟು ತಾವು ಗಾಯದ ಮೇಲೆ ಬರೆ ಎಳೆಯಬೇಡಿ ಎನ್ನುವ ಮಾತನ್ನು ನಾನು ತಮ್ಮ ಮೂಲಕ ಹೇಳುತ್ತೇನೆ. ಇನ್ನು ಕುಡಿಯುವ ನೀರಿನ ವಿಚಾರದಲ್ಲಿ ತಮಗೆ ಗೊತ್ತಿದೆ ನಾವು ನೀವು ಈ ಸದನದಲ್ಲಿರತಕ್ಕಂಥ ಹಲವಾರು ಮಾನ್ಯ ಸದಸ್ಯರು ಸರ್ಕಾರಕ್ಕೆ ಹೇಳಿದ್ದಾರೆ ಕುಡಿಯುವ ನೀರಿನ ವ್ಯವಸ್ಥೆಗೆ ಪ್ರಾಮಾಣಿಕ ಪ್ರಯತ್ನ ಮಾಡಿ ಹೇರಳ ಹಣ ಇಟ್ಟಿದ್ದೇವೆ ಎಂದು ಆಯವ್ಯಯದಲ್ಲಿ ಬರೆದಿದ್ದಾರೆ. ತಾವು ಆಯವ್ಯಯವನ್ನು ನೋಡಿ ಅನೇಕ ಜನ ನನ್ನ ಸ್ನೇಹಿತರು ಸ್ವಾಗತಿಸಿ ಉತ್ಸಾಹದಿಂದ ಕುಣಿದಾಡಿದರು. ಆದರೆ ಹಾಕಿಕೊಂಡಂತಹ ಯೋಜನೆಗಳನ್ನು ಈ ರಾಜ್ಯದಲ್ಲಿ ಕಾರ್ಯಗತ ಮಾಡಿದ್ದಾರೆಯೇ? ಕುಡಿಯುವ ನೀರಿಗೆ ಹಣ ಆಯವ್ಯಯದಲ್ಲಿ ಇಟ್ಟಿದ್ದನ್ನು ಇವತ್ತು ಖರ್ಚು ಮಾಡಿಲ್ಲ. ಆಯವ್ಯಯದಲ್ಲಿ 35 ಕೋಟಿ ರೂಪಾಯಿಗಳನ್ನು ಇಟ್ಟಿದ್ದರೆ 21 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಆಯವ್ಯಯದಲ್ಲಿ ಇಟ್ಟ ಹಣ ಖರ್ಚಾದರೂ ಸಹ ಇದಕ್ಕೆ 25 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಕೊಡುತ್ತೇವೆಂದು ಹೇಳಿದರು. ಆದರೆ ಹಣ ಕೊಡುವ ಪ್ರಶ್ನೆ ದೂರ ಉಳಿಯಿತು. ಇವತ್ತು ಸರ್ಕಾರ ಕುಡಿಯುವ ನೀರಿಗೆ ನಿರ್ದಿಷ್ಟವಾದ ಹಣ ಕೊಟ್ಟಿಲ್ಲ.

4.55 ಪಿ.ಎಂ.

ರಾಜ್ಯದಲ್ಲಿ ಕುಡಿಯುವ ನೀರನ್ನು ಕೊಡಲಿಕ್ಕೆ ಸಾಧ್ಯವಿಲ್ಲದಿದ್ದರೆ ಇನ್ನೇನನ್ನು ಇವರು ಕೊಡುವುದಕ್ಕೆ ಸಾಧ್ಯ? ಯಾವ ಅಭಿವೃದ್ಧಿಯನ್ನು ಸಾಧಿಸಲಿಕ್ಕೆ ಸಾಧ್ಯವಿದೆ? ನಾವು ಇದನ್ನು ಸಮರೋಪಾದಿಯಲ್ಲಿ ಕೈಗೊಳ್ಳಬೇಕೆಂದು ಹೇಳಿದೆವು. ಇದರಿಂದ ಪ್ರಯೋಜನವಾಗಲಿಲ್ಲ. ಇಲ್ಲಿ ಇವರು ಬಿಡುಗಡೆ ಮಾಡಿರುವ ಹಣವು ಬರೀ ತೋರಿಕೆಗಾಗಿ. ಒಂದು ಬೋರ್‌ನ್ನು ಸಹಿತಾ ಕೊರೆಯಲಿಕ್ಕಾಗಲಿಲ್ಲ, ಸದನದಲ್ಲಿ ಕೊಡತಕ್ಕಂಥ ಲೆಕ್ಕ ಮತ್ತು ಅಲಿ ನಡೆಯತಕ್ಕಂಥ ಕಾರ್ಯಕ್ಕೆ ಒಂದಕ್ಕೊಂದು ತದ್ವಿರುದ್ಧ. ಆದ್ದರಿಂದ ಕುಡಿಯುವ

ನೀರಿನ ಬಗ್ಗೆ ಸರ್ಕಾರ ಕನಿಷ್ಟ ಒನ್ ಪಾಯಿಂಟ್ ಪ್ರೋಗ್ರಾಮ್ ಹಾಕಿಕೊಳ್ಳಬೇಕು. ಈಗ ಬೇಸಿಗೆ ಕಾಲ ಬರುತ್ತಿದೆ. ತೀವ್ರವಾಗಿ ಕನಿಷ್ಟ 25 ಲಕ್ಷ ರೂಪಾಯಿಗಳನ್ನಾದರೂ ಒಂದು ತಾಲ್ಲೂಕಿಗೆ ಬಿಡುಗಡೆ ಮಾಡಬೇಕು. ಇದರ ಬಗ್ಗೆ ಕೆಲಸ ಮಾಡಿಸಲು ಪ್ರತಿ ತಾಲ್ಲೂಕಿನಲ್ಲಿ ಒಂದು ಸಮಿತಿ ಮಾಡಬೇಕೆಂದು ನಾನು ಸರ್ಕಾರದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಇನ್ನು ನೀರಾವರಿ ಬಗ್ಗೆ ಸಾಕಷ್ಟು ಹಣವನ್ನು ಇಟ್ಟಿದ್ದೇವೆಂದು ಇದರಲ್ಲಿ ಒತ್ತಿ ಒತ್ತಿ ಹೇಳಿದ್ದಾರೆ. ಈ ರಾಜ್ಯದ ಸಂಪೂರ್ಣ ನೀರು ಬಳಕೆಯಾಗಬೇಕಾದರೆ ಹಣ ಬೇಕಾದುದು ಎಷ್ಟು? ಇಲ್ಲಿ ಇಟ್ಟಿರತಕ್ಕಂಥ ಹಣ ಎಷ್ಟು? ಎಂದು ನೋಡಿದರೆ ಅಧ್ಯಕ್ಷರೆ ಇದು ಯಾವುದಕ್ಕೂ ಸಾಲದು. ಅತಿ ಕಡಿಮೆ ಹಣ. ಇನ್ನೂ ಹೆಚ್ಚಿನ ಹಣವನ್ನು ಒದಗಿಸಬೇಕಾಗಿತ್ತು. ಈ ಸಣ್ಣ ನೀರಾವರಿಗೆ ಕೇವಲ 31.59 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಇವತ್ತು ಕುಡಿಯಲಿಕ್ಕೆ ನೀರಿಲ್ಲ, ಬರಗಾಲ ಮಳೆ ಬರುತ್ತಿಲ್ಲ. ಕೆರೆಗಳಲ್ಲಿ ಹೂಳನ್ನು ಎತ್ತಿ ಅಲ್ಲಿ ನೀರು ನಿಲ್ಲಿಸಬೇಕಾಗಿದೆ. ಹಳ್ಳ ಹೊಳೆಗಳಿಗೆ ಬ್ಯಾರೇಜ್‌ಗಳನ್ನು ಕಟ್ಟಿ ನೀರನ್ನು ನಿಲ್ಲಿಸಬೇಕಾಗಿದೆ. ಅಂತರ್ಜಲ ಇವತ್ತಿನ ದಿವಸ ಹೆಚ್ಚು ಮಾಡುವುದಕ್ಕೆ ಯಾವ ಯೋಜನೆಯನ್ನೂ ಸರ್ಕಾರ ಹಾಕಿಕೊಂಡಿಲ್ಲ. ನಿಸರ್ಗ ಯಾವ ರೀತಿ ಕುಡಿಯುವ ನೀರಿಗೆ ಮತ್ತು ವ್ಯವಸಾಯಕ್ಕೆ ತೊಂದರೆ ಕೊಡುತ್ತಿದೆ ಎಂಬುದರ ಬಗ್ಗೆ ಸರ್ಕಾರ ಗಮನಹರಿಸಿಲ್ಲ. ಇವತ್ತಿನ ದಿವಸ ಅಂತರ್‌ಜಲ ಹೆಚ್ಚಾಗಬೇಕಾದರೆ ಈ ರೀತಿಯ ಸಣ್ಣ ನೀರಾವರಿ ಯೋಜನೆಗಳನ್ನು ಹಾಕಿಕೊಳ್ಳುವ ಅವಶ್ಯಕತೆ ಇದೆ. ಅದಕ್ಕೆ ಹೆಚ್ಚು ಹಣವನ್ನು ಒದಗಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ಇನ್ನು ನೀರಾವರಿ ಯೋಜನೆಗಳ ಬಗ್ಗೆ, ಕಾವೇರಿ ಯೋಜನೆಗೆ ಹೇಳುತ್ತಾರೆ, ಇನ್ನೂ ಹೆಚ್ಚು ಹಣವನ್ನು ಯೋಜನೇತರವಾಗಿ ಕೊಡುತ್ತೇವೆಂದು. ಆದರೆ, ನಮ್ಮ ಉತ್ತರ ಕರ್ನಾಟಕದಲ್ಲಿರತಕ್ಕಂಥ ಯೋಜನೆಗಳಿಗೆ ಈ ಆಯವ್ಯಯದಲ್ಲಿ ಒಂದು ಪೈಸೆ ಹಣವನ್ನೂ ಸಹಾ ಒದಗಿಸಿಲ್ಲ. ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಧಾರವಾಡ ಜಿಲ್ಲೆಯಲ್ಲಿ ಯಾವುದೇ ನೀರಾವರಿ ಯೋಜನೆಗೆ ಒಂದು ಪುಡಿ ಕಾಸನ್ನು ಒದಗಿಸಿಲ್ಲ. ಈ ರೀತಿ ನಮ್ಮ ಕರ್ನಾಟಕದ ಜನರಿಗೆ, ನಮ್ಮ ಧಾರವಾಡ ಜಿಲ್ಲೆಯ ಜನರಿಗೆ ಸಂಪೂರ್ಣ ಅನ್ಯಾಯವಾಗಿದೆ ಈ ಆಯವ್ಯಯದಲ್ಲಿ ಈಗಲಾದರೂ ಇದನ್ನು ಸರಿಪಡಿಸಬೇಕೆಂದು ಸರ್ಕಾರದಲ್ಲಿ ಹೇಳುತ್ತೇನೆ. ಇನ್ನು ಸಹಕಾರಿ ರಂಗದಲ್ಲಿ ಅಧ್ಯಕ್ಷರೆ, ನಾನು ಬಹಳ ಹೇಳುವುದಿಲ್ಲ, ಅದರಲ್ಲಿ ಕೆಲವನ್ನು ಮಾತ್ರ ಹೇಳುತ್ತೇನೆ. ಈ ಆಯವ್ಯಯದಲ್ಲಿ ಸಹಕಾರಿ ರಂಗದ ಬಗ್ಗೆ ಏನಿದೆ? ಪ್ರಜಾಪ್ರಭುತ್ವದಲ್ಲಿ ಎಲ್ಲಿಯವರೆಗೆ ಸಹಕಾರಿ ಸಂಘ ಸಂಸ್ಥೆಗಳು ಬಲಶಾಲಿಯಾಗಿ ಬೆಳೆಯುವುದಿಲ್ಲವೋ ಅಲ್ಲಿಯವರೆಗೆ ಪ್ರಜಾಪ್ರಭುತ್ವಕ್ಕೆ ಅರ್ಥವಿಲ್ಲ. ಈ ಆಯವ್ಯಯದಲ್ಲಿ ಸಹಕಾರಿ ರಂಗಕ್ಕೆ ಒಂದು ಪುಡಿಕಾಸನ್ನು ಸಹಿತಾ ಇವತ್ತು ಒದಗಿಸಿಲ್ಲ. ಪ್ರಾಥಮಿಕ ಸಹಕಾರ ಸಂಘಗಳಿರಬಹುದು, ತಾಲ್ಲೂಕು ಮಟ್ಟದ ಸಹಕಾರಿ ಸಂಘಗಳು ಇರಬಹುದು. ಇವತ್ತು ಸಹಕಾರಿ ಸಂಘವನ್ನು ಬಲಪಡಿಸಬೇಕಾಗಿದೆ ಹಾಗೂ ಅಲ್ಲಿರತಕ್ಕಂಥ ನೌಕರರಿಗೆ ಯಾವುದೇ ತರಹದ ಸಂಬಳ ಕೊಡುವ ಬಗ್ಗೆ ಸರ್ಕಾರ ವ್ಯವಸ್ಥೆ ಮಾಡಿಲ್ಲ. ಅವರು ಸತ್ಯಾಗ್ರಹ ಮಾಡುತ್ತಿದ್ದಾರೆ. ಆ ಬಗ್ಗೆಯೂ ಯಾವುದೇ ವ್ಯವಸ್ಥೆಯನ್ನು ಮಾಡಿಲ್ಲ. ಅದಕ್ಕಾಗಿ ಗ್ರಾಮಾಂತರ ಸಹಕಾರ ಸಂಘಗಳಲ್ಲಿ ಇವತ್ತು ರೈತನಿಗೆ ಬೇಕಾಗುವಂಥ ಗೊಬ್ಬರವನ್ನು, ಬೀಜವನ್ನು ಸಲಕರಣೆಗಳನ್ನು ಕೊಡುವಂಥ ವ್ಯವಸ್ಥೆ ಅಲ್ಲಿ ಬರಬೇಕು. ರೈತ ಬೆಳೆಯತಕ್ಕಂಥ ಮಾಲುಗಳನ್ನು ಖರೀದಿಸಿ ಅವನಿಗೆ ಯೋಗ್ಯ ಬೆಲೆಯನ್ನು ಕೊಡತಕ್ಕಂಥ ಒಂದು ಶಕ್ತಿ ಗ್ರಾಮೀಣ ಸಹಕಾರ ಸಂಘಕ್ಕೆ ತರತಕ್ಕಂಥ ವಿಚಾರವನ್ನು ಇವತ್ತು ನಾವು ಮಾಡಬೇಕಾಗಿದೆ. ಆ ದಿಸೆಯಲ್ಲಿ ಸರ್ಕಾರ ಈ ಸಹಕಾರಿ ರಂಗಕ್ಕೆ ಬಹಳ ನಿಷ್ಕಾಳಜಿಯನ್ನು ಮಾಡಿದೆ. ಈ ಗ್ರಾಮೀಣ ಆರ್ಥಿಕ ಅಭಿವೃದ್ಧಿ ಕುಂಠಿತವಾಗಲಿಕ್ಕೆ ಇದು ಕಾರಣವೆಂದು ತಮ್ಮ ಮೂಲಕ ಹೇಳುತ್ತೇನೆ. ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಸರ್ಕಾರ ವಹಿಸಬೇಕೆಂದು ತಮ್ಮ ಮೂಲಕ ಪುನಃ ಹೇಳುತ್ತೇನೆ. ಇನ್ನು ಕೊನೆಯದಾಗಿ, ಹೇಳುವುದಾದರೆ,

ಮಲೆನಾಡು ಅಭಿವೃದ್ಧಿ ಮಂಡಳಿ ಎಂದು ಮಾಡಿದ್ದಾರೆ. ಈ ಅಭಿವೃದ್ಧಿ ಮಂಡಲಿಯಲ್ಲಿ ಶಿವಮೊಗ್ಗ ಜಿಲ್ಲೆ ಸಹಿತಾ ಬರುತ್ತಿದೆ. ಮಾನ್ಯ ಮುಖ್ಯಮಂತ್ರಿಯವರ ತಾಲ್ಲೂಕು ಸಹಾ ಅದರಲ್ಲಿ ಬರುತ್ತಿದೆ. ಅರೆ ಮಲೆನಾಡು ಪ್ರದೇಶಗಳಾದ ಹಿರೇಕೆರೂರು ತಾಲ್ಲೂಕು. ಹಾನಗಲ್ ತಾಲ್ಲೂಕ್ ಮತ್ತು ಕಲ್ಘಟಗಿ ತಾಲ್ಲೂಕ್‌ಗಳನ್ನು ಸಹಿತ ಈ ಮಲೆನಾಡು ಅಭಿವೃದ್ಧಿ ಮಂಡಲಿಯಲ್ಲಿ ಸೇರಿಸಿಕೊಂಡು ಆ ಕ್ಷೇತ್ರದ ಅಭಿವೃದ್ಧಿಯಾಗುವುದು ಅವಶ್ಯಕವಿದೆಯೆಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಮಂಜುನಾಥ ಸಿ. ಕುಣ್ಣೂರ್ (ಶಿಗ್ಗಾಂವ್) : ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಕರ್ನಾಟಕ ರಾಜ್ಯದ 1991-92ರ ಆಯವ್ಯಯದ ಪತ್ರವನ್ನು ನಮ್ಮ ಕರ್ನಾಟಕ ರಾಜ್ಯದ ನಾಲ್ಕು ಕೋಟಿ ಜನತೆಯ ಕಣ್ಮಣಿಯಾದ, ಬಡವರ ಬಂದು ಹಿಂದುಳಿದ ವರ್ಗದವರ ನಾಯಕರಾದ ಹಾಗೂ ಸರ್ವಧರ್ಮಗಳ ಹಿತ ಚಿಂತಕರಾದ ನಮ್ಮ ನೆಚ್ಚಿನ ಮುಖ್ಯಮಂತ್ರಿಗಳಾದ ಶ್ರೀಮಾನ್ ಬಂಗಾರಪ್ಪನವರು ಮಂಡಿಸಿದ ಆಯವ್ಯಯವನ್ನು ಸಂಪೂರ್ಣವಾಗಿ ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ಈ ಒಂದು ಆಯವ್ಯಯ ಪತ್ರದ ಮೇಲೆ ಮಾತನಾಡುವಾಗ ಹಿರಿಯ ಸದಸ್ಯರಾದ ವಿರೋಧ ಪಕ್ಷದ ಮಾನ್ಯ ದೇಶಪಾಂಡೆಯವರು ಮತ್ತು ಇನ್ನಿತರ ಅನೇಕ ಸದಸ್ಯರುಗಳು ಸುದೀರ್ಘವಾದ ಭಾಷಣವನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಆದರೆ ಯಾವ ಒಂದು ಕಾರ್ಯಕ್ರಮಗಳ ಬಗ್ಗೆ ಕೂಡ ಅವರು ಹಿತ ಚಿಂತನೆಯನ್ನು ಮಾಡಿಲ್ಲ ಎಂದು ಅವರು ನೇರವಾಗಿ ಆಪಾದನೆ ಮಾಡಿದ್ದಾರೆ. ಈಗಾಗಲೇ ನಮ್ಮ ಕಾಂಗ್ರೆ ಪಕ್ಷದ ಸದಸ್ಯರು ಹೇಳಿದಂತೆ ನಮ್ಮ ಹಳ್ಳಿಯ ಕಡೆಗೆ ಒಂದು ಗಾದೆ ಮಾತು ಹೇಳುತ್ತಾರೆ. ಆಡು ಮುಟ್ಟದ ಗಿಡ ಇಲ್ಲ ಎಂದು. ನಮ್ಮ ನೆಚ್ಚಿನ ಮುಖ್ಯಮಂತ್ರಿಗಳು ಆಯವ್ಯಯವನ್ನು ಮಂಡನೆ ಮಾಡುವಾಗ ಎಲ್ಲ ವಿಷಯಗಳ ಬಗ್ಗೆ ಚಿಂತನೆ ಮಾಡಿ, ಇದನ್ನು ಮಂಡಿಸಿದ್ದನ್ನು ನೋಡಿದರೆ ಇವತ್ತು ಜನ ಸಾಮಾನ್ಯರು ಕೂಡ ತಮ್ಮ ಒಂದು ಮೆಚ್ಚಿಗೆಯನ್ನು ವ್ಯಕ್ತ ಮಾಡುತ್ತಿದ್ದಾರೆ ಎನ್ನತಕ್ಕದ್ದನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈ ಒಂದು ಅಧಿಕಾರದ ಚುಕ್ಕಾಣಿಯನ್ನು ಹಿಡಿಯುವ ಕಾಲದಲ್ಲಿ ಈ ಕರ್ನಾಟಕ ರಾಜ್ಯದಲ್ಲಿ ಕೋಮು ಗಲಭೆಗಳು ಉಂಟಾಗಿ ಅಶಾಂತಿ, ಅವ್ಯವಸ್ಥೆ ಹರಡತಕ್ಕ ಪರಿಸ್ಥಿತಿ ಬಂದಿತ್ತು. ಆಗ ಅಂತಹ ಒಂದು ಪರಿಸ್ಥಿತಿಯನ್ನು ಅವರು ದಿಢೀರನೆ ಸೂಕ್ಷ್ಮತನದಿಂದ, ಜಾಣತನದಿಂದ ಎದುರಿಸಿ, ಸೂಕ್ತ ಈ ಕಾರ್ಯಕ್ರಮವನ್ನು ಹಾಕಿ ಯಶಸ್ವಿಗೊಳಿಸಿ ಜೊತೆಗೆ ಈ ಒಂದು ಕೋಮು ಗಲಭೆಯಲ್ಲಿ ಜೀವ ಕಳೆದುಕೊಂಡವರಿಗೆ ಮತ್ತು ಆಸ್ತಿ ಪಾಸ್ತಿಗಳನ್ನು ಕಳೆದುಕೊಂಡವರಿಗೆ ಒಂದು ಪರಿಹಾರವನ್ನು ಕೂಡ ಕೊಟ್ಟಿದ್ದಾರೆ ಈ ರಾಜ್ಯದ ಜನತೆಗೆ ಒಂದು ಒಳ್ಳೆಯ ದಿಕ್ಕನ್ನು ತೋರಿಸಿಕೊಟ್ಟಿದ್ದಾರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ನಮ್ಮೆಲ್ಲರಿಗೂ ಗೊತ್ತಿದೆ. ನಮ್ಮ ಕಾಂಗ್ರೆ ಅಧಿಕಾರಕ್ಕೆ ಬಂದು ಸುಮಾರು ಒಂದು ವರ್ಷ ನಾಲ್ಕು ತಿಂಗಳೂ ಆಗಿರಬಹುದು. ಇದರ ಹಿಂದೆ ರಾಜ್ಯದ ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟಿತು. ಕೆಲವು ಸಾರಿ ಸರ್ಕಾರಿ ನೌಕರರ ಪಗಾರವನ್ನು ತಡವಾಗಿ ಕೊಡತಕ್ಕ ಸಂದರ್ಭಗಳೂ ಬಂದಿದ್ದವು. ಜೊತೆಗೆ ಅನೇಕ ಕಂಟ್ರಾಕ್ಟರ್‌ಗಳ ಬಿಲ್ ಸರ್ಕಾರಕ್ಕೆ ವಾಪಸ್ ಬಂದಂತಹ ಅನೇಕ ಸಂದರ್ಭಗಳನ್ನು ನಾವು ನೋಡಿದ್ದೇವೆ. ಆದರೆ ಇವತ್ತು ಕಳೆದ ಒಂದು ವರ್ಷ ನಾಲ್ಕು ತಿಂಗಳ ಹಿಂದೆ ಅಧಿಕಾರಕ್ಕೆ ಬಂದ ನಮ್ಮ ಸರ್ಕಾರದಲ್ಲಿ ಸತತವಾಗಿ ಅಂಥ ಯಾವುದೇ ಘಟನೆಗಳನ್ನು ನಾವು ನೋಡುತ್ತಿರುವುದಿಲ್ಲ ಎಂದರೆ ಸೋಜಿಗ ಆಗಲಿಕ್ಕಿಲ್ಲ, ಆದ್ದರಿಂದ ಇವತ್ತು ಆರ್ಥಿಕ ಪರಿಸ್ಥಿತಿ ಚೆನ್ನಾಗಿದೆ. ಇವತ್ತು ಅದನ್ನು ಅಭಿವೃದ್ಧಿಗೊಳಿಸಲಾಗಿದೆ ಸುಮಾರು 1510 ಕೋಟಿ ರೂಪಾಯಿಗಳ ಒಂದು ವರ್ಷದ ಉದ್ದೇಶಿತ ಯೋಜನಾ ವೆಚ್ಚವನ್ನು ಇವತ್ತು ಆಯವ್ಯಯದಲ್ಲಿ ಮಂಡಿಸಿದ್ದೇವೆ. ಈ ಒಂದು ಆಯವ್ಯಯದಲ್ಲಿನ ಸಾಧನೆಗಳು ಮುಖ್ಯವಾಗಿ ತುಂಡು ಜಮೀನಿನ ಒಂದು

ಕಾಯಿದೆಯನ್ನು ನಿಷೇಧಿಸುವ, ಕೃಷಿಕರಿಗೆ ಪಾಸ್‌ಬುಕ್‌ಗಳನ್ನು ಕೊಡುವುದು, ವಿಜಯನಗರ ಉಕ್ಕು ಕಾರ್ಖಾನೆಯನ್ನು ಕೂಡಲೇ ಪುನಶ್ಚೇತನಗೊಳಿಸಲು ಕೈಗೆತ್ತಿಕೊಳ್ಳುವುದು, ಭೂಸಾರ ಸಂರಕ್ಷಣೆ, ಕಾನೂನಿನ ಅನ್ವಯ 10 ಎಕರೆ ಒಳಗೆ ಇರತಕ್ಕಂಥ ಹಣ ಮರು ಪಾವತಿ ಮಾಡದಂತೆ ರಿಯಾಯಿತಿ ಒದಗಿಸುವುದು ಜೊತೆಗೆ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಶುಲ್ಕವನ್ನು ರೈತರಿಗೆ ಕಡಿಮೆ ಮಾಡುವುದು. ಮಹಿಳೆಯರಿಗೂ ಕೂಡ ಶೇಕಡಾ 30ರಷ್ಟು ಉದ್ಯೋಗದಲ್ಲಿ ಮೀಸಲಾತಿಯನ್ನು ಇಟ್ಟಿರುವುದು. ಡಾ. ಅಂಬೇಡ್ಕರ್ ಅವರ ಜನ್ಮ ಶತಾಬ್ದಿಯ ಅಂಗವಾಗಿ 30 ಕೋಟಿ ರೂಪಾಯಿಗಳ ಹಣವನ್ನು ಕ್ರೋಢೀಕರಿಸಿ ವಿಶೇಷವಾಗಿ ಪರಿಸಿಷ್ಟ ಜಾತಿ ಹಾಗೂ ಪರಿಸಿಷ್ಟ ವರ್ಗದವರ ಸಲುವಾಗಿ ಈ ಒಂದು ಯೋಜನೆಯನ್ನು ಹಾಕಿಕೊಂಡಿದ್ದು ಜೊತೆಗೆ ದಿನಗೂಲಿ ನೌಕರರ ಮತ್ತು ಸ್ಟೈಪೆಂಡರಿ ಪದವೀಧರರಿಗೆ ಕೂಡ ಉದ್ಯೋಗಗಳನ್ನು ಖಾಯಂಗೊಳಿಸುವುದು. ಇಂತಹ ಅನೇಕ ಯೋಜನೆಗಳನ್ನು ಇವತ್ತು ಕಾರ್ಯಗತ ಮಾಡಿದ್ದೇವೆಂದು ಹೇಳಿದರೆ ಅದು ತುಂಬಾ ಸಂತೋಷ ಸಂಗತಿ ಆಗಿದೆ.

ಇನ್ನು ಕುಡಿಯುವ ನೀರಿನ ವಿಚಾರದಲ್ಲಿ ಈಗಾಗಲೇ ರಾಜ್ಯ ಸರ್ಕಾರದವರು ಇಂತಹ ಪರಿಸ್ಥಿತಿಯಲ್ಲಿ ಆದರೂ ಕೂಡ ಆದ್ಯತೆಯ ಮೇರೆಗೆ ಹೆಚ್ಚಿನ ಮಹತ್ವವನ್ನು ಕೊಟ್ಟು ರಾಜ್ಯಾದ್ಯಂತ ಕುಡಿಯುವ ನೀರಿಗೋಸ್ಕರ ಎಷ್ಟಾದರೂ ಹಣವನ್ನು ನಾವು ಖರ್ಚು ಮಾಡುತ್ತೇವೆ ಎಂದು ಹೇಳಿದ್ದಾರೆ.

ಜೊತೆಗೆ ರಾಯಚೂರು, ಗುಲ್ಬರ್ಗ, ಧಾರವಾಡಗಳಲ್ಲಿಯೂ ಕೂಡ ರಿಗ್ ಮೆಶಿನ್‌ಗಳನ್ನು ಉಪಯೋಗ ಮಾಡಿ ಸುಮಾರು 922 ಗ್ರಾಮಗಳಿಗೆ ಅನುಕೂಲವಾಗತಕ್ಕಂಥ ಒಂದು ಯೋಜನೆಯನ್ನು ಮಾಡಿದ್ದಾರೆ. ಜೊತೆಗೆ ಈಗಾಗಲೇ 246 ಗ್ರಾಮಗಳಿಗೆ ಕೂಡ ಕುಡಿಯುವ ನೀರಿನ ಅನುಕೂಲತೆಯನ್ನು ಮಾಡಿಕೊಟ್ಟಿದ್ದಾರೆ. ಇದೊಂದು ಸಂತೋಷಪಡತಕ್ಕಂಥ ವಿಚಾರವಾಗಿದೆ ಎಂದು ಹೇಳಬಯಸುತ್ತೇನೆ. ಆದರೂ ಕೂಡ ಇವೊತ್ತು ಮುಖ್ಯವಾಗಿ ನನ್ನ ಮತಕ್ಷೇತ್ರದ ಬಗ್ಗೆ ವಿಚಾರ ಮಾಡಿದಾಗ ಶಿಗ್ಗಾಂವ್, ಸವಣೂರ, ಬಂಕಾಪುರ ಈ ಮೂರು ಗ್ರಾಮಗಳಿಗೆ ಕೂಡ 17 ಕಿ.ಮಿ. ಅಂತರದಿಂದ ವರದಾ ನದಿಯಿಂದ ಕೂಡಿಯುವ ನೀರನ್ನು ಒದಗಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಇದರ ಬಗ್ಗೆ ನಾನು ಕಳೆದ ಅಧಿವೇಶನದಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರಾದಂತ ಟಿ.ಎನ್. ನರಸಿಂಹಮೂರ್ತಿಯವರು ಈ ಯೋಜನೆಯನ್ನು ಕಾರ್ಯಗತ ಮಾಡುತ್ತೇವೆ ಎಂದು ಹೇಳಿದ್ದರು ಮತ್ತು ಈ ಯೋಜನೆಯ ಬಗ್ಗೆ ಈಗಾಗಲೇ ಸೂಕ್ತ ಕ್ರಮಗಳನ್ನು ಜರುಗಿಸಲು ತಯಾರಾಗಿದೆ. ವರದಾ ನದಿ ಕುಡಿಯುವ ನೀರಿನ ಯೋಜನೆಗೆ ಸುಮಾರು 5 ಕೋಟಿ, 70 ಲಕ್ಷ ರೂಪಾಯಿಗಳ ಅಂದಾಜು ಸರಕಾರದ ಮುಂದಿದೆ. ಆದುದರಿಂದ ಸದನದಲ್ಲಿ ಉಪಸ್ಥಿತರಿರುವ ಮಾನ್ಯ ಯುವ ಸಚಿವರು ಕೂಡ ಈ ಕುರಿತು ಉದಾರ ಮನಸ್ಸಿನಿಂದ ಆ ಯೋಜನೆಯು ಕಾರ್ಯಗತವಾಗುವಂತೆ ನೋಡಿಕೊಳ್ಳಬೇಕೆಂದು ಅವರಲ್ಲಿ ಕೇಳಿಕೊಂಡು, ಜನತೆಯ ಕುಡಿಯುವ ನೀರಿನ ಈ ಒಂದು ಸಮಸ್ಯೆಯನ್ನು ಅವರು ಪರಿಹರಿಸುವಲ್ಲಿ ಪ್ರಯತ್ನಿಸುತ್ತಾರೆ ಎಂದು ನಂಬಿದ್ದೇನೆ.

ಇನ್ನು ಸಾಲ ಮನ್ನಾ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಮಾನ್ಯ ಬನ್ನಿಕೋಡ್‌ರವರು ಸಾಕಷ್ಟು ವಿಚಾರಗಳನ್ನು ಆ ಬಗ್ಗೆ ಹೇಳಿದ್ದಾರೆ. ಆದರೆ ಈ ಸಾಲ ಮನ್ನಾ ವಿಚಾರದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಅಧಿಕಾರವನ್ನು ವಹಿಸಿಕೊಂಡಂದಿನಿಂದ ಇಂದಿನವರೆಗೆ ಒಂದು ಚಿಂತನೆಯನ್ನು ಸುದೀರ್ಘವಾಗಿ ಮಾಡಿಕೊಂಡು ಬಂದಿರುವುದು ನಾವುಗಳೆಲ್ಲರೂ ತಿಳಿದಿರತಕ್ಕಂಥ ವಿಚಾರವೇ ಆಗಿದೆ. ಈ ಒಂದು ವಿಚಾರವಾಗಿ ಬಜೆಟ್‌ನ 8ನೇ ಪೇಜ್‌ನಲ್ಲಿ "10 ಸಾವಿರದವರೆಗೆ ಇರತಕ್ಕಂಥ ಸಹಕಾರಿ ವಲಯದ ಸಾಲವನ್ನು ಕೂಡ ನಾವು ಮನ್ನಾ ಮಾಡುತ್ತೇವೆ.

132 ಕೋಟಿ ರೂಪಾಯಿಗಳವರೆಗೆ ಈ ಒಂದು ಯೋಜನೆಯಲ್ಲಿ ನಾವು ತುಂಬಬೇಕಾಗುತ್ತದೆ ರಾಜ್ಯ ಮತ್ತು ಕೇಂದ್ರ ಸರಕಾರಗಳು ಈ ಹಣವನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ" ಎಂಬ ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ದೀರ್ಘವಾಗಿ, ಬಾಕಿ ವಿಚಾರಗಳಲ್ಲಿನ ಸಾಲವನ್ನು ಮನ್ನಾ ಮಾಡಬೇಕಾಗಿತ್ತು, ನಮ್ಮ ಹಿಂದಿನ ಪ್ರಧಾನಿಯವರಾಗಿದ್ದ ವಿ.ಪಿ. ಸಿಂಗ್‌ರವರು ಈ ಸಾಲವನ್ನು ಮನ್ನಾ ಮಾಡುತ್ತೇವೆ ಎಂಬ ವಿಚಾರವನ್ನು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದರು. ಈ ಸಾಲ ಮನ್ನಾ ವಿಚಾರದಲ್ಲಿ ಅನೇಕ ಮಾರ್ಗಸೂಚಿಗಳನ್ನು ರಾಜ್ಯ ಸರಕಾರಗಳಿಗೆ ತಿಳಿಸಿ, ಆಣೆವಾರಿ ಪದ್ಧತಿಯ ಬಗ್ಗೆ, ಕಟ್ಟು ಬಾಕಿದಾರ ಬಗ್ಗೆ ಅನೇಕ ರೀತಿಯಲ್ಲಿ ಮಾರ್ಗಸೂಚಿಗಳನ್ನು ತಿಳಿಸಿದ್ದರೂ ಈ ಯೋಜನೆ ರಾಜ್ಯ ಸರಕಾರಗಳ ಮತ್ತು ಕೇಂದ್ರ ಸರಕಾರದ ನಡುವೆ ಇರತಕ್ಕಂಥ ಭಿನ್ನಾಭಿಪ್ರಾಯದಿಂದ ಸರಳವಾಗಿ ಮುಕ್ತ ಕಾರ್ಯವಾಗತಕ್ಕಂಥ ವಿಚಾರವು ಇನ್ನೂ ಹಾಗೆಯೇ ಉಳಿದುಕೊಂಡಿದೆ ಈ ಯೋಜನೆಯು ಒಟ್ಟಾರೆ ನಮ್ಮ ರೈತರಿಗೆ, ಗ್ರಾಮೀಣ ಭಾಗದ ಜನರಿಗೆ ಅನುಕೂಲವಾಗುವಂಥ ಯೋಜನೆಯಾಗಿದೆ, ಇದರಿಂದ ಆ ವರ್ಗದ ಜನರಿಗೆ ಸಂಪೂರ್ಣವಾದಂಥ ರೀತಿಯಲ್ಲಿ ಯಶಸ್ವಿಯಾಗುತ್ತದೆ ಎಂದು ಒಂದು ಭರವಸೆಯನ್ನು ನಾನು ಹೊಂದಿದ್ದೇನೆ.

ಇನ್ನು ನಗರಸಭೆಗಳಲ್ಲಿ ಮತ್ತು ಮುನಿಸಿಪಾಲಿಟಿಗಳಲ್ಲಿ ಏನಾದರೂ ಸುಧಾರಣೆ ಮಾಡಬೇಕೆಂದಿದ್ದರೆ ಇವೊತ್ತು ಅಲ್ಲಿ ಹಣಕಾಸಿನ ಅಡಚಣೆ ಆಗಿದೆ. ಈಗಾಗಲೇ ನಮ್ಮ ಆಯವ್ಯಯ ಪಟ್ಟಿಯಲ್ಲಿ ಆಕ್ಟ್ರಾಯ್ ತೆರಿಗೆಯನ್ನು ಪುನಃ ಹಾಕಬೇಕೆಂಬ ಒಂದು ವಿಚಾರವನ್ನು ಇಟ್ಟಿದ್ದಾರೆ ಅದು ಬಹಳ ಒಳ್ಳೆಯ ಸಲಹೆ ಎಂದು ನನಗನ್ನಿಸುತ್ತದೆ.

ನಮ್ಮ ಮಾನ್ಯ ಮುಖ್ಯಮಂತ್ರಿಯವರು ಏಷಿಯಾ ಖಂಡದಲ್ಲಿಯೇ ಅತೀ ದೊಡ್ಡದಾಗಿ ಬೆಳೆಯುತ್ತಿರುವ ಬೆಂಗಳೂರು ನಗರದ ಅಭಿವೃದ್ಧಿಗಾಗಿ ಮುಖ್ಯಮಂತ್ರಿಗಳ ಬೆಂಗಳೂರು ಪರಿಹಾರ ನಿಧಿಯನ್ನು ಸ್ಥಾಪಿಸಲು ಉದ್ದೇಶಿಸಿರುವುದು ತುಂಬಾ ಸ್ವಾಗತಾರ್ಹವಾದ ವಿಚಾರವಾಗಿದೆ. ಅದನ್ನು ಮಾಡಿ ಬೆಂಗಳೂರು ನಗರದ ಅಭಿವೃದ್ಧಿಯನ್ನು ಮಾಡುತ್ತಾರೆ ಎಂದು ನಂಬಿದ್ದೇನೆ.

ಇನ್ನು ಸಾಕ್ಷರತಾ ಆಂಧೋಲನದ ಬಗ್ಗೆ ಹೇಳಿದ್ದಾರೆ. ನಮ್ಮಲ್ಲಿ ಅಕ್ಷರಸ್ಥರು, ಅನಕ್ಷರಸ್ಥರು ಇದ್ದಾರೆ. ಈ ಒಂದು ಸಾಕ್ಷರತಾ ಆಂಧೋಲನದ ಮೂಲಕ ಸುಮಾರು 25 ಲಕ್ಷ ಜನರನ್ನು ಅಕ್ಷರಸ್ಥರನ್ನಾಗಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಕಳೆದ ವರ್ಷವು ಅಂತರ ರಾಷ್ಟ್ರೀಯ ಸಾಕ್ಷರತಾ ವರ್ಷವೆಂದು ಇತ್ತು. ಆಗ ನಮ್ಮ ಕ್ಷೇತ್ರದಲ್ಲಿಯೂ ಕೂಡ ಆ ಆಂಧೋಲನವು ಚೆನ್ನಾಗಿ ನಡೆದಿತ್ತು. ಅವರ ಅನೇಕ ಸಭೆಗಳಲ್ಲಿ ನಾನೂ ಕೂಡ ಭಾಗವಹಿಸಿದ್ದೆನು. ವಯಸ್ಕರ ಶಿಕ್ಷಣ ಇಲಾಖೆಯವರು ಮತ್ತು ವಿಜಯ ಬ್ಯಾಂಕ್‌ನವರು ಕೂಡಿಕೊಂಡು ಅವರ ಸಂಯುಕ್ತ ಆಶ್ರಯದಲ್ಲಿ ಈ ಕಾರ್ಯಕ್ರಮವನ್ನು ನಡೆಸುತ್ತಿದ್ದರು. ಅಲ್ಲಿ ಜನರಿಗೆ ಅ,ಆ,ಇಯನ್ನು ಕಪ್ಪು ಹಲಗೆ ಮೇಲೆ ಅವರವರ ಕೈಯಿಂದಲೇ ಬರೆಯಿಸುತ್ತಾ ಇದ್ದರು. ಆ ಬಗ್ಗೆ ಜನಜಾಗೃತಿ ಉಂಟುಮಾಡಲು ಬೀದಿನಾಟಕಗಳು ಮತ್ತಿತರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಸಾಕ್ಷರತೆಯ ಆಂಧೋಲನವನ್ನು ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋಗುತ್ತಿದ್ದರು.

(ಗದ್ದಲ)

ಶ್ರೀ ಎಚ್. ಏಕಾಂತಯ್ಯ : ಈ ಕಡೆ ಆ ಜನ, ಆ ಕಡೆ ಒಬ್ಬ ಸದಸ್ಯರಿದ್ದೀವಿ, ಇಂಥ ಪರಿಸ್ಥಿತಿಯಲ್ಲಿ ಸಭೆಯನ್ನು ಮುಂದುವರಿಸಬೇಕೇ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದಕ್ಕಾಗಿ ನಾನು ಒಂದು ಸಲಹೆ ಕೊಡುತ್ತೇನೆ. ಇವತ್ತು ಶುಕ್ರವಾರ, ಮಧ್ಯಾಹ್ನ 2 ಗುಟೆಗೆ ಅಧಿವೇಶನ ಮುಗಿಯುತ್ತದೆಂದು ಎಲ್ಲಾ ಹೊರಟು ಹೋಗಿರಬಹುದು ಆದ್ದರಿಂದ ಸಭೆಯನ್ನು ಮುಂದಕ್ಕೆ ಹಾಕಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿಲ್ಲ, ಜನ ಸಾಯುತ್ತಿದ್ದಾರೆ, ಅಂಥ ಬರಗಾಲ. ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ರೈತನ ಬಗ್ಗೆ ಬಜೆಟ್ ಭಾಷಣದಲ್ಲಿ ಒಂದು ಶಬ್ಧ ಇಲ್ಲ.

(ಗೊಂದಲ)

ಸಾಲ ಮನ್ನಾ ಬಗ್ಗೆ ಒಂದು ಮಾತು ಆಡಿಲ್ಲ, ಬರಗಾಲ ಪ್ರದೇಶಗಳಿಗೆ ಒಬ್ಬ ಮಂತ್ರಿಯೂ ಕೂಡ ಹೋಗಿಲ್ಲ, ಕುಡಿಯುವ ನೀರಿಲ್ಲ, ಹೇಳುವವರು ಕೇಳುವವರು ಯಾರೂ ಇಲ್ಲ, ಇದು ಜವಾಬ್ಧಾರಿ ಸರ್ಕಾರವೇ? ಇದನ್ನು ಪ್ರತಿಭಟಿಸಿ ನಾನು (ಧರಣಿ ಕೂರುವೆನು ಧರಣಿ ಮಾಡಲು ವೆಲ್‌ನ್ನು ಪ್ರವೇಶಿಸಿ ಕುಳಿತುಕೊಂಡರು)

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್ : ಸದನಕ್ಕೆ ಅಗೌರವ ಮಾಡುವಂತಹ ಕೆಲಸವನ್ನು ಯಡಿಯೂರಪ್ಪರವರು ಮಾಡುತ್ತಿದ್ದಾರೆ.

(ಗೊಂದಲ)

ಛೇರ್ಮನ್ : ಅವರು ಮಾತನಾಡುವುದು ಯಾವುದೂ ಕಡತಕ್ಕೆ ಹೋಗುವುದಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ: ಸಾರ್ವಜನಿಕ ಭಾಷಣಕ್ಕೆ ಜನ ಬಂದಿರಲಿಲ್ಲ ಎಂದು ಕಾಣುತ್ತದೆ, ಅದಕ್ಕೆ ಇಲ್ಲಿ ಬಂದು ಕೋಪ ತೋರಿಸುತ್ತಿದ್ದಾರೆ ಅವರು ಧರಣಿ ಕುಳಿತು ಮಾತನಾಡಲು ಅವಕಾಶ ಕೊಡುವುದಾದರೆ ಧರಣಿ ಪ್ರವೇಶಿಸಿ ಮಾತನಾಡಲು ನನಗೂ ಅವಕಾಶ ಕೊಡಿ. (ಧರಣಿ ಮಾಡಿ ಕೂರಲು ವೆಲ್‌ನ್ನು ಪ್ರವೇಶಿಸಿದರು)

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ನನ್ನ ಕ್ರಿಯಾಲೋಪ ಇದೆ. ಸಭೆಯಲ್ಲಿ ಕೋರಂ ಇಲ್ಲ, ಸಭೆಯನ್ನು ಮುಂದಕ್ಕೆ ಹಾಕಿ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಯಡಿಯೂರಪ್ಪರವರು ಮತ್ತು ಎಲ್.ಆರ್. ಶಿವರಾಮೇಗೌಡರು ಬಾವಿಯಲ್ಲಿ ನಿಂತಿದ್ದರು. ಸದನದಲ್ಲಿ ಗೊಂದಲಮಯ ವಾತಾವರಣ)

ಶ್ರೀ ವಾಟಾಳ್ ನಾಗರಾಜ್ : ಕೋರಂ ಇಲ್ಲ, ಕೋರಂ ಇಲ್ಲ ಸದನವನ್ನು ಮುಂದಕ್ಕೆ ಹಾಕಿ.

(ಗೊಂದಲ)

ಶ್ರೀ ಎಂ.ವೀರಪ್ಪಮೊಯಿಲಿ (ಶಿಕ್ಷಣ ಸಚಿವರು) : ರಾಜಕೀಯ ಭಾಷಣ ಮಾಡಲಿಕ್ಕೆ ಬೇರೆ ವೇದಿಕೆ ಇದೆ. ಯಡಿಯೂರಪ್ಪನವರು ಹಿರಿಯ ಸದಸ್ಯರು ಇದ್ದಾರೆ.

(ಗೊಂದಲ)

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

(ಗೊಂದಲ)

SRI M. VEERAPPA MOILY : Here is a member who does not believe in Parliamentary Democracy.

(INTERRUPTIONS)

SRI M. VEERAPPA MOILY : This is an insult to Democracy. This is an insult to the House. This is not the way that the an hon. member behave in this House. He was not present for the last three days in the House. Now

suddenly, he is trying to create an anarchy in this House. The obstruction of proceedings of the house in this manner, I don't think, should be tolerated.

(INTERRUPTIONS)

SRI M.VEERAPPA MOILY: I condemn this. He has no faith in Democracy. The hon. member should understand that his place is not here. His place is somewhere else.

(INTERRUPTIONS)

SRI M. VEERAPPA MOILY : The whole House will condemn the dictatorial attitude of this lone member who is taking the house to ransom. He is not participating in the debate.

(INTERRUPTIONS)

ಅಧ್ಯಕ್ಷರು: ದಯವಿಟ್ಟು ಸದನದ ಬಾವಿಯೊಳಗೆ ಕುಳಿತಿರುವ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಇದ್ದಕ್ಕಿದ್ದಂತೆ ಬಂದು ಬರಸಿಡುಲು ಹೊಡೆದಹಾಗೆ ಹೊಡೆದು ರೈತರ ಬಗ್ಗೆ ನಾವೇ ಇರೋರು ಎಂದು ಏನು ಪ್ರಚಾರ ನಡೆಯಿತು ಇದನ್ನು ದಯವಿಟ್ಟು ಕಡತದಿಂದ ತೆಗೆಸಬೇಕು.

(ಗೊಂದಲ)

ಅಧ್ಯಕ್ಷರು: ನನ್ನ ಅಪ್ಪಣೆ ಇಲ್ಲದೆ ನೀವು ಏನು ಮಾತನಾಡಿದರೂ ಕಡತಕ್ಕೆ ಹೋಗುವುದಿಲ್ಲ ಇನ್ನೊಬ್ಬರು ಮಾತನಾಡಿದರೂ ಕಡತಕ್ಕೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಸದನದ ವೆಲ್ ಒಳಗಡೆಯಿಂದ ಏನೇನು ಮಾತನಾಡಿದ್ದಾರೆ ಅದನ್ನು ಯಾರೂ ವರದಿ ಮಾಡಬೇಕಾಗಿಲ್ಲ. ಅದು ಸಭಾ ನಡವಳಿಕೆಗೆ ವಿರೋಧವಾದಂತಹ ನಡವಳಿಕೆಯಾಗಿದೆ. * * *

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೆ ರೈತರ ಬಗ್ಗೆ ಮಾತನಾಡುವುದಕ್ಕೆ ಅಧಿಕಾರ ಇದೆ.

(ಗೊಂದಲ)

ಅಧ್ಯಕ್ಷರು : ಬಜೆಟ್ ಡಿಸ್‌ಕಷನ್ ಕಳೆದ ಮೂರು ದಿವಸದಿಂದ ನಡೆಯುತ್ತಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಶಾಂತವಾದಂತಹ ವಾತಾವರಣದಲ್ಲಿ ಸರ್ಕಾರವನ್ನು ಬಹಳ ಗಂಭೀರವಾಗಿಯೂ ಟೀಕೆ ಮಾಡಿದ್ದಾರೆ. ಉಗ್ರವಾಗಿಯೂ ಟೀಕೆ ಮಾಡಿದ್ದಾರೆ. ಇನ್ನು ಮಾನ್ಯ ಸದಸ್ಯರುಗಳು ರಚನಾತ್ಮಕವಾಗಿ ಉಗ್ರವಾಗಿಯೂ ಟೀಕೆ ಮಾಡಿದ್ದಾರೆ. ನಿಮ್ಮ ಪಕ್ಷದ ಪರವಾಗಿ ನೀವು ಕೂಡ ಅಷ್ಟೆ ತೀಕ್ಷ್ಣವಾಗಿ ಟೀಕೆ ಮಾಡತಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬಹುದು. ಈಗ ನೀವು ಏನು ಹೇಳಿದರೂ, ಕಡತಕ್ಕೆ ಹೋಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಇಲ್ಲಿ ಬಂದು ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಇಡೀ ರಾಜ್ಯದಲ್ಲಿರುವ ಬರಗಾರದ ಬಗ್ಗೆ....

(ಗೊಂದಲ)

* * * Not recorded as ordered by the chair.

ಅಧ್ಯಕ್ಷರು : ಹೊಸದಾಗಿ ಬರಗಾಲ ಬಂದಿದೆಯೇ ಯಡಿಯೂರಪ್ಪನರೇ? ಬರಗಾಲದ ವಿಚಾರದಲ್ಲಿ ಈ ಸದನದಲ್ಲಿ ಚರ್ಚೆ ಮಾಡಲಿಲ್ಲವೇ? ಬರಗಾಲದ ವಿಚಾರವನ್ನು ಒಂದು ಟ್ರಂಫ್ ಕಾರ್ಡ್ ಆಗಿ ಉಪಯೋಗಿಸಿಕೊಳ್ಳಲು ನಾನು ಅವಕಾಶಕೊಡುವುದಿಲ್ಲ. ಬರಗಾಲದ ಬಗ್ಗೆ ಚರ್ಚೆ ಮಾಡಲಿಲ್ಲವೇನು?

ಶ್ರೀ ಬಿ.ಎಸ್. ಯಡಿಯೂರಪ್ಪ : ರೈತರ 10 ಸಾವಿರದವರೆಗಿನ ಸಾಲವನ್ನು ಮನ್ನಾ ಮಾಡುತ್ತೇವೆಂದು ಸರ್ಕಾರ ಹೇಳಿತ್ತು.

(ಗೊಂದಲ)

ಅಧ್ಯಕ್ಷರು : ವಿರೋಧ ಪಕ್ಷದವರಿಂದಲೂ ಕೂಡ ನಾನು ಸಹಕಾರವನ್ನು ಕೇಳುತ್ತಿದ್ದೇನೆ. ಮಾನ್ಯ ಅಧಿಕೃತ ವಿರೋಧ ಪಕ್ಷದವರು ಸಹಕಾರವನ್ನು ಕೊಡುತ್ತಿದ್ದಾರೆ. ಬರಗಾಲದ ವಿಚಾರದಲ್ಲಿ ಈ ಸದನದಲ್ಲಿ 2 ದಿವಸಗಳ ಚರ್ಚೆ ನಡೆದಿದೆ. ಕುಡಿಯುವ ನೀರಿನ ವಿಚಾರದಲ್ಲಿ 2 ಗಂಟೆಗಳ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಸರ್ಕಾರವನ್ನು ಸೃಷ್ಠಿ ಮಾಡುವಂತಹ ಅಧಿಕಾರ ನಿಮಗೆ ಇದೇ ಸರ್ಕಾರವನ್ನು ತೆಗೆಯತಕ್ಕ ಹಕ್ಕು ನಿಮಗೆ ಇದೆ, ಇನ್ನೇನು ಬೇಕು ನಿಮಗೆ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ಚರ್ಚೆಯಾದ ತಕ್ಷಣಕ್ಕೆ ಆ ಬಡವನ ಕೆಲಸ ಆಗಬೇಕಲ್ಲ?

ಅಧ್ಯಕ್ಷರು : ನೀವು ಕೂಗಾಡಿದ ತಕ್ಷಣ ಬಡವನ ಕೆಲಸ ಆಗುತ್ತದೆ ಎಂದು ತಿಳಿದುಕೊಂಡಿದ್ದೀರಾ? 224 ಜನ ಇರತಕ್ಕ ಈ ಸದನದಲ್ಲಿ ನೀವು ಒಬ್ಬರು ಬೇಜವಾಬ್ಧಾರಿ ಸರ್ಕಾರ ಅಂದರೆ ಬಾಕಿಯವರು ಸಹಿಸಿಕೊಂಡು ಕುಳಿತುಕೊಳ್ಳಬೇಕೇ? ನಿಮ್ಮನ್ನು ಕರೆದಾಗ ನಿಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ಸಂಪೂರ್ಣ ಹಕ್ಕಿದೆ. ಮಧ್ಯದಲ್ಲಿ ಎದ್ದು ನಿಂತು ಬೇಜವಾಬ್ಧಾರಿ ಸರ್ಕಾರ ಎಂದು ಹೇಳಲಿಕ್ಕೆ ನಿಮಗೆ ಸ್ವಾತಂತ್ರ ಇಲ್ಲ, ನೀವು ರಾಷ್ಟ್ರೀಯ ಪಕ್ಷದನಾಯಕರಾಗಿ ಆ ಗೌರವಕ್ಕೆ ನೀವು ಪಾತ್ರರಾಗಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಕಾನೂನು ಬಾಹಿರವಾಗಿ ಯಾವುದೇ ಮಾತನ್ನು ಹೇಳಿಲ್ಲ.

(ಗೊಂದಲ)

ಅಧ್ಯಕ್ಷರು: ನಿಮ್ಮ ಸರದಿ ಬಂದಾಗ ನಿಮಗೆ ಮಾತನಾಡಲು ಸಂಪೂರ್ಣವಾದ ಹಕ್ಕಿದೆ. ನಿಮ್ಮನ್ನು ಕರೆದಾಗ ನಿಮ್ಮ ಪಕ್ಷದ ಪರವಾಗಿ ಯಾರಾದರೂ ಭಾಗವಹಿಸಿ ಮಾತನಾಡಬಹುದು. ಇದುವರೆಗೂ ನೀವು ಭಾಗವಹಿಸಿದ್ದರೆ ನಿಮ್ಮ ಪಕ್ಷದ ಪರವಾಗಿ ಭಾಗವಹಿಸುವುದಕ್ಕೆ ಸಂಪೂರ್ಣವಾದ ಸರ್ವಸ್ವತಂತ್ರ ಇದೆ.

5.25 **ಪಿ.ಎಂ.**

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಅಂದರೆ....

ಅಧ್ಯಕ್ಷರು : ಈಗ ಹೇಳುವುದಕ್ಕೆ ಅವಕಾಶ ಎಲ್ಲಿದೆ? ಈಗ ಕುನ್ನೂರ್‌ರವರ ಅವಕಾಶ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ರೈತರನ್ನು ಸರ್ಕಾರ ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದೆ.

(ಗೊಂದಲ)

ಅಧ್ಯಕ್ಷರು: ಅದಕ್ಕೆ ಏನು ಮಾಡಬೇಕೆಂದು ಹೇಳಿ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಅಧ್ಯಕ್ಷರೆ, ಇದು ರೈತ ವಿರೋಧಿ ಸರ್ಕಾರ.....

(ಗೊಂದಲ)

ಅಧ್ಯಕ್ಷರು : ನಾನು ಈ ಸರ್ಕಾರವನ್ನು ತೆಗೆದುಹಾಕಿಬಿಡಲೇನು? ತೆಗೆದುಹಾಕಲಿಕ್ಕೆ ಬರುತ್ತದೆಯೇ?

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಸದಸ್ಯರು ಅಧ್ಯಕ್ಷರಿಗೆ ಅಷ್ಟೊಂದು ಮನ ನೋಯಿಸುವುದು ಬೇಡ ಎಂದು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರಿಗೆ, ನಾನು ಮನ ನೋಯಿಸುವಂತಾದ್ದು ಮಾಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು: ನೀವು ಒಂದು ರಾಷ್ಟ್ರೀಯ ಪಕ್ಷದ ನಾಯಕರಾಗಿ ಸರ್ವರ ಮನ್ನಣೆಗೆ ಪಾತ್ರರಾಗಿರಬೇಕಾಗಿರತಕ್ಕಂಥ ವಿಚಾರ ಇದೆ. ಅಂತಾದ್ದರಲ್ಲಿ, ನೀವು ಸರ್ಕಾರವನ್ನು ಬೇಜವಾಬ್ದಾರಿ ಸರ್ಕಾರ, ರೈತರ ಬಗ್ಗೆ ನಿರ್ಲಕ್ಷ್ಯ ಮಾಡಿದ್ದಂಥ ಸರ್ಕಾರ, ಇವೆಲ್ಲಾ ಹೇಳುವಂತಾದ್ದು ಏನಿದೆ, ಅದು ನಿಮಗೆ ಅವಕಾಶ ಕೊಟ್ಟಾಗ, ನಿಮ್ಮ ಸರದಿ ಬಂದಾಗ ಹೇಳಿ. ಮಾನ್ಯ ರುಕ್ಮಯ್ಯ ಪೂಜಾರಿಯವರ ಸರದಿ ಬಂದಾಗ ಅವರು ಹೇಳಬಹುದು. ತಮ್ಮ ಸರದಿ ಬಂದಾಗ ರೈತರನ್ನು ಧ್ವಂಸ ಮಾಡತಕ್ಕಂಥ ಸರ್ಕಾರ ಎಂದು ಹೇಳತಕ್ಕಂಥದ್ದು ನಿಮಗೆ ಸೇರಿದಂಥ ವಿಚಾರ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ರೈತರು ಸಂಪೂರ್ಣವಾಗಿ ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಾರೆ.....

(ಗೊಂದಲ)

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೆ, ನಾನು ತಮ್ಮನ್ನು ಮೂರು ದಿವಸಗಳಿಂದ ಕಾಣಲಿಲ್ಲ. ಅಧಿಕೃತ ಪ್ರವಾಸ ಇದೆ, ನಮ್ಮ ನಾಯಕರು ಬಂದಿದ್ದಾರೆಂದು ತಾವು ನನಗೆ ಹೇಳಿ ಹೋಗಿದ್ದಿರಿ. ತಾವು ಇದ್ದಕ್ಕಿದ್ದ ಹಾಗೆ ಬಂದು, ಈ ರೀತಿಯಲ್ಲಿ ಹೇಳಿದರೆ ಹೇಗೆ? ಇವೊತ್ತು ಶುಕ್ರವಾರ ಎರಡು ಗಂಟೆಗೆ ಸಭೆಯನ್ನು ಅಡ್ಜರ್ನ್ ಮಾಡಬೇಕಾಗಿತ್ತು. ಆದರೆ ಇನ್ನೂ ಹೆಚ್ಚು ಮಾನ್ಯ ಸದಸ್ಯರಿಗೆ ಮಾತನಾಡಲಿಕ್ಕೆ ಅವಕಾವ ಕೊಡಬೇಕು ಎನ್ನುವ ದೃಷ್ಟಿಯಿಂದ ಮುಂದುವರಿಸಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೆ, ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಾವು ಸರ್ಕಾರವನ್ನು ಟೀಕೆ ಮಾಡುವುದರಲ್ಲಿ ಯಾರಿಗೂ ಸಹಿತ ಕಡಿಮೆ ಏನೂ ಇಲ್ಲ. ಯಾರ ಗುತ್ತಿಗೆಯನ್ನು ಸಹಿತ ನಾವು ಇಲ್ಲಿ ಯಾರು ತೆಗೆದುಕೊಂಡಿಲ್ಲ. ಇವೊತ್ತು ಸದನ ಬೆಳಿಗ್ಗೆ ಒಂಭತ್ತೂವರೆ ಗಂಟೆಯಿಂದ ಶುರುವಾಗಿದೆ. ಎರಡು ಮೂರು ಗಂಟೆಯೊಳಗೆ ಈ ಚರ್ಚೆ ಬಗ್ಗೆ ಸಮಾಪ್ತಿ ಮಾಡಬೇಕೆಂದು

ಇದ್ದೆವು. ನಮ್ಮ ಪಕ್ಷದ ವತಿಯಿಂದ ಹೊಸದಾಗಿ ಬಂದಿರತಕ್ಕ ಸದಸ್ಯರುಗಳು ಮಾತನಾಡಬೇಕೆಂದಿರುವುದರಿಂದ ಸದನ ಮುಂದುವರಿದಿದೆ. ನಾನು ಸುಮಾರು 6 ಗಂಟೆಯಿಂದ ಮಾತನಾಡಬೇಕೆಂದು ಕಾದಿದ್ದೇನೆ. ಈ ಸಂದರ್ಭದಲ್ಲಿ ಕೋರಂ ಪ್ರಶ್ನೆ ಬರುವುದಿಲ್ಲ, ಏಕೆಂದರೆ, ಕೋರಂ ಬಗ್ಗೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಒಪ್ಪಿಕೊಂಡಿದ್ದೇವೆ. ಕೋರಂ ಇಲ್ಲದಿದ್ದರೂ ಮಾತನಾಡುತ್ತೇವೆ ಎನ್ನುವುದು ಆಗಿದೆ. ಈ ಸಂದರ್ಭದಲ್ಲಿ ನನ್ನ ಮನವಿ ಏನೆಂದರೆ, ನಾವು ಎಲ್ಲಾ ಸಮಸ್ಯೆಗಳ ಬಗ್ಗೆ ರೈತರ ಸಾಲದ ಸಮಸ್ಯೆ, ಇರಬಹುದು, ಬರಗಾಲದ ಸಮಸ್ಯೆ ಇರಬಹುದು, ಕುಡಿಯುವ ನೀರಿನ ಸಮಸ್ಯೆ ಇರಬಹುದು, ಸಂವಿದಾನಾತ್ಮಕವಾಗಿ ನಮಗೆ ಸಿಕ್ಕಿರತಕ್ಕಂಥ ಈ ಸದನದ ಹಕ್ಕನ್ನು ಉಪಯೋಗಿಸಿಕೊಂಡು ಮಾತನಾಡುವವನಿದ್ದೇನೆ. ತಾವು ದಯವಿಟ್ಟು ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಮೊಯಿಲಿಯವರೆ, ತಾವು ಆಗಲೇ ಪಾಯಿಂಟ್ ಆಫ್ ಆರ್ಡರ್ ಹೇಳುತ್ತಿದ್ದರಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಅಧ್ಯಕ್ಷರೆ, ಈಗ ಆ ಪಾಯಿಂಟ್ ಆಫ್ ಆರ್ಡರ್ ಉದ್ಭವವಾಗುವುದಿಲ್ಲ. Sir, I wanted to raise a point of order with regard to the hon. members entering into conversation straightway is not permitted under the rules. That question does not arise now.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ಇವೊತ್ತು ಬರಗಾರದಲ್ಲಿ ಜನರು ಸಾಯುತ್ತಿರಬೇಕಾದರೆ, ಇವರು ಹಣ ಬಿಡುಗಡೆ ಮಾಡಿಲ್ಲ, ನಾನು ಇದನ್ನು ಹೇಳುವುದಕ್ಕೆ ಹೊರಟಿದ್ದುದು ನಿಜ. ಅದಕ್ಕೆ ಸಸ್ಪೆಂಡ್ ಮಾಡುವುದಾದರೆ ಕ್ರಮ ತೆಗೆದುಕೊಳ್ಳಲಿ. ರೈತರ ಪರವಾಗಿ ಮಾತನಾಡಬೇಕೆಂದು ಎದ್ದಾಗ ವೆಲ್‌ನ ಒಳಗಡೆ ಬರಲಿಕ್ಕೆ ನನಗೆ ಸ್ವಾತಂತ್ರ್ಯ ಇದೆ, ನಾನು ಬರುತ್ತೇನೆ. ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಲಿ. ಅಲ್ಲಿ ಜನರು ಸಾಯುತ್ತಿದ್ದಾರೆ, ಇವರು ಹಣ ಬಿಡುಗಡೆ ಮಾಡಿಲ್ಲ, ಅದರ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಳ್ಳದೇ ಸುಮ್ಮನೆ ಮಾತನಾಡುತ್ತಿದ್ದಾರೆ.

ಶ್ರೀ ಮಂಜುನಾಥ ಸಿ. ಕುನ್ನೂರು : ಅಧ್ಯಕ್ಷರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ನಮ್ಮ ಆಯವ್ಯಯ ಪತ್ರದಲ್ಲಿ ಇವೊತ್ತು ಲೇಖಕರಿಗೆ ಮತ್ತು ಕಲಾವಿದರಿಗೆ ಮಾಸಾಶನ ಮುಂದುವರಿಸುವಂಥ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ. ಜೊತೆಗೆ ಹಂಪೆಯಲ್ಲಿ ಒಂದು ಕನ್ನಡ ವಿಶ್ವವಿದ್ಯಾಲಯವನ್ನು ತೆಗೆಯಬೇಕೆಂಬ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಜೊತೆಗೆ ರಂಗಮಂದಿರವನ್ನು, ಮಿನಿ ಕ್ರೀಡಾಂಗಣವನ್ನು ಕೂಡ ಗ್ರಾಮೀಣ ಮಟ್ಟದಲ್ಲಿ ತೆರೆದು ಇವೊತ್ತು ಕಲಾವಿದರಿಗೆ ಒಂದು ಹೆಚ್ಚಿನ ಪ್ರೋತ್ಸಾಹ ಕೊಡಲಿಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ಈಗ ಇದಕ್ಕೆ ಕೊಟ್ಟಂಥ ಹಣ ಕೇವಲ 50 ಲಕ್ಷ ರೂಪಾಯಿ ಇದೆ. ಈಗಾಗಲೇ ರಾಜ್ಯಪ್ರಶಸ್ತಿಯನ್ನು ಪಡೆದಂಥ ಮಾನ್ಯ ಸದಸ್ಯರಾದ ಇದಿನಬ್ಬನವರು ಕೂಡ ಈ ಹಣ ಕಡಿಮೆಯಾಗುತ್ತಿದೆ ಎಂದು ಹೇಳಿದ್ದಾರೆ. ಆದ್ದರಿಂದ, ಈ ಬಗ್ಗೆ ಸ್ವಲ್ಪ ಹೆಚ್ಚು ಹಣವನ್ನು ಇದಕ್ಕಾಗಿ ತೊಡಗಿಸಬೇಕು ಎನ್ನತಕ್ಕ ಅಭಿಪ್ರಾಯವನ್ನು ನಾನು ಮಂಡನೆ ಮಾಡುತ್ತಿದ್ದೇನೆ.

ಇನ್ನು ಸಹಕಾರ ಕ್ಷೇತ್ರದಲ್ಲಿ ಇವತ್ತು ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ತೆರೆಯುವುದಕ್ಕೆ ನಾವು ಹೆಚ್ಚಿನ ಮಹತ್ವವನ್ನು ಕೊಡುತ್ತಿದ್ದೇವೆಂಬ ಮಾತನ್ನೂ ಕೂಡ ಆಯವ್ಯಯದಲ್ಲಿ ಹೇಳಿದ್ದಾರೆ. ಇದರ ಜೊತೆಗೆ ಸಹಕಾರಿ ನೂಲಿನ ಗಿರಣಿಗಳನ್ನು ತೆರೆಯುವುದು ಅತಿ ಅವಶ್ಯಕ ಇದೆ. ಕಾರಣ ಹತ್ತಿಯನ್ನು ಬೆಳೆಯತಕ್ಕ ರೈತನಿಗೆ ಹೆಚ್ಚಿನ ಅನುಕೂಲ ಆಗಬೇಕೆಂದರೆ ಗ್ರಾಮೀಣ ಭಾಗಗಳಲ್ಲಿ ಅಂದರೆ ಎಲ್ಲ ಸಹಕಾರಿ

ನೂಲಿನ ಗಿರಣಿಗಳನ್ನು ತೆರೆಯುವುದಕ್ಕೆ ಮುಂದೆ ಬರುತ್ತಾರೆ ಅಲ್ಲಿಯೂ ಕೂಡ ಉತ್ತೇಜನವನ್ನು ಸರ್ಕಾರದವರು ಕೊಡತಕ್ಕದ್ದು ಎನ್ನತಕ್ಕ ಅಭಿಪ್ರಾಯವನ್ನು ನಾನು ಸಭೆಯ ಮುಂದಿಡುತ್ತಿದ್ದೇನೆ.

ಇನ್ನು ಸಾರಿಗೆ ಇಲಾಖೆಯಲ್ಲಿ ಗ್ರಾಮೀಣ ಭಾಗದ ಬಸ್ಸುಗಳಲ್ಲಿ ಪ್ರಯಾಣ ಮಾಡತಕ್ಕ ಪ್ರಯಾಣಿಕರಿಗೆ ಬಹಳ ತೊಂದರೆಯಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಸರ್ಕಾರದಿಂದ ಎಷ್ಟೇ ಬಸ್ಸುಗಳ ವ್ಯವಸ್ಥೆಯನ್ನು ಮಾಡಿದರೂ ಕೂಡ ವಿಶೇಷವಾಗಿ ಸಂತೆಯ ದಿನ ಮತ್ತು ಸೋಮವಾರದ ದಿನಗಳಲ್ಲಿ ನೋಡಿದರೆ ಬಸ್ಸಿನೊಳಗೆ ಎಷ್ಟು ಜನರು ಪ್ರಯಾಣ ಮಾಡುತ್ತಿರುತ್ತಾರೋ ಅಷ್ಟೇ ಜನರು ಬಸ್ಸಿನ ಮೇಲೂ ಕೂಡ ಕೂತು ಪ್ರಯಾಣ ಮಾಡತಕ್ಕದ್ದನ್ನು ನಾವು ನೋಡುತ್ತಿರುತ್ತೇವೆ. ಆದುದರಿಂದ, ಕೇವಲ ಸರ್ಕಾರದವರೇ ಬಸ್ಸುಗಳನ್ನು ಓಡಿಸುವುದಕ್ಕೆ ಬದಲು ಖಾಸಗಿಯವರೂ ಕೂಡ ಬಸ್ಸುಗಳನ್ನು ಓಡಿಸಲು ಪರವಾನಗಿಯನ್ನು ಕೊಡತಕ್ಕದ್ದು ಸೂಕ್ತವೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಅಂತರಾಜ್ಯದಲ್ಲಿ ಬಸ್ಸುಗಳನ್ನು ಓಡಿಸಲು ನಾವೇನೂ ಪರವಾನಗಿಯನ್ನು ಕೇಳುತ್ತಿಲ್ಲ. ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಆದರೂ ಖಾಸಗಿಯವರು ಬಸ್ಸುಗಳನ್ನು ಓಡಿಸಲು ಪರವಾನಗಿಯನ್ನು ಕೊಡಬೇಕೆಂದು ನಾನು ಸಲಹೆ ಕೊಡಬಯಸುತ್ತೇನೆ.

ಇನ್ನು ಸರ್ಕಾರೀ ನೌಕರರು 58ನೇ ವಯಸ್ಸಿಗೆ ನಿವೃತ್ತರಾಗತಕ್ಕ ವಿಚಾರದದಲ್ಲಿ ನಮ್ಮ ಸರ್ಕಾರ ತೆಗೆದುಕೊಂಡಿರುವ ನಿರ್ಧಾರ ನಿಜಕ್ಕೂ ಸಂತೋಷದಾಯಕವಾದುದೆಂದು ಹೇಳಬಯಸುತ್ತೇನೆ.

ಇನ್ನು ನ್ಯಾಯಾಂಗ ಇಲಾಖೆಯವರಿಗೆ ವಸತಿಗೃಹಗಳನ್ನು ಕಟ್ಟಿಸುವ ಸಲುವಾಗಿ ಒಂದು ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ಇಟ್ಟಿರುವುದರ ಜೊತೆಗೆ ಬಸ್ ಡ್ರೈವರ್ಸ್ ಇರಲಿ, ಕಂಡಕ್ಟರ್‌ಗಳಿರಲಿ, ಡಿ ಗ್ರೂಪ್‌ನ ಯಾವುದೇ ನೌಕರ ಇರಲಿ, ತರಕಾರಿ ಮಾರುವವನಿರಲಿ, ಆಟೋರಿಕ್ಷಾ ಓಡಿಸುವವನಿರಲಿ, ಕೂಲಿಗಳು ಇರಲಿ, ಎಲ್ಲರಿಗೂ ಕೂಡ ಗೃಹನಿರ್ಮಾಣ ಮಂಡಲಿಯಲ್ಲಿ ಕೆಲವು ವಿಶೇಷವಾದ ಸೌಲಭ್ಯಗಳನ್ನು ಕೊಟ್ಟಿರತಕ್ಕದ್ದು ಬಹಳ ಸ್ವಾಗತಾರ್ಹ ವಿಚಾರ. ಬೀಡಿ ಕಾರ್ಮಿಕರಿಗೂ ಕೂಡ ಮನೆಗಳನ್ನು ಕಟ್ಟಿಸುವ ಸಲುವಾಗಿ ಆಯವ್ಯಯದಲ್ಲಿ 16 ಲಕ್ಷ ರೂ.ಗಳನ್ನು ಇಟ್ಟಿರತಕ್ಕದ್ದು ಬಹಳ ಸಂತೋಷ ಸಂಗತಿ.

ಇನ್ನು ದೇವಸ್ಥಾನ, ಹರಿಜನಕೇರಿ, ಲಂಬಾಣಿ ತಂಡ, ಇವುಗಳಿಗೂ ಕೂಡ ಒಂದು ಕೋಟಿ ರೂ. ಯೋಜನೆಯನ್ನು ಆಯವ್ಯಯದಲ್ಲಿ ಇಟ್ಟಿದ್ದಾರೆ. ಅದೇ ರೀತಿ ವಕ್ಫ್ ಸಂಸ್ಥೆಗೂ ಕೂಡ 90 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಇವತ್ತು 6 ತಿಂಗಳಿಗೊಮ್ಮೆ ವೈದ್ಯಕೀಯ ತಪಾಸಣೆ ಮಾಡಿಸುವ ಸಲುವಾಗಿ ಏನು ಕಾರ್ಯಕ್ರಮ ಹಮ್ಮಿಕ್ಕೊಂಡಿದೆ. ಇದೂ ಕೂಡ ಬಹಳ ಸಂತೋಷದ ಸುದ್ದಿ. ನಿನ್ನೆಯ ದಿವಸ ಹಿರಿಯ ಸದಸ್ಯರಾದ ಮಾನ್ಯ ಘೋರ್ಪಡೆಯವರು ಹೇಳಿದಂತೆ ಜನಗಳೇ, ಈ ಸೌಲಭ್ಯಗಳು ಸಿಕ್ಕತಕ್ಕ ಜಾಗಗಳಿಗೆ ಹೋಗಿ ತಪಾಸಣೆಯನ್ನು ಮಾಡಿಸಿಕೊಂಡು ಬರಬೇಕೆಂದರೂ ಕೂಡ ಇವತ್ತು ಬಹಳ ಕಷ್ಟವಾಗುತ್ತಿದೆ. ಆದುದರಿಂದ, ಪಶುವೈದ್ಯಶಾಲೆಗಳಲ್ಲಿ ಯಾವ ರೀತಿ ಮೊಬೈಲ್ ಯೂನಿಟ್‌ಗಳನ್ನು ಇಟ್ಟಿದ್ದಾರೋ ಅದೇ ರೀತಿಯಲ್ಲಿ ಜನಗಳಿಗೂ ಕೂಡ ಸಂಚಾರಿ ದವಾಖಾನೆಗಳನ್ನು ತೆರೆಯುವುದು ಬಹಳ ಒಳ್ಳೆಯದೆಂದು ಹೇಳಬಯಸುತ್ತೇನೆ. ಈ ಉದ್ದೇಶಕ್ಕಾಗಿ ಆಯವ್ಯಯಪಟ್ಟಿಯಲ್ಲಿ ಒಂದು ಕೋಟಿ ರೂ. ಇಟ್ಟಿರುವುದು ಸಂತೋಷದ ಸಂಗತಿ.

ಇನ್ನು ಶಿಕ್ಷಣದ ವ್ಯವಸ್ಥೆಯಲ್ಲೂ ಕೂಡ ಬಹಳಷ್ಟು ಹಸ್ತಕ್ಷೇಪ ಜಿಲ್ಲಾ ಪರಿಷತ್ತುಗಳ ಆಡಳಿತದಲ್ಲಿ ಆಗುತ್ತಿದೆ. ಆದುದರಿಂದ ಇದನ್ನು ಸರ್ಕಾರದವರು ವಾಪಸ್ಸು ತೆಗೆದುಕೊಳ್ಳಬೇಕು

ಜಿಲ್ಲಾಪರಿಷತ್ತುಗಳಿಗೆ ಇನ್ನೂ ಹೆಚ್ಚಿನ ಇಲಾಖೆಗಳನ್ನು ಬೇಕಾದರೂ ಕೊಡಿ, ಆದರೆ ಇವರಿಂದ ಶಿಕ್ಷಣ ಇಲಾಖೆಯನ್ನು ಮಾತ್ರ ವಾಪಸ್ಸು ಸರ್ಕಾರದವರೇ ತೆಗೆದುಕೊಳ್ಳುವುದು ಬಹಳ ಉತ್ತಮ. "ಇಂದಿನ ಮಕ್ಕಳೇ ಮುಂದಿನ ನಾಗರೀಕರು". ಆದರೆ ಇವತ್ತು ಏನಾಗಿದೆ ಎಂದರೆ ನಮ್ಮ ಶಿಕ್ಷಣ ವ್ಯವಸ್ಥೆ ಅತ್ಯಂತ ಹದಗೆಟ್ಟಿದೆ. ಇದನ್ನು ಸುಧಾರಣೆ ಮಾಡಬೇಕಾದರೆ ನಾವು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ಇನ್ನೂ ಅನೇಕ ಚಿಂತನೆಯನ್ನು ಸರ್ಕಾರದವರು ಮಾಡತಕ್ಕದ್ದು ಅವಶ್ಯಕವೆಂದು ನಾನು ಹೇಳಬಯಸುತ್ತೇನೆ.

ಇನ್ನು ಬಹಳ ಮುಖ್ಯವಾದುದು ಎಂದರೆ ನೀರಾವರಿ. ನೀರಾವರಿಯ ಬಗ್ಗೆ ನಾವು ಹೆಚ್ಚಿನ ಗಮನವನ್ನು ಹರಿಸಬೇಕಾಗಿದೆ. ಬಚಾವತ್ ಅವಾರ್ಡ್ ಪ್ರಕಾರ 2000 ಇಸವಿಯೊಳಗೆ ನಮ್ಮ ಪಾಲಿನ ಎಲ್ಲ ನೀರನ್ನೂ ನಾವು ಉಪಯೋಗಿಸಿಕೊಳ್ಳಬೇಕಾಗಿದೆ. ಕೃಷ್ಣ ಮತ್ತು ಕಾವೇರಿ ಯೋಜನೆಗಳಿಗೆ ಹೆಚ್ಚಿನ ಹಣವನ್ನು ಒದಗಿಸಬೇಕಾಗಿದೆ. ಇವತ್ತು ನಮ್ಮ ಧಾರವಾಡ ಜಿಲ್ಲೆಯನ್ನು ತುಂಗ ಮೇಲ್ದಂಡೆ ಯೋಜನೆಯಿಂದ ವಿಶೇಷವಾಗಿ ಜನರು ವಂಚಿತರಾಗಿರುವುದು ದುರ್ದೈವ. ಮಾಸ್ತಿ ಜಲಾನಯವನ್ನು ಬಿಟ್ಟು ಈ ಯೋಜನೆಯನ್ನು ಕಾರ್ಯಗತಮಾಡುತ್ತಿರುವುದು ಬಹಳ ದುರದೃಷ್ಟಕರ ಸಂಗತಿ. ಆದ್ದರಿಂದ ಈ ಯೋಜನೆಯಲ್ಲಿ ಇವತ್ತು ಧಾರವಾಡ ಜಿಲ್ಲೆಯಲ್ಲಿ ಶರತ್, ಶಿಗ್ಗಾಂವ, ಮುಂಡರಗಿ, ಕಾವೇರಿ, ಹಾನಗಲ್ ಈ ಒಂದು ತಾಲ್ಲೂಕುಗಳೆಲ್ಲವೂ ಬಿಟ್ಟು ಸುಮಾರು 1,20,500 ಎಕರೆ ಕ್ಷೇತ್ರವನ್ನು ಕೂಡ ಈ ಯೋಜನೆಯಲ್ಲಿ ಬಿಟ್ಟು ಇವತ್ತು ನಮಗೆ 32.66 ಟಿ.ಎಂ.ಸಿ. ನೀರನ್ನು ನಾವು ಉಪಯೋಗ ಮಾಡಿಕೊಳ್ಳಬೇಕಾಗಿತ್ತು. ದುರ್ದೈವದಿಂದ ಯಾರೋ ಕಾಣದ ಕೈಗೆ ಸಿಕ್ಕಿಕೊಂಡು ಈ ಯೋಜನೆಯನ್ನು ಸಂಪೂರ್ಣವಾಗಿ ಜಾರಿಗೊಳಿಸದೆ ಕೇವಲ 271.41 ಕೋಟಿ ರೂಪಾಯಿಗಳ ಯೋಜನೆಯಲ್ಲಿ ಇವತ್ತು ತುಂಗಾ ಮೇಲ್ದಂಡೆ ಯೋಜನೆಯನ್ನು ಜಾರಿಗೊಳಿಸುವುದಕ್ಕೆ ಹೊರಟಿರುವುದು ಈ ಭಾಗದ ಸುಮಾರು 2,34,000 ಸಾವಿರ ಎಕರೆ ಜಮೀನಿಗೆ ಮತ್ತು 340 ಕಿಲೋಮೀಟರ್ ಉದ್ದವಿರುವಂಥ ಈ ಒಂದು ಕಾಲುವೆಗೆ ಮಾಲತಿ ಜಲಾನಯನ ಬಿಟ್ಟು ಈ ಯೋಜನೆಯನ್ನು ಜಾರಿಗೊಳಿಸುವುದಾದರೆ ಇದು ಎಷ್ಟರಮಟ್ಟಿಗೆ ಕಾರ್ಯಗತವಾಗುತ್ತದೆ ಮತ್ತು ಲಾಭವಾಗುತ್ತದೆ ಎನ್ನುವ ಬಗ್ಗೆ ತಾವು ಯೋಚನೆ ಮಾಡಬೇಕಾಗುತ್ತದೆ. 1984-85ರಲ್ಲಿ ಕೊಟ್ಟ ಸರ್ಕಾರದ ವರದಿ ಪ್ರಕಾರವೇ ಈ ಮಾಲತಿ ಜಲಾನಯನ ಪ್ರದೇಶವನ್ನು ಯಾವ ರಾಜಕೀಯ ಒತ್ತಡಕ್ಕೆ ಅಂತರಿಕವಾಗಿಯಾಗಲಿ, ಬಹಿರಂಗವಾಗಿಯಾಗಲಿ ಮರೆಯದೆ ಸಂಪೂರ್ಣವಾಗಿ ಈ ಯೋಜನೆಯನ್ನು ಕಾರ್ಯಗತಗೊಳಿಸುವುದಾದರೆ ಇವತ್ತು ನಮಗೆ ಸಿಗಬೇಕಾದಂಥ ಲಾಭಾಂಶ ಆ ಭಾಗದಲ್ಲಿರುವ ರೈತಬಾಂಧವರಿಗೆ, ಲಕ್ಷಾಂತರ ಜನರಿಗೆ ಅನುಕೂಲವಾಗುತ್ತದೆನ್ನುವ ಅಭಿಪ್ರಾಯವನ್ನು ಮಂಡನೆ ಮಾಡುತ್ತೇನೆ. ಆದ್ದರಿಂದ ಈ ಒಂದು ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುವ ಪೂರ್ವಭಾವಿಯಲ್ಲಿ ಮಾಲತಿ ಜಲಾನಯನವನ್ನು ಒಳಗೊಂಡು ಈ ಒಂದು ಅಣೆಕಟ್ಟೆಯನ್ನು ನಿರ್ಮಾಣ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ ಈಗಾಗಲೇ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯನ್ನು ಮಾಡತಕ್ಕಂಥ ಸಂದರ್ಭದಲ್ಲಿ ಈ ಹುಬ್ಬಳ್ಳಿ, ಧಾರವಾಡದಲ್ಲಿ ಹೈಕೋರ್ಟ್ ಆಗಬೇಕೆಂದು ನಾನು ವಿನಂತಿಯನ್ನು ಮಾಡಿಕೊಂಡಿದ್ದೆ. ಆ ಒಂದು ಯೋಜನೆಯನ್ನು ಕೂಡ ಕಾರ್ಯಗತ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಜಿಲ್ಲಾ ಪುನರ್‌ಘಟನೆಯನ್ನು ಕೂಡ ಆಡಳಿತ ವ್ಯವಸ್ಥೆಯ ದೃಷ್ಟಿಯಿಂದ ಮಾಡುತ್ತಿದ್ದೇವೆ. ಹಾವೇರಿಯೂ ಕೂಡ ಧಾರವಾಡದಲ್ಲಿ ಭೌಗೋಳಿಕವಾಗಿ ದೊಡ್ಡ ಕ್ಷೇತ್ರ. ರಾಷ್ಟ್ರೀಯ ಹೆದ್ದಾರಿಯಲ್ಲಿರತಕ್ಕಂಥ ಕ್ಷೇತ್ರ. ಅಲ್ಲೂ ಕೂಡ ತುಂಗಭದ್ರಾ, ವರದಾ ನದಿ, ಬರ್ಮಾ ನದಿ, ಹರಿಯುತ್ತಿರುವುದರಿಂದ ಈ ಭಾಗದ ಜನರಿಗೆ

ಆಡಳಿತದೃಷ್ಟಿಯಿಂದ ಅನುಕೂಲವಾಗುವುದರಿಂದ ಈ ಧಾರವಾಡ ಜಿಲ್ಲೆಯನ್ನು ಪುನರ್‌ಸಂಘಟನೆ ಮಾಡತಕ್ಕಂಥ ಸಂದರ್ಭದಲ್ಲಿ ಕಾವೇರಿಯನ್ನು ಒಂದು ಜಿಲ್ಲೆಯನ್ನಾಗಿ ಪರಿಗಣಿಸಬೇಕೆಂದು ಒಂದು ಮನವಿಯನ್ನು ನಾನು ಮಾಡಿಕೊಳ್ಳುತ್ತೇನೆ.

ಇನ್ನು ಅನೇಕ ಸಮಸ್ಯೆಗಳನ್ನು ಚರ್ಚೆ ಮಾಡಬೇಕಾಗಿದೆ. ಆದರೆ ನಮ್ಮ ಹಿರಿಯರು ಇಷ್ಟು ಸಮಯಾವಕಾಶ ಮಾಡಿಕೊಟ್ಟಿದ್ದರಿಂದ ನಾನು ಅವರಿಗೆ ವಂದಿಸಿ ತಾವು ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದಮೇಲೆ ಮಾತನಾಡುವಾಗಲಾಗಲಿ, ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿಯಾಗಲೀ ಮತ್ತೆ ಬಜೆಟ್ ಬಗ್ಗೆ ಚರ್ಚೆಯಾಗುತ್ತಿರುವಾಗಲಿ, ಆ ಸಮಯದಲ್ಲಿ ಈ ಸದನದಲ್ಲಿ ಕುಳಿತು ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅನಿವಾರ್ಯವಾಗಿ ಸಾಧ್ಯವಾಗಲಿಲ್ಲ. ಆದರೆ ಒಂದು ಮಾತ್ರ ಹೇಳಬಯಸುತ್ತೇನೆ. ಈ ಸರ್ಕಾರ ಗ್ರಾಮೀಣ ಜನತೆಯ ಜೊತೆಗೆ, ರೈತರ ಜೊತೆಗೆ, ಬಡವರ ಜೊತೆಗೆ ಚೆಲ್ಲಾಟವಾಡಲು ಪ್ರಯತ್ನ ಮಾಡುತ್ತಿದೆ. ಸರ್ಕಾರದವರು ಹೇಳಿಕೆಯನ್ನು ಕೊಟ್ಟಿರುವ ಪ್ರಕಾರ ಈ ರಾಜ್ಯದ 15 ಜಿಲ್ಲೆಗಳಲ್ಲಿ 110 ತಾಲ್ಲೂಕುಗಳಲ್ಲಿ ಭೀಕರವಾದ ಬರಗಾಲವಿದೆ. ಸನ್ಮಾನ್ಯ ಅಧ್ಯಕ್ಷರೇ, ನಾವು ಕಳೆದ 4-5 ದಿವಸಗಳಿಂದ 8-9 ಜಿಲ್ಲೆಗಳಲ್ಲಿ ಪ್ರವಾಸ ಮಾಡುವಂಥ ಒಂದು ಅವಕಾಶ ಸಿಕ್ಕಿತ್ತು. ಅಲ್ಲಿ ಎಲ್ಲ ವಿಧವಾದ ಬಡವರ ಜೊತೆಯಲ್ಲಿ ಮಾತನಾಡತಕ್ಕಂಥ ಅವಕಾಶ ಸಿಕ್ಕಿತ್ತು. ಕುಡಿಯುವ ನೀರಿನ ವಿಚಿತ್ರವಾದಂಥ ಒಂದು ಸಮಸ್ಯೆಯನ್ನು ಕಣ್ಣಾರೆ ನೋಡಿದ್ದಾಯಿತು. ಕೃಷಿ ಕಾರ್ಮಿಕರಿಗೆ ಉದ್ಯೋಗವನ್ನು ಎಲ್ಲೂ ಕೂಡ ಒದಗಿಸಿಕೊಟ್ಟಿಲ್ಲ. ಹಳ್ಳಿಗಳಲ್ಲಿ ಕೆಲಸ ಮಾಡುವಂಥ ಕೃಷಿಕಾರ್ಮಿಕರು ಬರಗಾಲದ ಅಡಿಯಲ್ಲಿ ಕೆಲಸ ಮಾಡುತ್ತಿರಬೇಕಾದರೆ ಅವರ್‍ಯಾರಿಗೂ ದುಡ್ಡನ್ನು ಸರ್ಕಾರದವರು ಬಿಡುಗಡೆ ಮಾಡಿಲ್ಲ. ಇನ್ನು ರೈತರ ಸಾಲಮನ್ನಾ ಮಾಡುವ ಬಗ್ಗೆ ಪದೇ ಪದೇ ಕಳೆದ ಒಂದೂವರೆ ವರ್ಷ ಸತತವಾಗಿ ಈ ಸದನದ ಮೂಲಕ ಒಳಗೆ ಮತ್ತು ಹೊರಗೆ ಹೋರಾಟ ಮಾಡಿ ರೈತರ ಪರಿಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತರುವಂಥ ಎಲ್ಲಾ ಪ್ರಯತ್ನಗಳನ್ನು ಮಾಡಿದೆವು. ಒಂದು ಜವಾಬ್ದಾರಿ ಸರ್ಕಾರ ಯಾವುದಾದರೂ ಇದ್ದರೆ, ಆ ಸರ್ಕಾರಕ್ಕೆ ರೈತರ ಬಗ್ಗೆ ಬಡವರ ಬಗ್ಗೆ ಕಳಕಳಿ ಇದ್ದರೆ ಕೇಂದ್ರ ಸರ್ಕಾರ ತಂದಿರುವ ಯೋಜನೆಯನ್ನು ರಾಜ್ಯದ ರೈತರಿಗೆ ತಲುಪಿಸುವಂತ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿತ್ತು. ಉದಾಹರಣೆಗೆ ಹೇಳಬೇಕೆಂದರೆ, ಯಾರು ಬ್ಯಾಂಕಿನ ಸಾಲ ತೆಗೆದುಕೊಂಡಿದ್ದಾರೆ ಅದನ್ನು ಮನ್ನಾ ಮಾಡುವ ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿತು. ಆದರೆ ಬೇರೆ ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಕರ್ನಾಟಕ ರಾಜ್ಯದಲ್ಲಿ ನ್ಯಾಷನಲೈಸ್ಡ್ ಬ್ಯಾಂಕ್ ಬಿಟ್ಟು ಕರ್ನಾಟಕ ಬ್ಯಾಂಕ್, ವೈಶ್ಯ ಬ್ಯಾಂಕುಗಳು ಏನಿವೆ, ಅಲ್ಲಿ ಯಾರು ಸಾಲ ಪಡೆದಿದ್ದಾರೆ? ಆ ಎಲ್ಲಾ ರೈತರಿಗೆ ಸಾಲ ಮನ್ನಾ ಆಗಲಿಲ್ಲ. ಬಹುಶಃ ಈ ಸರ್ಕಾರಕ್ಕೆ ಬಿಡುವು ಇಲ್ಲ ಎಂದು ಅನ್ನಿಸುತ್ತದೆ. ರೈತರು ನ್ಯಾಷನಲೈಸ್ಡ್ ಅಲ್ಲದಂತಹ ಬ್ಯಾಂಕುಗಳಿಂದ ಏನು ಸಾಲ ಪಡೆದಿದ್ದಾರೆ, ಆ ರೈತರಿಗೂ ಸಾಲ ಮನ್ನಾ ಆಗಬೇಕು. ಈ ಬಗ್ಗೆ ಕೇಂದ್ರಕ್ಕೆ ಪತ್ರ ಬರೆಯಿರಿ. ಎಂದರೆ ಉತ್ತರವಿಲ್ಲ. ಹತ್ತು ಸಾವಿರ ರೂಪಾಯಿಗಳವರೆಗಿನ ಸಾಲವನ್ನು ಮನ್ನಾ ಮಾಡಬೇಕೆಂದಾಗ ಸರ್ಕಾರ ಸಾಲ ವಸೂಲಿ ಬಗ್ಗೆ ತಡೆಯಾಜ್ಞೆ ನೀಡಿತ್ತು. ಈ ದಿಸೆಯಲ್ಲಿ ಮುಖ್ಯಮಂತ್ರಿಗಳು ಸ್ವತಃ ಪ್ರಧಾನಿಯವರಿಗೆ ಪತ್ರ ಬರೆದಿದ್ದಾರೆ. ಭೇಟಿ ಮಾಡಿದ್ದಾರೆ. ಕೇಂದ್ರ ಸರ್ಕಾರ ವಿಧಿಸಿರುವಂತಹ ಷರತ್ತುಗಳನ್ನು ಯಾವುದನ್ನೂ ನೋಡಿದ ರಾಜ್ಯದ ರೈತನಿಗೆ ಅನುಕೂಲ ಮಾಡಿಕೊಡುತ್ತೇವೆಂದು ಭರವಸೆ ಕೊಟ್ಟರು. ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಯೋಚನೆ ಮಾಡಿದಾಗ ಇವರಿಗೆ ಲೋಕಸಭಾ

ಚುನಾವಣೆಯನ್ನು ಎದುರಿಸುವುದಕ್ಕೆ ಸಾಧ್ಯವಾಗುವುದಿಲ್ಲ ಅನ್ನಿಸುತ್ತದೆ. ಅನೇಕ ಲೋಕಸಭಾ ಚುನಾವಣೆಗಳಲ್ಲಿ ರಾಜ್ಯದ ಮತದಾರ ಕಾಂಗ್ರೆಸ್‌ನ್ನು ಗೆಲ್ಲಿಸಿಕೊಂಡು ಬಂದು ಇವತ್ತು ಅದೇ ಮತದಾರ ತಿರುಗಿ ಬಿದ್ದಿದ್ದಾನೆಂದು ಸರ್ಕಾರದ ಗಮನಕ್ಕೆ ಬಂದಿದೆ. ಹೀಗಾಗಿ ಲೋಕಸಭಾ ಚುನಾವಣಾ ಸಂದರ್ಭದಲ್ಲಿ ವಿಧಾನಸಭೆಯನ್ನು ವಿಸರ್ಜನೆ ಮಾಡುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ ಎಂಬುದು ಜನಜನಿತವಾಗಿದೆ. ಆ ಕಡೆಯ ಹಿರಿಯ ಸಚಿವರು ಮತ್ತು ಶಾಸಕರು ಹೇಳುತ್ತಿದ್ದಾರೆ. ಯಾವ ರಾಜ್ಯದ ರೈತ, ಕೂಲಿ ಕಾರ್ಮಿಕ, ಹರಿಜನಗಿರಿಜನ ಬಂಧು, ಇವರುಗಳು ಏನು 15 ತಿಂಗಳ ಹಿಂದೆ ಸರ್ಕಾರವನ್ನು ಒಪ್ಪಿ ನಂಬಿ ಏನಾದರೂ ಬದಲಾವಣೆ ತರಬಹುದೆಂದು ಬಹುಮತ ಕೊಡುವ ಪ್ರಯತ್ನ ಮಾಡಿದನೋ ಆ ರೈತನನ್ನು, ಬಡವನನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೆ.

ಅದಕೋಸ್ಕರ ತಮ್ಮ ಮೂಲಕ ಒತ್ತಾಯಿಸುತ್ತಿದ್ದೇನೆ. ಕೇಂದ್ರ ಸರಕಾರ ವಿಧಿಸಿರುವಂತಹ ಯಾವುದೇ ಷರತ್ತಿಲ್ಲದೇ ಈ ರಾಜ್ಯ ಸರ್ಕಾರ ಮತ್ತು ಸಾವಿರ ರೂಪಾಯಿಗಳವರೆಗೆ ಇರುವ ಎಲ್ಲಾ ಸಾಲವನ್ನು ಮನ್ನಾ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಮುಖ್ಯಮಂತ್ರಿಗಳು ಪ್ರಧಾನಿಯವರಿಗೆ ಏನು ಪತ್ರ ಬರೆದಿದ್ದಾರೆಂಬುದನ್ನು ಸದನದಲ್ಲಿ ಇಡಿ ಎಂಬುದಕ್ಕೆ ಮುಖ್ಯಮಂತ್ರಿಗಳು ಒಪ್ಪಿಲ್ಲ. ಅವರಿಂದ ಏನು ಉತ್ತರ ಬಂತು ಅದನ್ನು ತಿಳಿಸಿಲ್ಲ. ರೈತರ ಜೊತೆ ಚದುರಂಗ ಆಡಿಕೊಂಡು ದ್ರೋಹ ಮಾಡುವ ಕೆಲಸ ನಡೆಯುತ್ತಿದೆ. ಚುನಾವಣೆ ಹತ್ತಿರ ಬಂತು ಎಂದೋ ಏನೋ ಬಜೆಟ್ಟಿನಲ್ಲಿ ಹೊಸ ಹೊಸ ಘೋಷಣೆಗಳನ್ನು ಮಾಡಿದ್ದಾರೆ. ಒಂದು ಉದಾಹರಣೆ ಕೊಡುವುದಾದರೆ, ಹಳ್ಳಿಯಲ್ಲಿರುವ ಆಸ್ಪತ್ರೆಗಳಲ್ಲಿ ಅಲ್ಲಿಗೆ ಬರುವಂತಹ ರೋಗಿಗಳಿಗೆ ಸರಿಯಾಗಿ ಔಷಧಿ ಕೊಡುವುದಕ್ಕೆ ಈ ಸರ್ಕಾರಕ್ಕೆ ಸಾಧ್ಯವಿಲ್ಲದಿರುವಾಗ, ರಾಜ್ಯದಲ್ಲಿರುವ ಎಲ್ಲಾ ಜನರಿಗೂ 6 ತಿಂಗಳಿಗೊಮ್ಮೆ ಮೆಡಿಕಲ್ ಚೆಕಪ್ ಮಾಡಿಸುತ್ತೇನೆಂದು ಹೇಳಿದ್ದಾರೆ. ಅದಕ್ಕೆ ತೆಗೆದಿಟ್ಟಿರುವುದು ಕೇವಲ ಒಂದು ಕೋಟಿ ರೂಪಾಯಿ. ಒಬ್ಬನಿಗೆ ಮೆಡಿಕಲ್ ಚೆಕ್ ಅಪ್ ಮಾಡಬೇಕೆಂದರೆ 50 ರೂಪಾಯಿ ಖರ್ಚಾಗುತ್ತದೆಂದರೆ 4 ಕೋಟಿ ಜನರಿಗೆ 200 ಕೋಟಿ ರೂಪಾಯಿ ಬೇಕಾಗುತ್ತದೆ. ಇವರು ಇಟ್ಟಿರುವುದು ಕೇವಲ ಒಂದು ಕೋಟಿ. ಸರ್ಕಾರ ಪ್ರತಿಯೊಂದು ತಾಲ್ಲೂಕಿನಲ್ಲೂ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿದೆ. ಒಂದು ತಾಲ್ಲೂಕಿನಲ್ಲಿ ನೀವು ಹೇಳಿರುವಷ್ಟು ಮನೆಗಳನ್ನು ಕಟ್ಟುವುದಕ್ಕೆ ಒಂದು ಕೋಟಿ ರೂಪಾಯಿ ಬೇಕು. ಅಂದಾಗ 175 ತಾಲ್ಲೂಕುಗಳಲ್ಲಿ ಮನೆ ಕಟ್ಟಿಸಿಕೊಡುವುದಕ್ಕೆ 175 ಕೋಟಿ ರೂಪಾಯಿ ಬೇಕಾಗುತ್ತದೆ. ಈ ರೀತಿ ಜನತೆಗೆ ಬಜೆಟ್ ಮಂಡಿಸುವ ಸಂದರ್ಭದಲ್ಲಿ ಏನು ಸಾಧ್ಯವಿಲ್ಲವೋ ಆ ರೀತಿ ಬಜೆಟ್ ಮಂಡನೆ ಮಾಡಿ ಅನ್ಯಾಯ ಮಾಡುವ ಪ್ರಯತ್ನ ಮಾಡುತ್ತಿದೆ; ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಶೌಚಾಲಯಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿದ್ದರು. ಅದು ಎಲ್ಲಾ ಪತ್ರಿಕೆಗಳಲ್ಲಿ ಬಂತು. ಈಗ ಏನಾಗಿದೆ ಎಂದು ಗೊತ್ತಿಲ್ಲ. ಶಾಸಕರಿಗೆ 15 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ, ಅವರು ತಮ್ಮ ಕ್ಷೇತ್ರದಲ್ಲಿ ರಸ್ತೆ ಮಾಡಿಸಿಕೊಳ್ಳಬಹುದು. ಮತ್ತೊಂದು ಮಾಡಿಸಿಕೊಳ್ಳಬಹುದೆಂದು ಹೇಳಿದರು. ಅನೇಕ ತಾಲ್ಲೂಕುಗಳಲ್ಲಿ ಇನ್ನೂ ಕೆಲಸ ಪ್ರಾರಂಭವಾಗಿಲ್ಲ, ದುಡ್ಡು ಬಿಡುಗಡೆಯಾಗಿಲ್ಲ. ಮಾರ್ಚ್ ಕೊನೆಯ ಭಾಗದಲ್ಲಿ ಅಧಿಕಾರಿಗಳು ಹಗಲು ರಾತ್ರಿ ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳಲ್ಲಿ ಕೆಲಸ ಮಾಡಬೇಕು. ಇವತ್ತು ಹಣ ಬಿಡುಗಡೆ ಆಗದೆ ಒಂದು ಕಡೆ ಬರಗಾಲ ಕಾಮಗಾರಿ ಕೆಲಸಗಳು ಆಗುತ್ತಿಲ್ಲ, ಪಿ.ಡಬ್ಲ್ಯು.ಡಿ. ಇರಿಗೇಷನ್, ಬೇರೆ ಬೇರೆ ಇಲಾಖೆಗಳಲ್ಲಿ ರೆಗ್ಯುಲರ್ ಕೆಲಸ ಆಗಬೇಕಾದ್ದೂ ನಿಂತುಹೋಗಿದೆ. ಈ ರೀತಿ ಸರ್ಕಾರ ದಿವಾಳಿಯಾಗಿದೆ ಎನ್ನುವಂಥದ್ದು ರಾಜ್ಯದ ಜನರಿಗೆ ಮನದಟ್ಟಾಗಿದೆ. 15 ತಿಂಗಳಿಂದ ಸತತವಾಗಿ ಈ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ ಹಣವನ್ನು ಆ ಕಡೆ ವಿಶೇಷವಾಗಿ ಗಮನಕೊಟ್ಟು ಬೊಕ್ಕಸವನ್ನು ತುಂಬುವಂಥ ಕೆಲಸ ಹಿಂದಿದ್ದಂಥ

ಸನ್ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಏನು ಪ್ರಯತ್ನ ನಡೆಯಿತು ಅದರ ಬಗ್ಗೆ ದಿವ್ಯ ನಿರ್ಲಕ್ಷ್ಯವನ್ನು ಇವರು ವಹಿಸಿ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ ಹಣ ಸೋರಿಹೋಗುತ್ತಿದೆ. ಕೋಟಿಗಟ್ಟಲೆ ಎಲ್ಲ ರಂಗಗಳಲ್ಲೂ ಲೂಟಿ ಮಾಡುತ್ತಿದ್ದಾರೆ ಎನ್ನುವಂಥ ಭಾವನೆ ಇವತ್ತು ಜನರಲ್ಲಿ ಮೂಡುತ್ತಿದೆ. ಈ ರೀತಿ ಒಂದು ಕೆಟ್ಟ ವಾತಾವರಣ ಇವತ್ತು ರಾಜ್ಯದಲ್ಲಿದೆ. ಅದಕೋಸ್ಕರ ಸನ್ಮಾನ್ಯ ಅಧ್ಯಕ್ಷರೆ, ಯಾವ ಬಜೆಟ್‌ನಲ್ಲಿ ಈ ರಾಜ್ಯದ ಜನರ ಬಗ್ಗೆ, ಮಧ್ಯಮ ವರ್ಗದ ಜನರ ಬಗ್ಗೆ, ಶ್ರೀಸಾಮಾನ್ಯನ ಬಗ್ಗೆ, ರೈತರ ಬಗ್ಗೆ ಮತ್ತು ಹರಿಜನಗಿರಿಜನರಿಗೆ ಅನುಕೂಲವಾಗುವ ಒಂದು ಬಜೆಟ್ ಮಂಡನೆ ಮಾಡಿಲ್ಲವೋ ಕೇವಲ ಚುನಾವಣೆಯನ್ನು ಮುಂದಿಟ್ಟುಕೊಂಡು ಕೇವಲ ಪ್ರಚಾರಕೋಸ್ಕರ ಆಗದೇ ಇರುವಂಥ ಆಶ್ವಾಸನೆ ಕೊಡುವಂಥ ಬಜೆಟ್ಟನ್ನು ಏನು ಮಂಡನೆ ಮಾಡಿದ್ದಾರೆ. ಇದನ್ನು ಸಂಪೂರ್ಣವಾಗಿ ನಮ್ಮ ಪಕ್ಷ ವಿರೋಧ ಮಾಡುತ್ತದೆ. ಮತ್ತು ಇವತ್ತು ಯಾವ ರೈತನ ಸಾಲ ಮನ್ನಾ ಬಗ್ಗೆ ಆಶ್ವಾಸನೆ ಕೊಟ್ಟು ನನ್ನ ಸಾಲ ಮನ್ನಾ ಆಗುತ್ತದೆ, ಕೊನೇಪಕ್ಷ ನನ್ನ ಕಾಲಮೇಲೆ ನಾನು ನಿಂತುಕೊಳ್ಳಬಹುದು, ನಾನು ಋಣಮುಕ್ತನಾಗಬಹುದು ಎಂದು ಆಸೆ ಇಟ್ಟುಕೊಂಡಿರುವ ಕೋಟ್ಯಾಂತರ ರೈತರಿಗೆ ಆಶ್ವಾಸನೆಯಾಗಿಯೇ ಉಳಿದಿದೆ. ನನ್ನ ದೃಷ್ಟಿಯಲ್ಲಿ ಬಹುಶಃ ಲೋಕಸಭಾ ಚುನಾವಣೆಯವರೆಗೆ ಇವರು ತಡೆದರೆ ಲೋಕಸಭಾ ಚುನಾವಣೆ ಆದಮೇಲೆ ಕಾಂಗ್ರೆಸ್ ರಾಜ್ಯದಲ್ಲಿ ಧೂಳೀಪಟ ಆಗುತ್ತದೆ. ಇದರ ಪರಿಣಾಮ ವಿಧಾನಸಭೆ ವಿಸರ್ಜನೆ ಮಾಡುವಂಥ ಸಂದರ್ಭ ಬರುತ್ತದೆ. ಈಗ ಅದಕ್ಕೇನು ಅವರು ಚಿಂತನೆ ಮಾಡುತ್ತಿದ್ದಾರೆ? ಲೋಕಸಭೆ ಚುನಾವಣೆ ಜೊತೆಜೊತೆಗೇ ವಿಧಾನಸಭೆಯನ್ನೂ ವಿಸರ್ಜನೆ ಮಾಡಬೇಕು ಎನ್ನುವಂಥ ಪ್ರಯತ್ನ ನಡೆಯುತ್ತಿದೆ. ಇವತ್ತು 2/3 ಕ್ಕಿಂತ ಹೆಚ್ಚು ಮೆಜಾರಿಟಿಯನ್ನು ಕೊಟ್ಟಿದ್ದರೂ ಸಹ ಪರಸ್ಪರ ಮಂತ್ರಿ ಸ್ಥಾನಕ್ಕೆ, ಬೇರೆಬೇರೆ ಸ್ಥಾನಮಾನಗಳಿಗೆ ಬಡಿದಾಡುತ್ತಾ ಜನಹಿತವನ್ನು ಮರೆತು ಇವತ್ತು ಜನತೆಗೆ ದ್ರೋಹ ನಡೆಯುತ್ತಿದೆ. ಮತ್ತೊಂದು ಕಡೆ ಯಾವುದೇ ಅಧಿಕಾರಿ, ಉನ್ನತ ಅಧಿಕಾರಿಗಳು ಪ್ರಾಮಾಣಿಕರಿದ್ದರೂ ಅಂಥ ಪ್ರಾಮಾಣಿಕರಿಗೆ ಸರಿಯಾದ ಅವಕಾಶಗಳು ಸಿಗದೆ ಭ್ರಷ್ಟರನ್ನು, ಸರ್ಕಾರದ ಬೊಕ್ಕಸಕ್ಕೆ ಬರುವಂಥ ಹಣವನ್ನು ಲೂಟಿ ಮಾಡುವುದಕ್ಕೆ ಪ್ರಯತ್ನ ಯಾರು ಮಾಡಿದರೋ ಅಂಥವರಿಗೆ ಹೆಚ್ಚಿನ ಸ್ಥಾನಮಾನಗಳು ಕೊಡುವಂಥ ವ್ಯವಸ್ಥಿತವಾದ ಒಂದು ಷಡ್ಯಂತ್ರ ಈ ಸರ್ಕಾರದಿಂದ ನಡೆಯುತ್ತಿದೆ. ಹೀಗಾಗಿ ಇದು ಜನ ವಿರೋಧಿ, ರೈತವಿರೋಧಿ ಸರ್ಕಾರ ಆಗುತ್ತದೆ. ಒಂದು ಕ್ಷಣ ಇವತ್ತು ಇವರು ಅಧಿಕಾರದಲ್ಲಿ ಮುಂದುವರೆಯುವುದು ಖಂಡಿತ ಸರಿಯಲ್ಲ. ಜನತೆಗೆ ದ್ರೋಹ ಮಾಡಿದಂಥ ಸರ್ಕಾರ ತಕ್ಷಣ ರಾಜೀನಾಮೆ ಕೊಡಬೇಕು ಎಂದು ಒತ್ತಾಯ ಮಾಡುತ್ತಾ ಈಗಲಾದರೂ ಈ ರಾಜ್ಯದ ರೈತರ 10 ಸಾವಿರ ರೂಪಾಯಿವರೆಗಿನ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು. ಮನ್ನಾ ಮಾಡದೇ ಇದ್ದರೆ ಬಹುಶಃ ನಾಳೆ ನೀವು ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಹಳ್ಳಿಗಳಿಗೆ ಹೋದಾಗ ಜನ ಸರಿಯಾಗಿ ಪಾಠ ಕಲಿಸಿಕೊಡುವಂಥ ಶಕ್ತಿ ಇದೆ ಎಂಬುದನ್ನು ಮನವರಿಕೆ ಮಾಡುತ್ತಾ ಈ ರೀತಿ ಯಾವ ಒಂದು ಬಜೆಟ್‌ನಲ್ಲಿ ರೈತನ ಸಾಲ ಮನ್ನಾ ಮಾಡುವುದರ ಬಗ್ಗೆ ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಲಿಲ್ಲ. ಅಂಥ ಒಂದು ಬಜೆಟ್ ಬಗ್ಗೆ ಯಾವುದೇ ಹೆಚ್ಚಿನ ಮಾತನಾಡುವುದಕ್ಕೆ ಇಚ್ಛೆಪಡುವುದಿಲ್ಲ. ಈ ಒಂದು ರೈತ ವಿರೋಧಿ ಸರ್ಕಾರವನ್ನು ಪ್ರತಿಭಟನೆ ಮಾಡಿ ಈ ಬಜೆಟ್‌ನಲ್ಲಿ ಯಾವುದೇ ಒಂದು ಸ್ಪಷ್ಟವಾದ ಒಂದು ಚಿತ್ರ ಇಟ್ಟುಕೊಳ್ಳದೆ ರೈತನ ದ್ರೋಹಿ, ರೈತ ವಿರೋಧಿ ಸರ್ಕಾರವನ್ನು ಪ್ರತಿಭಟನೆ ಮಾಡಿ ನಾನು ಹೊರಗಡೆ ಹೋಗುತ್ತಿದ್ದೇನೆ ಸ್ವಾಮಿ. ಈ ಬಜೆಟ್‌ನಲ್ಲಿ ಯಾವ ವಿಷಯವೂ ಇಲ್ಲ. ಅದಕ್ಕಾಗಿ ಸರ್ಕಾರದ ನೀತಿಯನ್ನು ಪ್ರತಿಭಟನೆ ಮಾಡಿ ನಾನು ಹೊರಗೆ ಹೋಗುತ್ತಿದ್ದೇನೆ.

(ಮಾನ್ಯ ಸದಸ್ಯರು ಸಭಾ ತ್ಯಾಗ ಮಾಡಿದರು)

ಅಧ್ಯಕ್ಷರು : ಈಗ ಅರ್ಧ ಗಂಟೆ ಕಾಲದ ಚರ್ಚೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೇ, ಬೆಳಿಗ್ಗೆ ಒಂಭತ್ತೂವರೆಗೆ ಸಭೆ ಸೇರಿದ್ದುದು ಸೋಮವಾರ ಇದನ್ನು ತೆಗೆದುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : 10 ಗಂಟೆಗೆ ಸೇರಿ 11 ಗಂಟೆಯವರೆಗೆ ಉಪನಾಯಕರು ಭಾಷಣ ಮಾಡಬಹುದು.

ಅಧ್ಯಕ್ಷರು : ಅದು ಸೋಮವಾರದ ವ್ಯವಹಾರ. ಈಗ ಅರ್ಧ ಗಂಟೆ ಕಾಲದ ವ್ಯವಹಾರ ಇದು.

ಶ್ರೀ ಎಂ. ವೀರಪ್ಪ ಮೊಯಿಲಿ : ಅದು ಅವರಿಗೆ ಬಿಟ್ಟಿದ್ದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ದಯವಿಟ್ಟು ಅದನ್ನು ಸೋಮವಾರ ತೆಗೆದುಕೊಳ್ಳಬಹುದು.

ಅಧ್ಯಕ್ಷರು : ಅದನ್ನು ಸೋಮವಾರ ತೆಗೆದುಕೊಳ್ಳೋಣ ಎನ್ನುತ್ತೀರಾ?

ಶ್ರೀ ಹೆಚ್. ಏಕಾಂತಯ್ಯ : ಬೆಳಿಗ್ಗೆಯಿಂದ ಕುಳಿತ್ತಿದ್ದೇನೆ.

ಅಧ್ಯಕ್ಷರು : ನನ್ನ ಸಹಾನುಭೂತಿ ನಿಮಗೆ ಸಂಪೂರ್ಣವಾಗಿ ಇದೆ. ನೀವೂ ನಾಲ್ಕು ಜನ ಇಲ್ಲದಿದ್ದರೆ ಬಹಳ ಕಷ್ಟವಾಗುತ್ತಿತ್ತು.

ಶ್ರೀ ವಾಟಾಳ್ ನಾಗರಾಜ್ : ಸಹಾನುಭೂತಿ ಜೊತೆಗೆ ಇನ್ನೇನಾದರೂ ಯೋಚನೆ ಮಾಡಿ.

ಅಧ್ಯಕ್ಷರು : ಬಂದರೆ ಕಾಫಿ ಕೊಡಿಸುತ್ತೇನೆ. ಈಗ ಸದನ ಮುಂದುವರೆದು ಸೋಮವಾರ ಮತ್ತೆ ಬೆಳಿಗ್ಗೆ 10 ಘಂಟೆಗೆ ಸಮಾವೇಶವಾಗುತ್ತದೆ.

(ಸದನವು 5.50ಕ್ಕೆ ಮುಕ್ತಾಯವಾಗಿ ಮತ್ತೆ ಸೋಮವಾರ, ದಿನಾಂಕ 25-3-1991ರಂದು ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)

(+ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಲಿಲ್ಲ ಎಂದು ಸೂಚಿಸುತ್ತದೆ.)